
# ಆಸ್ತಿಕತೆಯ ವಿಕಾಸ

## ಶೂನ್ಯವಾದದಿಂದ ಶರಣಾಗತಿವರೆಗೆ



ಶ್ರೀಪಾದ ಸ್ವಾಮಿ ನರಸಿಂಹ

# ಆಸ್ತಿಕತೆಯ ವಿಕಾಸ

## ಶೂನ್ಯದಿಂದ ಶರಣಾಗತಿಯವರೆಗೆ

ಗೋಸಾಯಿ ಪಬ್ಲಿಷರ್ಸ್

ಆಸ್ತಿಕತೆಯ ವಿಕಾಸ – ಕನ್ನಡ ಅನುವಾದ,

ಆಂಗ್ಲಮೂಲ – Evolution of Theism,

ಗ್ರಂಥ ಕರ್ತರು – ಶ್ರೀಪಾದ ಸ್ವಾಮಿ ನರಸಿಂಘ

ಪ್ರಕಾಶಕರು – ಗೋಸಾಯಿ ಪಬ್ಲಿಷರ್ಸ್,
ಶ್ರೀ ನರಸಿಂಘ ಚೈತನ್ಯ ಮಠ, ದೊಡ್ಡಗೋಸಾಯಿ ಘಟ್ಟ,
ಗಂಜಾಮ್, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ, ೫೭೧ ೪೩೮

ಈ ಪುಸ್ತಕದ ವಿಷಯದಲ್ಲಿ ಆಸಕ್ತರಾದ ಓದುಗರು ಮೇಲ್ಕಂಡ ವಿಳಾಸದಲ್ಲಿ ಕಾರ್ಯದರ್ಶಿಯವರೊಂದಿಗೆ ಸಂಪರ್ಕಿಸಬಹುದು.

ಕನ್ನಡ ಅನುವಾದ
ಶ್ಯಾಮಸುಂದರದಾಸ
ಚೈತನ್ಯದಾಸ

ಹಕ್ಕುಗಳನ್ನು ಕಾದಿರಿಸಲಾಗಿದೆ
ಗೋಸಾಯಿ ಪಬ್ಲಿಷೆರ್ಸ್ ೨೦೦೯

# ವಿಷಯ ಸೂಚಿ


| | | |
|---|---|---|
| ಅರ್ಪಣೆ–ಅನುವಾದಕರಿಂದ | | v |
| ಲೇಖಕರ ಪರಿಚಯ | | vii |
| ಅರ್ಪಣೆ–ಮೂಲ ಲೇಖಕರಿಂದ | | ix |
| ಮೊದಲ ಮಾತು | | xi |
| ಪ್ರಸ್ತಾವನೆ | | xv |
| ಭಾಗ ಒಂದು | ಬುದ್ಧ<br>ಒಂದು ಬಗೆಯ(ನ)ಆಸ್ತಿಕತೆಯ ವಿಕಾಸ | ೧ |
| ಭಾಗ ಎರಡು | ಶಂಕರಾಚಾರ್ಯರು<br>ಶಿವನ ಅವತಾರ | ೧೫ |
| ಭಾಗ ಮೂರು | ರಾಮಾನುಜಾಚಾರ್ಯರು<br>ಭಕ್ತಿ ಮಾರ್ಗದ ಉಷಃ ಕಾಲ | ೩೩ |
| ಭಾಗ ನಾಲ್ಕು | ಮಧ್ವಾಚಾರ್ಯರು<br>ಭಕ್ತಿ – ಏಕೈಕ ಸಾಧನ ಮತ್ತು ಅಂತಿಮ ಗುರಿ | ೫೫ |
| ಭಾಗ ಐದು | ಶ್ರೀ ಚೈತನ್ಯ<br>ಮಹಾಪ್ರಭು – ಮಹಾನ್‌ಚಾರ್ಯರು | ೭೭ |
| ಗೋಸಾಯಿ ಪಬ್ಲಿಷರ್ಸ್ | ಒಂದು ಪರಿಚಯ | ೧೦೬ |


# ಅರ್ಪಣೆ

ಊಹಾತೀತ ಕಲ್ಪನೆಗಳಿಂದ ಮುಕ್ತವಾಗಿರುವ
ಶುದ್ಧಭಕ್ತಿಮಾರ್ಗವನ್ನು

ವಿಶ್ವಾದ್ಯಂತ ಪ್ರಸರಿಸುವಲ್ಲಿ ನಿರತರಾಗಿರುವ

ನಮ್ಮ ಆಧ್ಯಾತ್ಮಿಕ ಗುರುಗಳಾಗಿರುವ

ಶ್ರೀಪಾದ ಸ್ವಾಮಿ ನರಸಿಂಘ ಮಹಾರಾಜರಿಗೆ



ಶ್ರೀಪಾದ ಸ್ವಾಮಿ ನರಸಿಂಘ

# ಲೇಖಕರ ಪರಿಚಯ

ಸದ್ಗುರು ಶ್ರೀಪಾದ ಭಕ್ತಿ ಗೌರವ ನರಸಿಂಘ ಮಹಾರಾಜರು ಶ್ರೀಲ ಎ. ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದರ ಪ್ರಮುಖ ಸನ್ಯಾಸಿ ಶಿಷ್ಯರಾಗಿರುತ್ತಾರೆ. ತಮ್ಮ ಪೋಷಕರುಗಳಾದ ಶ್ರೀಲ ಎ. ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದ, ಶ್ರೀಲ ಭಕ್ತಿ ರಕ್ಷಕ ಶ್ರೀಧರ ದೇವ ಗೋಸ್ವಾಮಿ ಮಹಾರಾಜ ಮತ್ತು ಶ್ರೀಲ ಭಕ್ತಿ ಪ್ರಮೋದ ಪುರಿ ಗೋಸ್ವಾಮಿ ಮಹಾರಾಜ ಇವರುಗಳ ಪಾದ ಕಮಲಗಳಿಂದ ಹೊರಸೂಸುವ ಅಪರಿಮಿತ ಕೃಪೆಯನ್ನು ಜಗತ್ತಿನಾದ್ಯಂತ ಉದಾರವಾಗಿ ವಿತರಿಸುತ್ತಿರುವ ಇವರು ಪ್ರಸ್ತುತ, ಶುದ್ಧಭಕ್ತಿಮಾರ್ಗವನ್ನು ಬೋಧಿಸುವ ಒಬ್ಬ ಪರಿಣಾಮಕಾರಿ ಹಾಗೂ ಕ್ರಿಯಾಶೀಲ ಪ್ರಚಾರಕರೆಂದು ಆಸ್ತಿಕ ವರ್ಗದವರಿಂದ ವ್ಯಾಪಕವಾಗಿ ಗುರುತಿಸಲ್ಪಟ್ಟಿದ್ದಾರೆ.

ಶ್ರೀಪಾದ ನರಸಿಂಘ ಮಹಾರಾಜರು ಆಸ್ತಿಕತೆಯ ವಿಕಾಸ ಎಂಬ ತಮ್ಮ ಈ ಪ್ರಸ್ತುತ ಪುಸ್ತಕದಲ್ಲಿ, ಶ್ರೇಷ್ಠ ಆಚಾರ್ಯರುಗಳಾದ ಬುದ್ಧ, ಶಂಕರ, ರಾಮಾನುಜ, ಮಧ್ವ ಮತ್ತು ಶ್ರೀ ಚೈತನ್ಯ ಮಹಾಪ್ರಭುಗಳ ಆಧ್ಯಾತ್ಮಿಕ ಬೋಧನೆಗಳ ಮಿಮಾಂಸೆಯೊಂದಿಗೆ ಅವರ ಜೀವನ ಚರಿತ್ರೆಗಳ ಸಮಗ್ರ ಪರಾಮರ್ಶೆಯನ್ನು ನೀಡಿದ್ದಾರೆ. ಈ ಬೋಧನೆಗಳು ಬುದ್ಧನಿಂದ ಪ್ರಾರಂಭವಾಗಿ ಶ್ರೀ ಚೈತನ್ಯ ಮಹಾಪ್ರಭುಗಳ ತನಕ ಮುಂದುವರೆಯುತ್ತವೆ.

ಶ್ರೀಪಾದ ನರಸಿಂಘ ಮಹಾರಾಜರು ಶುದ್ಧ ಭಕ್ತಿಮಾರ್ಗದ ತತ್ವಗಳನ್ನು ಮತ್ತು ವಿಚಾರಗಳನ್ನು ವಿವರಿಸುವ ಅನೇಕ ಪ್ರಬಂಧಗಳು, ಪುಸ್ತಕಗಳು ಮತ್ತು ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಶ್ರೀಪಾದ ನರಸಿಂಘ ಮಹಾರಾಜರು ಕೃಷ್ಣ ಪ್ರಜ್ಞೆಯನ್ನು ಜಗತ್ತಿನಾದ್ಯಂತ ಪ್ರಚಾರ ಮಾಡುತ್ತಿದ್ದಾರೆ ಅಲ್ಲದೆ ಆಧ್ಯಾತ್ಮಿಕ ಸಾಕ್ಷ್ಯಚಿತ್ರಗಳನ್ನು ತಯಾರಿಸುವ "ದೇವವಿಜ಼ನ್" ಎಂಬ ಒಂದು ಸಂಸ್ಥೆಯನ್ನು **(http://www.devavision.org)** ಅಭಿವೃದ್ಧಿಗೊಳಿಸುತ್ತಿದ್ದಾರೆ.

## ಅರ್ಪಣೆ

ನನ್ನ ದೀಕ್ಷಾ ಗುರು ಮತ್ತು ಶಿಕ್ಷಾ ಗುರುಗಳಿಗೆ

ಪೂಜ್ಯಪಾದ ಶ್ರೀ ಎ.ಸಿ.ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು

ಮತ್ತು

ಪೂಜ್ಯಪಾದ ಶ್ರೀ ಭಕ್ತಿರಕ್ಷಕ ಶ್ರೀಧರ ದೇವ ಗೋಸ್ವಾಮಿ
ಮಹಾರಾಜರು

# ಮೊದಲ ಮಾತು

ಮಾನವ ಕುಲದ ಇತಿಹಾಸದುದ್ದಕ್ಕೂ ಘಟನೆಗಳು ತಮ್ಮಷ್ಟಕ್ಕೆ ತಾವೇ ಮರುಕಳಿಸುತ್ತಿರುತ್ತವೆ ಎಂಬುದು ವ್ಯಾಪಕವಾಗಿ ತಿಳಿದಿರುವ ವಿಷಯ. ಮನುಷ್ಯನು ಅದೆಷ್ಟು ಬಾರಿ ತನ್ನ ಜೀವನವನ್ನು ಐಹಿಕ ಸುಖ ಸಂತೋಷಗಳತ್ತ ತಿರುಗಿಸಿದರೂ, ಅನಿವಾರ್ಯವಾಗಿ ಅವನು ಒಂದು ಆಸ್ತಿಕತೆಯ ಅನ್ವೇಷಣೆಯೆಡೆಗೆ ಹಿಂದಿರುಗಲೇ ಬೇಕಾಗುತ್ತದೆ. ಇದಕ್ಕೆ ಎಲ್ಲ ಜೀವಾತ್ಮರಲ್ಲಿರುವ ಆಂತರಿಕ ಸ್ವಭಾವವೇ ಕಾರಣ. ಬಾಹ್ಯವಾಗಿ ಒಬ್ಬನು ತನ್ನ ದೇಹವನ್ನು ನಾನಾ ವಿಧದ ವಸ್ತ್ರಾಭರಣಗಳಿಂದ ಅಲಂಕರಿಸಿಕೊಂಡರೂ ಸನಾತನವಾದ ತನ್ನ ಆಧ್ಯಾತ್ಮಿಕ ಸ್ವಭಾವದಿಂದ ಅವನು ದೀರ್ಘಕಾಲ ತಪ್ಪಿಸಿಕೊಳ್ಳಲಾರನು.

**ನಿತ್ಯ ಸಿದ್ಧ ಕೃಷ್ಣ ಪ್ರೇಮ ಸಾಧ್ಯ ಕಭು ನಯ**
**ಶ್ರವಣಾದಿ ಶುದ್ಧ ಚಿತ್ತೆ ಕರಯೆ ಉದಯ**

“ಭಗವಂತನ ಶುದ್ಧ ಪ್ರೇಮವು ಪ್ರತಿಯೊಬ್ಬನ ಹೃದಯದೊಳಗೆ ನಿತ್ಯವಾಗಿ ನೆಲೆಸಿರುತ್ತದೆ ಮತ್ತು ಅದು ಜಾಗೃತಗೊಳ್ಳಲು ಕೇವಲ ಭಕ್ತರ ಸಂಗದ ಅವಶ್ಯಕತೆಯಿರುತ್ತದೆ. ಪ್ರತಿಯೊಬ್ಬ ಜೀವಾತ್ಮರಲ್ಲಿ ಕೃಪೆತೋರಿ ಅವರ ಹೃದಯದಲ್ಲಿ ಭಗವಂತನೆಡೆಗೆ ಭಕ್ತಿಯ ದೀಪವನ್ನು ಬೆಳಗಿಸಿ ಅವರನ್ನು ಉದ್ಧರಿಸುವುದೇ ಶ್ರೇಷ್ಠ ಆಧ್ಯಾತ್ಮಿಕ ಗುರುಗಳ ವೈಶಿಷ್ಟ್ಯತೆ”.

# ಆಸ್ತಿಕತೆಯ ವಿಕಾಸ

ಆಸ್ತಿಕತೆಯ ವಿಕಾಸ ಎಂಬ ಈ ಪ್ರಸ್ತುತ ಪುಸ್ತಕದಲ್ಲಿ, ಶ್ರೇಷ್ಠ ಆಚಾರ್ಯರುಗಳಾದ ಬುದ್ಧ, ಶಂಕರ, ರಾಮಾನುಜ, ಮಧ್ವ ಮತ್ತು ಶ್ರೀ ಚೈತನ್ಯ ಮಹಾಪ್ರಭುಗಳ ಆಧ್ಯಾತ್ಮಿಕ ಬೋಧನೆಗಳ ಮಿಮಾಂಸೆಯೊಂದಿಗೆ ಅವರ ಜೀವನ ಚರಿತ್ರೆಗಳ ಸಮಗ್ರ ಚಿತ್ರಣವನ್ನು ನೀಡಲಾಗಿದೆ. ಈ ಬೋಧನೆಗಳು ಬುದ್ಧನಿಂದ ಪ್ರಾರಂಭವಾಗಿ ಶ್ರೀ ಚೈತನ್ಯ ಮಹಾಪ್ರಭುಗಳ ತನಕ ಮುಂದುವರೆಯುತ್ತವೆ.

ಎಲ್ಲಾ ವರ್ಗದ ಹಾಗೂ ಮತಗಳ ಆಸ್ತಿಕ ಬಾಂಧವರು ಈ ಪುಸ್ತಕವನ್ನು ಆಸಕ್ತಿಯಿಂದ ಸ್ವೀಕರಿಸುವರೆಂದು ನಾವು ನಂಬಿರುತ್ತೇವೆ. ಸೊಗಸಾದ ಭಾಷೆಯ ಮೂಲಕ ಈ ಪುಸ್ತಕದಲ್ಲಿ ವಿಶ್ಲೇಷಿಸಿರುವ ವಾಸ್ತವ ಸತ್ಯದ ವಿಷಯವು ಸಾರ್ವತ್ರಿಕವಾಗಿ ಅನ್ವಯಿಸುವಂತಹುದೇ ಹೊರತು ಒಬ್ಬೊಬ್ಬ ಪ್ರತ್ಯೇಕ ವ್ಯಕ್ತಿಗಳಿಗೆ ಸೇರಿದ್ದಲ್ಲ. ಎಲ್ಲ ನಿಷ್ಕಪಟ ಆಧ್ಯಾತ್ಮಿಕವಾದಿಗಳು ಭ್ರಮೆಯೆಂಬ ಅನಿಷ್ಟದೆದುರು ಸತ್ಯದ ಹೆಸರಿನಲ್ಲಿ ಒಂದಾಗಿ ನಿಲ್ಲಬೇಕಾಗಿರುವ ಸಮಯವಿದು. ಈ ಘನ ಉದ್ದೇಶವನ್ನು ಈಡೇರಿಸುವ ನಿಟ್ಟಿನಲ್ಲಿ ಈ ಪುಸ್ತಕವು ಖಂಡಿತವಾಗಿಯೂ ಸಹಕಾರಿಯಾಗುವುದೆಂದು ನಾವು ಭಾವಿಸುತ್ತೇವೆ.

ತ್ರಿದಂಡಿ ಗೋಸ್ವಾಮಿ
ಭಕ್ತಿ ಭಾವನ ವಿಷ್ಣು

# ಪ್ರಸ್ತಾವನೆ

ಆಧ್ಯಾತ್ಮಿಕತೆಯ ವಿವಿಧ ಶಾಖೆಗಳ ವಿಧ್ಯಾರ್ಥಿಗಳು ಕೆಲವು ಬಾರಿ ಯಾರ ಬೋಧನೆಯು ಸರಿ ಮತ್ತು ಯಾರದು ತಪ್ಪು ಎಂಬುದನ್ನು ಕುರಿತು ತಮ್ಮೊಳಗೆ ಪರಸ್ಪರ ಚರ್ಚಿಸುವುದನ್ನು ಕಾಣುತ್ತೇವೆ. ಸಾಮಾನ್ಯ ಸಂಗತಿಯೆಂದರೆ ಈ ವಿದ್ಯಾರ್ಥಿಗಳು ಬೊಧನೆಗಳ ಅಂತರಾರ್ಥವನ್ನು ವಾಸ್ತವವಾಗಿ ಎಂದೂ ಅರಿಯದೆ ಸುಮ್ಮನೆ ತಮ್ಮ ಅಭಿಪ್ರಾಯಗಳ ಆಧಾರದ ಮೇಲೆ ವಾದಿಸುತ್ತಾರೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಕೆಲವು ವಿದ್ಯಾರ್ಥಿಗಳು ವಾಸ್ತವಿಕ ಅರ್ಥವನ್ನು ಅರಿತು ಚರ್ಚಿಸುವಂತೆ ಗೋಚರಿಸುತ್ತದೆ, ಆದರೆ ತಮ್ಮ ಎದುರಾಳಿಯು ಕೂಡ ಅದೇ ಪರಮ ಸತ್ಯವನ್ನು ಇನ್ನೊಂದು ದೃಷ್ಟಿಕೋನದಿಂದ ಅರ್ಥೈಸಿಕೊಂಡು ಚರ್ಚಿಸುತ್ತಿದ್ದಾನೆಂದು ಅರ್ಥೈಸಿಕೊಳ್ಳದೇ ತಮ್ಮ ತಿಳುವಳಿಕೆಗಳನ್ನು ಸಮರ್ಥಿಸಿಕೊಂಡು ಚರ್ಚಿಸುತ್ತಾರೆ

ಈ ಅಂಶವನ್ನು 'ಕುರುಡರು ಮತ್ತು ಆನೆ' ಎಂಬ ಶಿರೋನಾಮೆಯ ಒಂದು ಸೂಫಿ ಕವಿತೆ ಬಹಳ ಅರ್ಥಪೂರ್ಣವಾಗಿ ನಿರೂಪಿಸುತ್ತದೆ:–

# ಆಸ್ತಿಕತೆಯ ವಿಕಾಸ

ಹಿಂದುಸ್ಥಾನದ ಆರು ಪುರುಷರು
ಜ್ಞಾನವ ಗಳಿಸಲು ಬಹು ಕಾತುರರಿದ್ದರು
ದೃಷ್ಟಿಯಲೆಲ್ಲರು ಅಂಧರೆ ಆದರೂ
ಆನೆಯ ನೋಡಲು ಹೊರಟಿಹರು
ಅವಲೋಕನದ ಪರಿಯಿಂದವರು
(ತಂತಮ್ಮ)ಮನಗಳ ತೃಪ್ತಿಸ ಬಯಸಿಹರು

ಮೊದಲಿಗನವರೊಳು ಸಮೀಪಿಸಿದನಾನೆಯನು
ಢಿಕ್ಕಿ ಹೊಡೆದು ಬೀಳುವನಿದ್ದನು
ಆನೆಯ ವಿಶಾಲ ಬಲಿಷ್ಠ ದೇಹವನು!
ಆ ಕೂಡಲೇ ಕೂಗತೊಡಗಿದನು
ಓ ದೇವರೇ! ಆನೆಯು ನಿಜವಾಗಿ
ಹೋಲುವುದೊಂದು ಗೋಡೆಯನು!

ದ್ವಿತೀಯನು ಸ್ಪರ್ಷಿಸುತ ದಂತವನು,
ಹೋ! ಇದೇನಿದು! ಎಂದು ಕೂಗಿದನು!
ಗುಂಡಗೆ, ಮೆತ್ತಗೆ ಮತ್ತು ಮೊನಚಾಗಿ?
ತಿಳಿಯಿತು ಎನಗೆ ಸ್ಫುಟವಾಗಿ
ಆನೆಯೆಂಬ ಈ ಅದ್ಭುತವು
ಹೋಲುವುದೊಂದು ಈಟಿಯನು!

# ಪ್ರಸ್ತಾವನೆ

ತೃತೀಯನು ಸಮೀಪಿಸಿದ ಪ್ರಾಣಿಯನು
ಕೈಗಳಿಂದ ಹಿಡಿಯುವಂತಾದನು
ನುಲಿಯುತ್ತಿಹ ಉದ್ದನೆಯ ಸೊಂಡಿಲನು
ಧೈರ್ಯದಿ ಹಿಡಿಯುತ ಅಂದನು ಹೀಗೆ
ತಿಳಿಯಿತು ಎನಗೆ ನಿಶ್ಚಯವಾಗಿ
ಆನೆಯು ಇರುವುದು ಹಾವಿನ ಹಾಗೆ!

ನಾಲ್ಕನೆಯವ ಚಾಚಿದ ತನ್ನೊಂದು ಕೈಯನು
ಉತ್ಸಾಹದಿ ಸ್ಪರ್ಶಿಸಿದನದರ ಮಂಡಿಯನು
ಬೃಹತ್ತಾಗಿ, ದೃಢವಾಗಿ, ನೇರವಾಗಿ, ಬಲಿಷ್ಠವಾಗಿ
ಇರುವುದು ಈ ಅದ್ಭುತ ಪ್ರಾಣಿಯು
ಬಹುತೇಕ ಸ್ಪಷ್ಟವಾಗಿರುವುದೆನಗೆ
ಆನೆಯು ಇರುವುದು ವೃಕ್ಷದ ಹಾಗೆ!

ಕಿವಿಯನು ಮುಟ್ಟುವ ಅವಕಾಶ ದೊರೆತ
ಐದನೆಯವನು ಹೇಳಿದ ಹೀಗೆ;
ಕುರುಡರಲಿ ಅತಿ ಕುರುಡನಾದವನೂ
ಅನುಮಾನವಿಲ್ಲದೆ ಅರುಹಬಲ್ಲನು
ಆನೆಯೆಂಬ ಈ ಅದ್ಭುತವು
ಇರುವುದು ಬೀಸಣಿಗೆಯ ಹಾಗೆ!

# ಆಸ್ತಿಕತೆಯ ವಿಕಾಸ

ತಡವನು ಮಾಡದೆ ಆರನೆಯವನು
ತಡಕಾಡಿದ ಸ್ಪರ್ಶಿಸಲಾನೆಯನು
ತನ್ನಯ ಕರಗಳ ವ್ಯಾಪ್ತಿಗೆ ಸಿಕ್ಕಿದ
ತೂಗಾಡುತ್ತಿದ್ದ ಬಾಲವಹಿಡಿದ
ನನಗನಿಸುತಿದೆ  ಎನ್ನುತ ನುಡಿದ
ಆನೆಯು ಇರುವುದು ಹಗ್ಗದ ಹಾಗೆ!

ಹಿಂದುಸ್ಥಾನದ ಈ ಆರು ಪುರುಷರು
ಮಿತಿಮೀರಿ ಜೋರಾಗಿ ವಾದಿಸಿದರು
ಸತತ ದೃಢವಾಗಿ ಮತ್ತು ಬಿರುಸಾಗಿ
ಪ್ರತಿಯೋರ್ವ ತನ್ನಭಿಪ್ರಾಯದ ಪರವಾಗಿ
ಪ್ರತಿಯೊಬ್ಬನ ವಾದ ಭಾಗಶ: ಸರಿಯು
ಮತ್ತು ಎಲ್ಲರ ವಾದವು ಸಂಪೂರ್ಣ ಹುಸಿಯು

ಹೀಗೆಯೆ ಆಗಾಗ್ಗೆ ವೇದಾಂತ ಚರ್ಚೆಗಳಲಿ
ವಾದಿಪರು ಕೆಲವರು ತಮ್ಮಭಿಪ್ರಾಯದಲಿ
ನಿಂದನೆಗೈವರು ಸ್ಪಷ್ಟ ಅಜ್ಞಾನದೊಳು
ಅನ್ಯರೆಲ್ಲರ ತಿಳುವಳಿಕೆಗಳ
ತಾವ್ಯಾರೂ ನೋಡದ ಆನೆಯ ಕುರಿತು
ಆಡುವರೆಲ್ಲರು ಬಡಾಯಿ ಮಾತು

# ಪ್ರಸ್ತಾವನೆ

ಭಾರತದ ಅತಿಶ್ರೇಷ್ಠ ಗ್ರಂಥವಾದ ಶ್ರೀಮದ್ ಭಾಗವತದ ಪ್ರಕಾರ ಪರಾತ್ಪರ ಸತ್ಯವು ಅನ್ವೇಷಕನ ಆಧ್ಯಾತ್ಮಿಕ ಪರಿಸ್ಥಿತಿಗನುಗುಣವಾಗಿ ಬ್ರಹ್ಮನ್, ಪರಮಾತ್ಮ ಮತ್ತು ಭಗವಾನ್ ಎಂಬ ಮೂರು ಹಂತಗಳಲ್ಲಿ ಅರಿಯಲ್ಪಡುತ್ತದೆ.

ವದನ್ತಿ ತತ್ ತತ್ತ್ವವಿದಸ್ ತತ್ತ್ವಂ ಯಜ್‌ಜ್ಞಾನಮ್ ಅದ್ವಯಮ್ ।
ಬ್ರಹ್ಮೇತಿ ಪರಮಾತ್ಮೇತಿ ಭಗವಾನ್ ಇತಿ ಶಬ್ದ್ಯತೇ ॥

''ಪರಾತ್ಪರ ಸತ್ಯವನ್ನು ಅರಿತಿರುವ ನುರಿತ ಆಧ್ಯಾತ್ಮಿಕವಾದಿಗಳು ಈ ಅದ್ವೈತ ತತ್ವವನ್ನು ಬ್ರಹ್ಮನ್, ಪರಮಾತ್ಮ ಮತ್ತು ಭಗವಾನ್ ಎಂದು ಕರೆಯುತ್ತಾರೆ''

ಬ್ರಹ್ಮನ್ ಎನ್ನುವುದು ಪರಾತ್ಪರ ಸತ್ಯವನ್ನು ವ್ಯಕ್ತಿತ್ವರಹಿತವಾಗಿ ಸಾಕ್ಷಾತ್ಕರಿಸಿದ ಹಂತ. ಪರಮಾತ್ಮ ಎನ್ನುವುದು ಪ್ರತಿಯೊಬ್ಬ ಜೀವಿಗಳ ಹೃದಯದಲ್ಲಿನೆಲಸಿರುವ ಪರಮಸತ್ಯವನ್ನು ಪ್ರತಿನಿಧಿಸುವ ವ್ಯಕ್ತಿಗತ ಸಾಕ್ಷಾತ್ಕಾರದ ಹಂತ. ಮತ್ತು,ಪರಾತ್ಪರ ಸತ್ಯವು ದೇವೋತ್ತಮನಾದ ಶ್ರೀ ಕೃಷ್ಣನ ಸರ್ವಾಕರ್ಷಕ ಪುರುಷ ಸ್ವರೂಪದಲ್ಲಿರುವ ದಿವ್ಯ ಪ್ರೇಮದ ಭಾವಾನಂದದ ರಸಗಳ ಮೂಲ ಎಂದು ಅರಿಯುವ ಹಂತವೇ ಭಗವಾನ್ ಸಾಕ್ಷಾತ್ಕಾರ. ಹಾಗಾಗಿ ಏಕೈಕ ಪರಾತ್ಪರ ಸತ್ಯವು ಬ್ರಹ್ಮನ್, ಪರಮಾತ್ಮ ಮತ್ತು ಭಗವಾನ್ ಎಂಬ ಮೂರು ಹಂತಗಳಲ್ಲಿ ಪ್ರಕಟವಾಗುತ್ತದೆ.

ತನ್ನ ಪರಮ ಗುರಿಯಾಗಿರುವ ಶ್ರೀ ಕೃಷ್ಣನ ದಿವ್ಯ ಧಾಮವಾದ ಗೋಲೋಕ ವೃಂದಾವನದೆಡೆಗೆ ಕ್ರಮಿಸುತ್ತಿರುವ ಬದ್ಧಾತ್ಮನ ಸಹಾಯಕ್ಕೆ ಭಗವಂತನು ಕೆಲವು ಬಾರಿ ತಾನೇ ಸ್ವತಃ ಅವತರಿಸುತ್ತಾನೆ

# ಆಸ್ತಿಕತೆಯ ವಿಕಾಸ

ಮತ್ತು ಕೆಲವು ಬಾರಿ ತನ್ನ ಅಧಿಕೃತ ಪ್ರತಿನಿಧಿಯನ್ನು ಕಳುಹಿಸುತ್ತಾನೆ. ಈ ಮಹತ್ವದ ಅಂಶವನ್ನು ಅರಿತ ಪ್ರತಿಯೊಬ್ಬ ಪರಾತ್ಪರ ಸತ್ಯದ ಪ್ರಾಮಾಣಿಕ ಅನ್ವೇಷಕನು ಎಲ್ಲಾ ಅಧಿಕೃತ ಆಧ್ಯಾತ್ಮಿಕ ಗುರುಗಳಿಂದ ಪರಮ ಸದ್ಗುಣಗಳನ್ನು ಗಳಿಸಬಹುದು.


ಮೇಲ್ನೋಟಕ್ಕೆ, ಅಂತಹ ಆಧ್ಯಾತ್ಮಿಕ ಗುರುಗಳು ಪರಸ್ಪರ ಭಿನ್ನಾಭಿಪ್ರಾಯಗಳನ್ನು ಹೊಂದಿರುವಂತೆ ಅಥವಾ ಪರಸ್ಪರರಲ್ಲಿ ವಿರೋಧಾಭಾಸವಿರುವಂತೆ ಗೋಚರಿಸಬಹುದು. ಆದರೆ ವಾಸ್ತವದಲ್ಲಿ ಒಬ್ಬ ವಿದ್ಯಾವಂತ ವ್ಯಕ್ತಿಗೆ, ಈ ಭಿನ್ನಾಭಿಪ್ರಾಯಗಳು ಕೇವಲ ಬಾಹ್ಯವಿಷಯಗಳಾಗಿರುತ್ತವೆ, ಆಂತರಿಕವಾಗಿ ಅವನು ಪರಸ್ಪರರಲ್ಲಿ ಆಧ್ಯಾತ್ಮಿಕ ಐಕ್ಯತೆಯನ್ನು ಕಾಣುತ್ತಾನೆ. ಹಾಗಾಗಿ ಎಲ್ಲಾ ಆಧ್ಯಾತ್ಮಿಕ ಗುರುಗಳು ಭಗವಂತನ ಆದೇಶಗಳನ್ನು ಪಾಲಿಸುತ್ತಾ ಕೇವಲ ಲೋಕ ಕಲ್ಯಾಣಕ್ಕಾಗಿ ದುಡಿಯುತ್ತಾರೆ.

ಸತ್ಯ ನಿತ್ಯವಾಗಿದ್ದರೂ, ಅದು ಮಾನವ ಸಮಾಜದಲ್ಲಿ ಹಂತ ಹಂತವಾಗಿ ಕ್ರಮೇಣ ವಿಕಾಸಗೊಳ್ಳುತ್ತದೆ. ಆಧ್ಯಾತ್ಮಿಕ ಪ್ರಮಾಣಗಳ ಅಧಿಕೃತ ವಕ್ತಾರರುಗಳಾದ ಭಾರತದ ಪ್ರಮುಖ ಆಚಾರ್ಯರ ಜೀವನ ಮತ್ತು ಬೋಧನೆಗಳನ್ನು ಕುರಿತು ಇಲ್ಲಿ ಪ್ರಸ್ತುತ ಪಡಿಸಿದ ಐದು ಪ್ರಬಂಧಗಳನ್ನು ಓದಿ ನಮ್ಮ ಓದುಗರು ಈ ಸಂತರುಗಳ ಜೀವನಗಳ ಬಗ್ಗೆ ಜ್ಞಾನದ ಸಂಪತ್ತನ್ನು ಗಳಿಸುವುದು ಮಾತ್ರವಲ್ಲದೇ ಪ್ರತಿಯೊಬ್ಬ ಆಚಾರ್ಯರ ಕೊಡುಗೆಗಳನ್ನು ಕ್ರಮವಾಗಿ ಬುದ್ಧನ ಬೋಧನೆಗಳಿಂದ ಪ್ರಾರಂಭಿಸಿ ಅರ್ಥೈಸಿಕೊಳ್ಳುತ್ತಾ, ಶ್ರೇಷ್ಠ ಆಚಾರ್ಯರಾದ ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆಗಳೊಂದಿಗೆ ಆಧ್ಯಾತ್ಮಿಕತೆಯ ಅತ್ಯುನ್ನತ ಸ್ಥಿತಿಗೇರುವರೆಂದು, ಆಶಿಸುತ್ತೇವೆ.

# ಪ್ರಸ್ತಾವನೆ

ಈ ಪುಸ್ತಕದಲ್ಲಿ ಚರ್ಚಿಸಿರುವ ಸತ್ಯಗಳು ಯಾವುದೇ ನಿರ್ದಿಷ್ಟ ಪಂಥಕ್ಕೆ ಸಂಬಂಧಪಟ್ಟವುಗಳಲ್ಲ, ಮತ್ತು, ಯಾವುದೇ ಪಂಥದ ಮೇಲಿನ ಪಕ್ಷಪಾತದ ಆಧಾರದ ಮೇಲೆ ಯಾವೊಬ್ಬ ನಿರ್ದಿಷ್ಟ ಅಚಾರ್ಯರನ್ನೂ ಇನ್ನೊಬ್ಬರಿಂದ ಉನ್ನತ ಸ್ಥಾನದಲ್ಲಿರಿಸುವುದಿಲ್ಲ. ಆದಾಗ್ಯೂ ಸತ್ಯವು ಕ್ರಿಯಾಶೀಲವಾದದು ಮತ್ತು ಅದರ ಪರಮೋಚ್ಚತೆಯನ್ನು ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆಗಳಲ್ಲಿ ಕಾಣಬಹುದು. ಆದ್ದರಿಂದ ಪ್ರಾಮಾಣಿಕವಾಗಿ, ತೆರೆದ ಮನಸ್ಸಿನಿಂದ ಮತ್ತು ಶುದ್ಧ ಹೃದಯದಿಂದ ಈ ಪುಸ್ತಕವನ್ನು ಓದಿದವರು ಖಂಡಿತವಾಗಿಯೂ ಜೀವನದ ಅಂತಿಮ ಗುರಿ ಮತ್ತು ಅದನ್ನು ಸಾಧಿಸುವ ವಿಧಾನವನ್ನು ಅರ್ಥಮಾಡಿಕೊಳ್ಳುತ್ತಾರೆ.

ಸ್ವಾಮಿ ಬಿ. ಜಿ. ನರಸಿಂಘ



# ಭಾಗ ಒಂದು
# ಬುದ್ಧ

## ಒಂದುಬಗೆಯ (ನ)ಆಸ್ತಿಕತೆಯ ವಿಕಾಸ

ಯಾವಾಗ ವೇದಗಳ ಮೇಲಿನ ನಿಷ್ಠೆಯು ಅಲ್ಪ ಬುದ್ಧಿಯ ಜನರ ಪ್ರಭಾವದಿಂದ ದುರ್ಬಲವಾಗುತ್ತಾ ಬಂದಿತೋ, ಯಾವಾಗ ಜನರು ಧಾರ್ಮಿಕ ವಿಧ್ಯುಕ್ತ ಕ್ರಿಯೆಗಳಿಗೆ ಸಂಬಂಧಿಸಿದ ಆದೇಶಗಳನ್ನು ಅಂಧಶ್ರದ್ಧೆಯಿಂದ ಪಾಲಿಸುತ್ತ ವೈದಿಕ ಆದೇಶಗಳ ಆಧಾರದಲ್ಲಿ ಪ್ರಾಣಿಗಳ ಹತ್ಯೆಯಲ್ಲಿ ತೊಡಗಿದರೋ, ಆ ಸಮಯದಲ್ಲಿ ಬುದ್ಧನು ಶ್ರೇಷ್ಠ ಧರ್ಮಪ್ರವರ್ತಕನಾಗಿ ಅವತರಿಸಿದರು. ವೈದಿಕ ಸಾಹಿತ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಿ, ತನ್ನ ತರ್ಕಸಮ್ಮತವಾದ, ನಾಸ್ತಿಕತೆಯ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತ ಅಹಿಂಸೆ ಮತ್ತು ನಿರ್ವಾಣದ ಮಾರ್ಗವನ್ನು ಜೀವನದ ಅಂತಿಮ ಗುರಿಯೆಂದು ಶಿಫಾರಸು ಮಾಡಿದನು.

ಬುದ್ಧನು ಹುಟ್ಟಿದ ನಿಖರವಾದ ದಿನಾಂಕವು ತಿಳಿದು ಬಂದಿಲ್ಲ. ಆದರೆ ಕೆಲವು ಪ್ರಮಾಣಗಳ ಪ್ರಕಾರ ಅವನು ಭಾರತ ಮತ್ತು ನೇಪಾಳದ ಗಡಿಯಲ್ಲಿರುವ ಬಿಹಾರದ ಒಂದು ಸಣ್ಣ ಪ್ರಾಂತದಲ್ಲಿ ಐದನೆಯ ಶತಮಾನದಲ್ಲಿ ಜನಿಸಿದನು ಎಂದು ತಿಳಿದುಬರುತ್ತದೆ. ಬುದ್ಧನು ರಾಜ ಶುದ್ಧೋದನ ಮತ್ತು ಶುದ್ಧ ಚಾರಿತ್ರ್ಯಗಳುಳ್ಳ ಅವನ ರಾಣಿಯಾದ ಮಾಯಾದೇವಿ ದಂಪತಿಗಳ ಪುತ್ರ. ಅವನ ಜನನದ ಸಮಯದಲ್ಲಿ ನಾಲ್ಕು ಜನ ದೇವದೂತರು ಸ್ವರ್ಗದಿಂದ ಪ್ರತ್ಯಕ್ಷರಾಗಿ ಈ ಮಗುವು ಭವಿಷ್ಯದಲ್ಲಿ ಜಗತ್ತಿನ ಉದ್ಧಾರಕನಾಗಿ ಜನರಿಗೆ ಜ್ಞಾನೋದಯವನ್ನುಂಟು ಮಾಡುವನು ಎಂದು ಭವಿಷ್ಯ ನುಡಿದರು. ತನ್ನ ಅನೇಕ ಉಪನದಿಗಳಿಂದ ಹರಿದುಬರುವ ನೀರನ್ನು ತುಂಬಿಕೊಂಡು

# ಆಸ್ತಿಕತೆಯ ವಿಕಾಸ

ಸಮೃದ್ಧಗೊಳ್ಳುವ ಮಹಾನದಿಯಂತೆ, ಬುದ್ಧನ ಜನನದ ನಂತರ, ಶುದ್ಧೋದನನ ಖಜಾನೆಯು ತನ್ನ ಸಾಮಂತರಿಂದ ಹರಿದುಬರುತ್ತಿದ್ದ ಧನರಾಶಿಯಿಂದ ಸಮೃದ್ಧಗೊಳ್ಳತೊಡಗಿತು. ಅವನಿಗೆ ಕಾಣಿಕೆಯಾಗಿ ಬರುತ್ತಿದ್ದ ಕುದುರೆ ಹಾಗೂ ಆನೆಗಳ ಸಂಖ್ಯೆಗೆ ಅವನ ಅಶ್ವಶಾಲೆಯು ಬಹಳ ಕಿರಿದಾಯಿತು. ಅವನ ರಾಜ್ಯದ ಪ್ರಜೆಗಳೆಲ್ಲರೂ ಅತಿಯಾದ ಆನಂದವನ್ನು ಅನುಭವಿಸುತ್ತಾ ಸಂತುಷ್ಟರಾಗಿ ಬದುಕುತ್ತಿದ್ದರು.

ಮಗನ ಜನನದ ನಂತರ ಒಂದುದಿನ, ಅಸಿತ ಎಂಬ ಹೆಸರಿನ ಋಷಿಯೊಬ್ಬರು ಶುದ್ಧೋದನನ ಅರಮನೆಗೆ ಆಗಮಿಸಿದರು. ಋಷಿಗಳ ಆಗಮನದಿಂದ ಹರ್ಷಿತನಾದ ರಾಜನು ತನ್ನ ಮಗನನ್ನು ಅವರ ಸಮ್ಮುಖಕ್ಕೆ ತಂದನು. ಮಗನನ್ನು ನೋಡಿದ ಋಷಿಯು ಪ್ರೀತಿಯ ಕಣ್ಣೀರು ಸುರಿಸಿ ಮಗುವಿನ ಹಿಂದಿನ ಜನ್ಮದ ಬಗ್ಗೆ ಹೇಳುತ್ತ, ಮಗುವು ಹಿಂದಿನ ಜನ್ಮದಲ್ಲಿ ಸುಮೇಧ ಎಂಬ ಬ್ರಾಹ್ಮಣನಾಗಿದ್ದು ಈ ಜನುಮದಲ್ಲಿ ಒಬ್ಬ ದೊಡ್ಡ ಸಂತನಾಗುವ ವಿಚಾರವನ್ನು ಅರುಹಿದನು. ಅವನ ಹಿಂದಿನ ವೃತ್ತಾಂತವನ್ನು ವಿವರಿಸುತ್ತಾ, ಒಂದು ದಿನ ಸುಮೇಧನು ಯೋಚನೆಯಲ್ಲಿ ಮುಳುಗಿರುವಾಗ, ಅವನಿಗೆ ಒಂದು ದಿವ್ಯಸಾಕ್ಷಾತ್ಕಾರವಾಗುತ್ತದೆ: “ಗಮನಿಸು, ನಾನು ಜನ್ಮ, ಮರಣ, ಮುಪ್ಪು ಮತ್ತು ರೋಗಗಳಿಗೆ ಬದ್ಧನಾಗಿರುವೆನು. ಖಚಿತವಾಗಿಯು ಈ ಪರಮಸತ್ಯವನ್ನು ನಾನು ಮಾನವಕುಲಕ್ಕೆ ಪ್ರಚುರಪಡಿಸಬೇಕು”. ಅಸಿತ ಋಷಿಯು ಹೇಳಿದ ಬುದ್ಧನ ಕಥೆಯನ್ನು ಪಾಚೀನಸಂಸ್ಕೃತ ಗ್ರಂಥಗಳಲ್ಲಿ ಮೊದಲೇ ಹೇಳಲಾಗಿತ್ತು, ಮತ್ತು ಆ ಸಮಯದಲ್ಲಿ ಅದನ್ನು ರಾಜನಿಗೆ ಬಹಿರಂಗಪಡಿಸಲಾಯಿತು.

ಮಗು ಹುಟ್ಟಿದ ಐದನೆ ದಿನ, ನಾಮಕರಣ ಸಮಾರಂಭದ ಶುಭ ಸಂದರ್ಭವನ್ನು ಒಂದು ಹಬ್ಬದಂತೆ ಆಚರಿಸಲಾಯಿತು. ಎಂಟು ಜನ

# ಬುದ್ಧ

ಜ್ಯೋತಿಷಿಗಳನ್ನು ಮಗುವಿನ ಭವಿಷ್ಯ ನುಡಿಯಲು ಕರೆಯಿಸಲಾಯಿತು, ಮಗುವನ್ನು ಸಿದ್ಧಾರ್ಥ ಎಂದು ನಾಮಕರಣ ಮಾಡಲಾಯಿತು. ಎಂಟು ಜನ ಜ್ಯೋತಿಷಿಗಳಲ್ಲಿ ಏಳು ಜನರು ಮಗುವು ದೊಡ್ಡ ರಾಜನಾಗಿ ಜಗತ್ತನ್ನು ಆಳುವನು ಎಂದು ಭವಿಷ್ಯ ನುಡಿದರು. ಯುವರಾಜನು ಒಂದು ದಿನ ತನ್ನ ರಾಜಪದವಿಯನ್ನು ತೊರೆದು ಸನ್ಯಾಸ ಮಾರ್ಗವನ್ನು ಸ್ವೀಕರಿಸುವನು ಎಂದು ಎಂಟನೆ ಜ್ಯೋತಿಷಿಯು ಹೇಳಿದನು. ರಾಜಕುಮಾರನು ಬುದ್ಧನಾಗುವನು ಎಂಬುದರ ಅರ್ಥ ಎಲ್ಲವನ್ನು ಬಲ್ಲವನು ಮತ್ತು ಜ್ಞಾನೋದಯವನ್ನು ಹೊಂದಿದವನು ಎಂದು. ರಾಜ ಶುದ್ಧೋದನನಿಗೆ ಮಗನು ಮನೆಯನ್ನು ಬಿಟ್ಟು ಬುದ್ಧನಾಗುವುದು ಸ್ವಲ್ಪವೂ ಇಷ್ಟವಿರಲಿಲ್ಲ. “ನನ್ನ ಮಗನು ಏನನ್ನು ನೋಡುವನು ಯಾವುದು ಅವನು ಲೌಕಿಕ ಜೀವನವನ್ನು ತ್ಯಜಿಸಲು ಕಾರಣವಾಗುವುದು” ಎಂದು ಅವನು ಜ್ಯೋತಿಷಿಯನ್ನು ಕೇಳಿದನು. ಜ್ಯೋತಿಷಿಯು ಉತ್ತರಿಸಿದನು, “ಯಾವಾಗ ಅವನು ಒಬ್ಬ ವೃದ್ಧ ವ್ಯಕ್ತಿಯನ್ನು, ಒಬ್ಬ ರೋಗ ಪೀಡಿತ ಮನುಷ್ಯನನ್ನು, ಒಂದು ಮೃತ ಶರೀರವನ್ನು, ಮತ್ತು ಒಬ್ಬ ಭಿಕ್ಷುಕನನ್ನು ನೋಡುವನೋ, ಆವಾಗ ಮನುಜ ಕುಲದ ದು:ಖಭರಿತ ಜೀವನದ ಮೇಲೆ ಅನುಕಂಪದಿಂದ ನಿನ್ನ ಮಗನು ರಾಜ ಮನೆತನವನ್ನು ತೊರೆದು ವೈರಾಗ್ಯದ ಮಾರ್ಗವನ್ನು ಹಿಡಿಯುವನು.” ರಾಜನು ತನ್ನ ಮಗನ ಕಣ್ಣುಗಳ ಮುಂದೆ ಆ ತರಹ ಯಾವ ದೃಶ್ಯವು ಬರದಂತೆ ನೋಡಿಕೊಳ್ಳುವೆನೆಂದು ಆ ಕ್ಷಣದಲ್ಲಿ ನಿರ್ಧರಿಸಿದನು.

ಏಳನೇ ದಿನ, ದುರದೃಷ್ಟ ರಾಜ ಶುದ್ಧೋದನನ ಮೇಲೆ ಒಕ್ಕರಿಸಿತು. ಅವನ ಪತ್ನಿಯಾದ ಮಾಯಾದೇವಿ ಇಹಲೋಕವನ್ನು ತ್ಯಜಿಸಿದಳು. ಸಿದ್ಧಾರ್ಥನ ಅಜ್ಜಿಯಾದ ಅಂಜನಾದೇವಿಯು ಮಗುವಿನ ಪಾಲನೆ ಪೋಷಣೆ ಮಾಡಿ ಅವನನ್ನು ಪ್ರೀತಿ ವಾತ್ಸಲ್ಯಗಳಿಂದ ಬೆಳೆಸಿದಳು.

# ಆಸ್ತಿಕತೆಯ ವಿಕಾಸ

ಹೀಗೆ ಯುವರಾಜನು ಈ ಪ್ರಾಪಂಚಿಕ ಜೀವನವು ನೀಡಬಹುದಾದ ಭೌತಿಕ ಸುಖವನ್ನು ಬಿಟ್ಟರೆ ಇನ್ನೇನನ್ನೂ ಅನುಭವಿಸಲಿಲ್ಲ. ಯಾವಾಗ ಸಿದ್ಧಾರ್ಥನಿಗೆ ೧೬ ವರುಷ ವಯಸ್ಸಾಯಿತೋ, ರಾಜನು ತನ್ನ ಮಗನು ಮದುವೆಯಾಗುವ ಸಮಯ ಬಂತೆಂದು ನಿರ್ಧರಿಸಿದನು. "ನಾನು ಮದುವೆಯಾಗುವೆನು ಎಂದನು ಸಿದ್ಧಾರ್ಥ, ಆದರೆ ಆ ಹುಡುಗಿಯು ಉತ್ತಮ ಸ್ವಭಾವವುಳ್ಳವಳಾಗಿರಬೇಕು, ಅತ್ಯಂತ ಪ್ರಾಮಾಣಿಕಳಾಗಿರಬೇಕು, ವಿನೀತಳಾಗಿರಬೇಕು, ಮತ್ತು ನನ್ನ ಗುಣಸ್ವಭಾವಕ್ಕೆ ಹೊಂದಿಕೊಂಡು ನಡೆಯುವ ಹುಡುಗಿಯನ್ನೇ ನಾನು ಮದುವೆಯಾಗುವೆ ಎಂದು ಸಿದ್ಧಾರ್ಥ ಉತ್ತರಿಸಿದನು. ಅವಳದ್ದು ಪವಿತ್ರ ಹಾಗೂ ಗೌರವಾನ್ವಿತ ಜನ್ಮವಾಗಿರಬೇಕು, ನೋಡಲು ತರುಣಿಯಾಗಿದ್ದು ಸೌಂದರ್ಯವತಿಯಾಗಿರಬೇಕು ಆದರೆ ತನ್ನ ಸೌಂದರ್ಯದ ಬಗ್ಗೆ ಅಹಂಕಾರವಿರಬಾರದು. ಅವಳು ಪರೋಪಕಾರಿಯಾಗಿರಬೇಕು, ತನಗೆ ಬೇಕಾದುದ್ದನ್ನು ಆಯ್ದುಕೊಳ್ಳುವಲ್ಲಿ ಸಂತೃಪ್ತಳಾಗಿದ್ದು, ಎಲ್ಲ ಜೀವರಾಶಿಗಳಿಗೆ ಒಲವಿನ ಸೋದರಿಯಾಗಿದ್ದು, ಮಾತೆಯಂತೆ ಮೃದು ಸ್ವಭಾವದವಳಾಗಿರಬೇಕು. ಅವಳ ಸ್ವಭಾವ ಮಧುರವಾಗಿರಬೇಕು ಮತ್ತು ಅಸೂಯೆ ಇಲ್ಲದವಳಾಗಿರಬೇಕು. ಅಂತಹ ಹುಡುಗಿಯನ್ನು ನಾನು ಪತ್ನಿಯಾಗಿ ಸ್ವೀಕರಿಸಬಹುದು".

ಇಂತಹ ಹುಡುಗಿಯನ್ನು ಹುಡುಕುವುದು ಸುಲಭದ ಕೆಲಸವಾಗಿರಲಿಲ್ಲ, ಆದರೆ ಬಹಳ ಸಮಯದ ನಂತರ ರಾಜನು ಕೊನೆಗೂ ತನ್ನ ಮಗನಿಗೆ ತಕ್ಕ ಹುಡುಗಿಯನ್ನು ಹುಡುಕಿದನು. ಅವಳು ದಂಡಪಾನಿಯ ಮಗಳಾದ ಯಶೋಧರಾ. ಮದುವೆಯು ನಡೆಯಿತು ಮತ್ತು ಸ್ವಲ್ಪ ಸಮಯದ ನಂತರ, ಯಶೋಧರಾ ಗರ್ಭಿಣಿಯಾಗಿ ಒಂದು ಗಂಡು ಮಗುವಿನ ತಾಯಿಯಾದಳು. ಅದೇ ಸಮಯದಲ್ಲಿ ಸಿದ್ಧಾರ್ಥನಿಗೆ ಅರಮನೆಯ ಉದ್ಯಾನವನಕ್ಕೆ ಭೇಟಿ ನೀಡುವ ಇಚ್ಛೆಯಾಯಿತು. ರಾಜ ಶುದ್ಧೋದನನು

# ಬುದ್ಧ

ಎಲ್ಲ ವೃದ್ಧರನ್ನು, ರೋಗ ಪೀಡಿತರನ್ನು ಮತ್ತು ಭಿಕ್ಷುಕರನ್ನು ಯುವರಾಜನು ಉದ್ಯಾನವನಕ್ಕೆ ಹೋಗುವ ದಾರಿಯಲ್ಲಿ ಕಾಣದಂತೆ ಮರೆಯಾಗಿರಬೇಕೆಂದು ಆಜ್ಞಾಪಿಸಿದನು. ಆದರೆ ವಿಧಿಯ ಕೈವಾಡವು ರಾಜನ ಯುಕ್ತಿಗಿಂತ ಹೆಚ್ಚು ಶಕ್ತಿಶಾಲಿಯೆಂದು ದೃಢಪಟ್ಟಿತು. ಹಿಂದೆ ಜ್ಯೋತಿಷಿಯು ಯಾವ ನಾಲ್ಕು ದೃಶ್ಯಗಳು ಸಿದ್ಧಾರ್ಥನು ವೈರಾಗ್ಯದ ದಾರಿಯನ್ನು ಹಿಡಿಯಲು ಕಾರಣವಾಗುವುವೆಂದು ಭವಿಷ್ಯ ನುಡಿದಿದ್ದನೋ, ಆ ನಾಲ್ಕು ದೃಶ್ಯಗಳನ್ನು ಸಿದ್ಧಾರ್ಥನು ನೋಡುವಂತಾಯಿತು

ಯುವರಾಜನು ಉದ್ಯಾನವನಕ್ಕೆ ಆಗಮಿಸುವ ಸಂದರ್ಭದಲ್ಲಿ ನಗರವನ್ನು ಬಹಳ ಸುಂದರವಾಗಿ ಅಲಂಕರಿಸಲಾಗಿತ್ತು. ತರುಣರು ಮತ್ತು ಸುಂದರವಾಗಿರುವ ಜನರನ್ನು ಮಾತ್ರ ಬೀದಿಯಲ್ಲಿ ನಿಲ್ಲಿಸಲಾಯಿತು. ಇತರ ಜನರನ್ನು ಯುವರಾಜನ ದೃಷ್ಟಿಯಿಂದ ದೂರವಿರಿಸಲಾಯಿತು. ಆಕಸ್ಮಿಕವಾಗಿ, ವಿಧಿಯ ಪ್ರಭಾವೋ ಎಂಬಂತೆ, ಸಿದ್ಧಾರ್ಥನು ತನ್ನ ಸಾರಥಿ ಚನ್ನನಿಗೆ ನಗರದಿಂದ ಹೋಗುವ ಮುಖ್ಯ ಮಾರ್ಗವನ್ನು ಬಿಟ್ಟು ಪರ್ಯಾಯ ಮಾರ್ಗದಲ್ಲಿ ಮುನ್ನಡೆಯಲು ಆಜ್ಞಾಪಿಸಿದನು. ಸ್ವಲ್ಪ ದೂರದಲ್ಲೇ ಸಿದ್ಧಾರ್ಥನು ಹಿಂದೆಂದೂ ಕಾಣದ ಒಂದು ದೃಶ್ಯವನ್ನು ಕಂಡನು – "ಇದು ಏನು?" ಆ ವ್ಯಕ್ತಿಯ ದೇಹವು ಏಕೆ ಬಾಗಿರುವುದು? ಎಂದು ಸಿದ್ಧಾರ್ಥ ಚನ್ನನನ್ನು ಪ್ರಶ್ನಿಸಿದನು. ಮಾತನಾಡಲು ಹೆದರಿ ಆದರೆ ತನ್ನ ಒಡೆಯನಿಗೆ ಉತ್ತರ ನೀಡಲೇಬೇಕಾದ ನಿರ್ಬಂಧ ಸ್ಥಿತಿಯಲ್ಲಿ ಚೆನ್ನ ಹೇಳಿದನು, "ಅದು ಒಬ್ಬ ವ್ಯಕ್ತಿಯು ವೃದ್ಧಾಪ್ಯದಿಂದ ಬಾಗಿರುವುದು, ಸ್ವಾಮಿ! ಹಾಗಾದರೆ ಎಲ್ಲರೂ ವೃದ್ಧರಾಗುತ್ತಾರೆಯೇ?" ಎಂದು ಸಿದ್ಧಾರ್ಥ ಕೇಳಿದನು. ಹೌದು; ಎಂದು ಚೆನ್ನ ಉತ್ತರಿಸಿದನು, ರಥವು ಮುಂದೆ ಹೋಗಲು ಪ್ರಾರಂಭಿಸಿತು.

# ಆಸ್ತಿಕತೆಯ ವಿಕಾಸ

ಮುಂದೆ ಸಿದ್ಧಾರ್ಥನು ಒಬ್ಬ ಅತಿಯಾಗಿ ಬಳಲಿದ ವ್ಯಕ್ತಿಯು ಮಾರ್ಗ ಮಧ್ಯದಲ್ಲಿ ಮಲಗಿರುವುದನ್ನು ಕಂಡು ರಥವನ್ನು ನಿಲ್ಲಿಸಲು ಚನ್ನನಿಗೆ ಆಜ್ಞಾಪಿಸಿ "ಇವನೇಕೆ ಹೀಗೆ ಮಲಗಿದ್ದಾನೆ?" ಎಂದು ಕೇಳಿದನು.

"ಅದು ಒಬ್ಬ ವ್ಯಕ್ತಿಯು ಕುಷ್ಠ ರೋಗದಿಂದ ಪೀಡಿತನಾಗಿ ಬಳಲುತ್ತಿರುವನು" ಎಂದು ಚನ್ನ ಉತ್ತರಿಸಿದನು.

"ಎಲ್ಲ ಜನರೂ ರೋಗ ಪೀಡಿತರಾಗುತ್ತಾರೆಯೇ?"

"ಹೌದು ಸ್ವಾಮಿ, ಈ ಪ್ರಪಂಚದಲ್ಲಿ ಎಲ್ಲರೂ ರೋಗ ಪೀಡಿತರಾಗುತ್ತಾರೆ". ರಥವು ಮುಂದೆ ಹೋಗಲು ಪ್ರಾರಂಭಿಸಿತು.

ಮುಂದೆ ಸಿದ್ಧಾರ್ಥನು ಒಂದು ಶವದ ಮೆರವಣಿಗೆಯನ್ನು ನೋಡಿದನು. ರಥವು ನಿಂತಿತು. "ಇದು ಏನು? ಆ ವ್ಯಕ್ತಿಯನ್ನೇಕೆ ನಾಲ್ಕು ಜನ ಹೊತ್ತೊಯ್ಯುತ್ತಿದ್ದಾರೆ, ಅವನೇಕೆ ಚಲಿಸುತ್ತಿಲ್ಲ?" ಎಂದು ಕೇಳಿದನು, "ಅವನು ಮರಣ ಹೊಂದಿರುವನು ಸ್ವಾಮಿ", ಚನ್ನ ಉತ್ತರಿಸಿದ. "ಶರೀರವನ್ನು ಚಾಲನೆಯಲ್ಲಿಡುವ ಜೀವಶಕ್ತಿಯು ಅವನ ಶರೀರವನ್ನು ಬಿಟ್ಟು ಹೋಗಿದೆ", "ಎಲ್ಲ ಮನುಜರು ಮರಣ ಹೊಂದಲೇಬೇಕೆ?" "ಹೌದು ಸ್ವಾಮಿ. ಈ ಪ್ರಪಂಚದಲ್ಲಿ ಹುಟ್ಟಿದ ಎಲ್ಲಾ ಜೀವಿಗಳು ಮರಣ ಹೊಂದಲೇಬೇಕು" ರಥವು ಮುಂದೆ ಚಲಿಸಲು ಪ್ರಾರಂಭಿಸಿತು.

ಮುಪ್ಪು, ರೋಗ ಮತ್ತು ಸಾವಿನ ದೃಶ್ಯಗಳನ್ನು ನೋಡಿದ ಸಿದ್ಧಾರ್ಥನ ಮನಸ್ಸು ಕಳವಳಗೊಂಡಿತು. "ಈ ಸಮಸ್ಯೆಗಳಿಗೆ ಯಾವ ಪರಿಹಾರವೂ ಇಲ್ಲವೆ? ಎಲ್ಲ ಚಿಂತೆಗಳಿಂದ ಮುಕ್ತಿ ಹೊಂದಲು ಯಾವ ಮಾರ್ಗವೂ ಇಲ್ಲವೆ?" ರಥವು ಮುಂದುವರಿಯುತ್ತಿದ್ದಂತೆ ಸಿದ್ಧಾರ್ಥನು ತನ್ನಷ್ಟಕ್ಕೆ

ತಾನು ಆಳವಾಗಿ ಯೋಚಿಸಲಾರಂಭಿಸಿದನು. ಅದೇ ವೇಳೆಗೆ ಒಬ್ಬ ಸನ್ಯಾಸಿ ಅವನಿಗೆದುರಾಗಿ ಬಂದನು. "ಇವನು ಯಾರು? ಇವನೇಕೆ ಈ ವೇಷದಲ್ಲಿದ್ದಾನೆ?" ಎಂದು ಸಿದ್ಧಾರ್ಥ ಚನ್ನನನ್ನು ಪ್ರಶ್ನಿಸಿದನು, "ಈ ವ್ಯಕ್ತಿಯು ಏಕೆ ಅಷ್ಟು ಸಂತುಷ್ಟನಾಗಿರುವನು?" ಸ್ವಾಮಿ! ಚನ್ನ ಉತ್ತರಿಸಿದ, "ಅವನು ಒಬ್ಬ ಸನ್ಯಾಸಿ. ಅವನು ದು:ಖಕ್ಕೆ ಕಾರಣವಾಗುವ ತನ್ನ ಎಲ್ಲ ಲೌಕಿಕ ಭೋಗ ಭಾಗ್ಯಗಳನ್ನು ತ್ಯಜಿಸಿ, ಈ ಐಹಿಕ ಬದುಕಿನ ಎಲ್ಲ ಕ್ಲೇಶಗಳಿಂದ ಮುಕ್ತಿಯನ್ನು ಪ್ರದಾನ ಮಾಡುವ ಪರಾತ್ಪರ ಜ್ಞಾನದ ಪ್ರಾಪ್ತಿಗಾಗಿ ತನ್ನನ್ನು ತಾನು ಸಮರ್ಪಿಸಿಕೊಂಡಿರುವನು".

ಇದನ್ನು ಕೇಳಿದ ಸಿದ್ಧಾರ್ಥನು ತಕ್ಷಣವೇ ತನ್ನ ಕಳವಳದ ಸ್ಥಿತಿಯಲ್ಲೂ ಆಶಾಭಾವವನ್ನು ಹೊಂದಿ ಚನ್ನನಿಗೆ ಅರಮನೆಗೆ ಹಿಂದಿರುಗಲು ಆಜ್ಞಾಪಿಸಿದನು. ಈ ಘಟನೆಯ ಸಮಾಚಾರವು ರಾಜ ಶುದ್ಧೋದನನಿಗೆ ತಲುಪಿತು, ಅವನು ತನ್ನ ಮಗನನ್ನು ಕಳೆದುಕೊಳ್ಳುವ ಯೋಚನೆಯಲ್ಲಿ ಬಹಳ ದು:ಖಿತನಾದನು. ತನ್ನ ಮಗನ ಮನಸ್ಸನ್ನು ಲೌಕಿಕ ಸುಖಗಳಿಗೆ ಆಕರ್ಷಿಸಬಹುದಾದ ವಿಷಯಗಳಲ್ಲಿ ಅವನ ಮನಸ್ಸನ್ನು ತೊಡಗಿಸುವ ವ್ಯರ್ಥ ಪ್ರಯತ್ನದಲ್ಲಿ ರಾಜನು, ರಾಜ್ಯದ ಅತಿ ಸುಂದರ ಯುವತಿಯರನ್ನು ಸಿದ್ಧಾರ್ಥನಿಗಾಗಿ ನರ್ತಿಸಲು ಮತ್ತು ಯಾವ ರೀತಿಯಲ್ಲಾದರೂ ಅವನನ್ನು ಸಂತೋಷ ಪಡಿಸಲು ನಿಯೋಜಿಸಿದನು. ಈ ಭೂಮಿಯಲ್ಲಷ್ಟೇ ಅಲ್ಲದೇ ಸ್ವರ್ಗದಲ್ಲಿಯೂ ಆ ಕನ್ಯೆಯರ ಸೌಂದರ್ಯಕ್ಕೆ ಸಮಾನರಾದವರು ಇರಲಿಲ್ಲ. ಅಂತಹ ಸುಂದರಿಯರು ಯುವರಾಜ ಸಿದ್ಧಾರ್ಥನನ್ನು ರಂಜಿಸಲು ನರ್ತಿಸಿದರು ಮತ್ತು ಹಾಡಿದರು. ಆದರೆ ಸಿದ್ಧಾರ್ಥನ ಮನಸ್ಸನ್ನು ಪರಿವರ್ತಿಸಲು ಅವರಿಂದ ಸಾಧ್ಯವಾಗಲಿಲ್ಲ. ಅವನು ಈಗ ಪರಾತ್ಪರ ಜ್ಞಾನದ ಮಾರ್ಗವನ್ನು ಅರಸುವಲ್ಲಿ ತನ್ನ ಮನಸ್ಸನ್ನು ತೊಡಗಿಸಿದ್ದನು.

# ಆಸ್ತಿಕತೆಯ ವಿಕಾಸ

ಯುವತಿಯರು ನರ್ತಿಸುತ್ತ ಮತ್ತು ಹಾಡುತ್ತಿದ್ದ ಹಾಗೆಯೆ, ಎಲ್ಲೋ ಬೇರೆಯೇ ಲೋಕದಲ್ಲಿದ್ದ ಸಿದ್ಧಾರ್ಥನು ನಿದ್ರೆಗೆ ಹೋದನು. ತಮ್ಮ ಹಾಡು ಕುಣಿತಗಳಲ್ಲಿ ಯಾವ ಆಸಕ್ತಿಯನ್ನೂ ತೋರದೆ ನಿದ್ರಿಸಿದ ಯುವರಾಜನನ್ನು ಕಂಡ ಯುವತಿಯರು ತಾವೂಕೂಡ ಮಲಗಿ ನಿದ್ರಿಸಿದರು. ಅರ್ಧರಾತ್ರಿಯ ವೇಳೆಯಲ್ಲಿ ಸಿದ್ಧಾರ್ಥನು ಎಚ್ಚರಗೊಂಡು ಅರಮನೆಯನ್ನು ತ್ಯಜಿಸಿ ಸನ್ಯಾಸಿಯಾಗಲು ನಿರ್ಧರಿಸಿದನು. ಅವನು ತನ್ನ ಪತ್ನಿ ಮತ್ತು ಮಗನನ್ನು ನೋಡಲು ಹೋದನು. ಅವನು ರಾಜಮನೆತನದ ಶಯನ ಕೊಠಡಿಯನ್ನು ಪ್ರವೇಶಿಸಿದನು, ಅಲ್ಲಿ ಅವನು ತನ್ನ ಮಗ, ತನ್ನ ಪತ್ನಿ ಯಶೋಧರಾ, ಮತ್ತು ಅವಳ ಸೇವಕಿಯರನ್ನೆಲರೂ ಗಾಢ ನಿದ್ರೆಯಲ್ಲಿರುವುದನ್ನು ಕಂಡನು. ಅವರೆಲ್ಲರ ದೇಹಗಳು ನಿದ್ರಾವಸ್ಥೆಯಲ್ಲಿ ಅಂಕುಡೊಂಕಾಗಿ ಹರಡಿಕೊಂಡಿದ್ದು, ಅವರ ತಲೆಕೂದಲುಗಳು ಅಸ್ತವ್ಯಸ್ತವಾಗಿದ್ದವು. ನಿದ್ರೆಯಲ್ಲಿಕೆಲವರು ಹೊರಳಾಡುತ್ತಿದ್ದರು ಮತ್ತೆ ಕೆಲವರು ನರಳುತ್ತಿದ್ದರು, ಇನ್ನೂ ಕೆಲವರು ಜೊಲ್ಲುಸುರಿಸುತ್ತಿದ್ದರು ಮತ್ತೆ ಇನ್ನೂ ಕೆಲವರು ಅಪಾನವಾಯುವನ್ನು ಹೊರಬಿಡುತ್ತಿದ್ದರು "ಓ....ಇದು ಅಸಹ್ಯಕರ", ಎಂದು ಸಿದ್ಧಾರ್ಥ ಅಂದುಕೊಂಡನು. "ಈ ಐಹಿಕ ಜಗತ್ತಿನಲ್ಲಿ ಸುಖದ ಭ್ರಮೆಯು ಬಹಳ ಆಳವಾಗಿರುವುದು, ಅದಾಗ್ಯು ನಾನು ಕಂಡದ್ದೇನೆಂದರೆ ಈ ಜಗತ್ತು ಕೇವಲ ಮುಪ್ಪು, ರೋಗ ಮತ್ತು ಸಾವುಗಳನ್ನು ಪೋಷಿಸುವ ತಾಣವಾಗಿದೆ".

ಅಚಲನಾಗಿದ್ದ ಸಿದ್ಧಾರ್ಥನು ಅಂದು ರಾತ್ರಿಯೇ ಅರಮನೆ ಬಿಟ್ಟನು. ಅವನು ತನ್ನ ರಥವನ್ನೇರಿ ಚನ್ನನಿಗೆ ಅರಮನೆಯಿಂದ ದೂರ ಕರೆದುಕೊಂಡು ಹೋಗಲು ಆಜ್ಞಾಪಿಸಿದನು. ಮಾರನೆಯ ದಿನ ಬೆಳಗಿನ ಜಾವ ಅನೋಮ ನದಿಯ ತೀರದಲ್ಲಿ, ಸಿದ್ಧಾರ್ಥನು ತನ್ನ ಯುವರಾಜನ ಉಡುಗೆಯನ್ನು ತೆಗೆದು, ತನ್ನ ಸುಂದರವಾದ ಕೂದಲುಗಳನ್ನು

# ಬುದ್ಧ

ಕತ್ತರಿಸಿಕೊಂಡನು, ಮತ್ತು ಕಾಡಿಗೆ ಒಬ್ಬಂಟಿಯಾಗಿ ಪ್ರವೇಶಿಸಲು ಸಿದ್ಧನಾದನು. ಕಾಡಿಗೆ ತೆರಳುವ ಮುನ್ನ, ಅವನು ಹೀಗೆ ಹೇಳಿದನು, "ನನಗಾಗಿ ದು:ಖಿಸಬೇಡ; ಆದರೆ, ದು:ಖದ ಫಲವನ್ನೇ ಪ್ರದಾನಿಸುವ ಪ್ರಾಪಂಚಿಕ ಭೋಗಭಾಗ್ಯಗಳ ಲಾಲಸೆಯನ್ನು ಈಡೇರಿಸುವ ಸಲುವಾಗಿ ಈ ಭೌತಿಕ ಜಗತ್ತಿನಲ್ಲೇ ಉಳಿಯ ಬಯಸುವ ಜನರಿಗಾಗಿ ವ್ಯಥೆಪಡು". ಅಳುತ್ತ ಚನ್ನ, ರಾಜ ಶುದ್ಧೋದನನಿಗೆ ಜರುಗಿದ ದೊಡ್ಡ ಅನಾಹುತದ ಬಗ್ಗೆ ತಿಳಿಸಲು ಅರಮನೆಗೆ ಹಿಂದಿರುಗಿದನು. ಪರಿಣಾಮವಾಗಿ ಕುತರ್ಕ ಅಥವಾ ವಿತಂಡವಾದದಲ್ಲಿ, ಭೌತಿಕ ಸುಖದ ಸಿದ್ಧಿಗಾಗಿ ಶಾಸ್ತ್ರೋಕ್ತ ಧರ್ಮಾಚರಣೆಯಲ್ಲಿ ತೊಡಗಿದ್ದ ಹಾಗೂ ಪ್ರಾಪಂಚಿಕ ಸುಖಾನುಭವವೇ ಜೀವನದ ಪರಮಗುರಿ ಎಂದು ನಂಬಿ ಬದುಕುತ್ತಿದ್ದ ಭಾರತೀಯರು ಅಧಿಕಸಂಖ್ಯೆಯಲ್ಲಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ಸಾರನಾಥದಲ್ಲಿ ಬುದ್ಧನು ತನ್ನ ಶಿಷ್ಯರಿಗೆ ನೀಡಿದ ಧರ್ಮೋಪದೇಶದಲ್ಲಿ ದು:ಖ, ಸಮುದಾಯ, ನಿರೋಧ ಹಾಗೂ ಮಾರ್ಗಗಳೆಂಬ ನಾಲ್ಕು ಉದಾತ್ತ ಸತ್ಯಗಳನ್ನು ಬೋಧಿಸಿದ. ದು:ಖ: ಈ ಪ್ರಪಂಚದಲ್ಲಿಸದಾ ದು:ಖದ ಅಸ್ತಿತ್ವವಿದೆ; ಸಮುದಾಯ: ದು:ಖಕ್ಕೆ ಕಾರಣವಿದೆ; ನಿರೋಧ: ದು:ಖದಿಂದ ಪಾರಾಗಬಹುದು; ಮಾರ್ಗ: ದು:ಖದಿಂದ ಪಾರಾಗಿ ಮುಕ್ತರಾಗುವುದಕ್ಕೆ ಒಂದು ಪ್ರಕ್ರಿಯೆಯಿದೆ. "ಓ ನನ್ನ ಶಿಷ್ಯರೇ, ಹುಟ್ಟು, ಮುಪ್ಪು, ರೋಗ ಮತ್ತು ಸಾವು. ಇವು ನಾಲ್ಕು ದು:ಖದ ನೈಜತೆಗಳು. ಕಾಮಾಸಕ್ತಿ ಮತ್ತು ಅತ್ಯಾಶೆ, ಇಂದ್ರಿಯ ಭೋಗದ ಮತ್ತು ಅಧಿಕಾರದ ದಾಹ, ಇವು ದು:ಖಕ್ಕೆ ಕಾರಣಗಳು: ಕಾಮಾಸಕ್ತಿಯನ್ನು ಮತ್ತು ಅತ್ಯಾಶೆಯನ್ನು ಶಮನಗೊಳಿಸುವುದು, ಅವುಗಳನ್ನು ಬಿಟ್ಟುಬಿಡುವುದು, ಹೊರ ಹಾಕುವುದು, ತನ್ನನ್ನು ತಾನು ಅವುಗಳಿಂದ ಬೇರ್ಪಡಿಸುವುದು, ನಮ್ಮೊಳಗೆ ಅವು ಇರುವುದಕ್ಕೆ ಆಸ್ಪದ ಕೊಡದೇ ಇರುವುದರ ಮೂಲಕ ದು:ಖದಿಂದ ಪಾರಾಗಬಹುದು; ಯುಕ್ತವಾದ ನಂಬಿಕೆ, ಯುಕ್ತವಾದ ಬಯಕೆ, ಯುಕ್ತವಾದ ನುಡಿ, ಯೋಗ್ಯ ಬದುಕು, ಯುಕ್ತ

# ಆಸ್ತಿಕತೆಯ ವಿಕಾಸ

ಪರಿಶ್ರಮ ಮತ್ತು ಯುಕ್ತ ಆನಂದ ಇವು ದು:ಖದಿಂದ ಮುಕ್ತಿಯನ್ನು ಕೊಡಬಲ್ಲ ಪ್ರಕ್ರಿಯೆಗಳು". ಎಂಬತ್ತು ವರುಷಗಳ ಕಾಲ ತನ್ನ ಬದುಕಿನ ಕೊನೆಯವರೆಗೂ ಬುದ್ಧ "ಧರ್ಮಶಾಸ್ತ್ರದ ಚಕ್ರದ ತಿರುಗಿಸುವಿಕೆ" ಎಂಬ ತನ್ನ ಧರ್ಮೋಪದೇಶಗಳನ್ನು ಬೋಧಿಸುತ್ತಾ ದೇಶದೆಲ್ಲೆಡೆ ಸಂಚರಿಸಿದನು ದು:ಖದ ಪ್ರಪಂಚದಾಚೆ ಶಾಂತಿಯಿದೆ ಅಥವಾ ನಿರ್ವಾಣವಿದೆ. ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳನ್ನು ನಿಯಂತ್ರಿಸಿ ಶುದ್ಧರಾದವರಿಗೆ ಮಾತ್ರ ಇದು ಪ್ರಾಪ್ತಿಯಾಗುತ್ತದೆ ಎಂದು ಅವರು ಬೋಧಿಸಿದರು. ದೈಹಿಕ ಮತ್ತು ಮಾನಸಿಕ ನೆಲೆಯಲ್ಲಿ ತಮ್ಮನ್ನು ತಾವು ಹಿಂಸೆಯ ಜೀವನದಿಂದ ನಿಗ್ರಹಿಸಿಕೊಂಡವರು ಸತ್ಯವನ್ನು ಅರಿಯಲು ಸಮರ್ಥರು ಎಂದು ಸಾರಿದನು.

ಬುದ್ಧನ ಸಿದ್ಧಾಂತವು ಅವನು ಸ್ಥಾಪಿಸಿದ ಸಮಯದಿಂದ ಪ್ರಪಂಚದ ಉದ್ದಗಲಕ್ಕೆ ಎಲ್ಲೆಡೆಯೂ ಪ್ರಚಾರವಾಗಿದೆ. ಬೌದ್ಧ ಧರ್ಮದ ಅನೇಕ ರೂಪಗಳು ಜಗತ್ತಿನಲ್ಲಿ ಪ್ರಚಲಿತವಾಗಿದ್ದರೂ, ಅವರೆಲ್ಲರೂ ಅನುಸರಿಸುವ ಮೂಲಭೂತವಾದ ಕೆಲವು ಸಾಮಾನ್ಯ ತತ್ತ್ವಗಳು ಆ ಧರ್ಮದ ಮೂಲ ಸ್ಥಾಪಕನ ಸುಳಿವನ್ನು ಕೊಡುತ್ತವೆ. ಉದಾಹರಣೆಗೆ ಬೌದ್ಧರೆಲ್ಲರೂ ಜೀವನದ ಸಮಸ್ಯಾತ್ಮಕ ಚಿತ್ರಣಕ್ಕೆ ನಕಾರಾತ್ಮಕ ಪರಿಹಾರವನ್ನು ಹುಡುಕುತ್ತಾರೆ. ಆತ್ಮಸಾಕ್ಷಾತ್ಕಾರದ ಕುರಿತು ಅವರು ಮೌನವಾಗಿದ್ದಾರೆ. ಅವರು ತಮ್ಮ ಪ್ರಾಯೋಗಿಕ ಅನುಷ್ಠಾನದ ಮಾರ್ಗವನ್ನು ಅವಲಂಬಿಸಿ ತಮ್ಮ ಐಹಿಕ ಬದುಕಿನ ವಿಸರ್ಜನೆಯನ್ನು ಬಯಸುತ್ತಾರೆ. ಹೀಗೆ ಬೌದ್ಧ ಧರ್ಮದ ತಿರುಳು ಆಧುನಿಕ ವೈಜ್ಞಾನಿಕ ಮಾರ್ಗಕ್ಕೆ ಬಹಳ ನಿಕಟವಾಗಿದೆ.

ಅನೇಕ ಕಾರಣಗಳಿಗೆ ಬುದ್ಧನು ಆಸ್ತಿಕ ಮತ್ತು ನಾಸ್ತಿಕ ವರ್ಗಗಳಿಂದ ಸಮಾನವಾಗಿ ಗೌರವಿಸಲ್ಪಟ್ಟಿದ್ದಾನೆ. ಅವನ ನಿಜವಾದ ಅನುಯಾಯಿಗಳಾದ ನಾಸ್ತಿಕರು ಅವನ ಅನೀತಿಯ ಖಂಡನೆ ಮತ್ತು

# ಬುದ್ಧ

ನೈತಿಕ ಜೀವನವೂ ತನ್ನಷ್ಟಕ್ಕೆ ತಾನೇ ಯಾವುದೇ ನಿಖರವಾದ ಶಾಶ್ವತ ಫಲಿತಾಂಶಗಳನ್ನು ಉತ್ಪಾದಿಸಲು ಅಸಮರ್ಥ ಎನ್ನುವ ಏಕಕಾಲಿಕ ನಿರ್ಣಯವನ್ನು ಆದರಿಸುತ್ತಾರೆ. ಕರ್ಮದ ಕ್ರಿಯೆ ಹಾಗೂ ಪ್ರತಿಕ್ರಿಯೆಗಳ ಸಂಕೋಲೆಯಿಂದ ಬಿಡಿಸಿಕೊಳ್ಳಲು ಅವನು ಪ್ರತಿಪಾದಿಸಿದ ಪ್ರಾಯೋಗಿಕ ಕಸರತ್ತು ಕಟ್ಟಕಡೆಗೆ ಪ್ರಕೃತಿನಿರ್ವಾಣವೆಂಬ ಸ್ವಯಂವಿನಾಶದಲ್ಲಿ ಕೊನೆಗೊಳ್ಳುತ್ತದೆ. ತರ್ಕ ಸಮ್ಮತವಾದ ವೈಚಾರಿಕತೆಯು ಅಲೌಕಿಕ ಬದುಕಿಗಾಗಲೀ ಅಥವಾ ಭಗವತ್ಪ್ರಜ್ಞೆಗಾಗಲೀ ಸರಿಯಾದ ಮಾರ್ಗವಲ್ಲ ಎಂಬ ನಿರ್ಣಯಕ್ಕೆ ಒತ್ತುಕೊಡುವ ಅವನ ಪ್ರತಿಪಾದನೆಯನ್ನು ಆಸ್ತಿಕ ವರ್ಗದವರು ಶ್ಲಾಘಿಸುತ್ತಾರೆ. ಬುದ್ಧ ಪ್ರಾಯೋಗಿಕ ಉಹಾಪೋಹಗಳಿಂದ ಪರಿಣಮಿಸುವ ಸ್ವಾಭಾವಿಕವಾದ ಪ್ರಸಂಗಗಳನ್ನು ವಿವರಿಸಿದನು, ಆದರೆ ದೇವರ ಅಸ್ತಿತ್ವದ ಬಗ್ಗೆ ನೇರವಾಗಿ ವ್ಯಾಖ್ಯಾನಿಸಲಿಲ್ಲ. ಅಲೌಕಿಕತೆಯ ಪೂರ್ವಕಲ್ಪಿತ ಉಹಾಪೋಹಗಳನ್ನು ವಿರೋಧಿಸಿದ ಬುದ್ಧ ಎಂದಿಗೂ ಅಲೌಕಿಕತೆಯ ಅಸ್ತಿತ್ವವನ್ನು ಅಥವಾ ಅದನ್ನು ಪ್ರಾಪ್ತಿಮಾಡಿಕೊಳ್ಳುವ ಸಾಧ್ಯತೆಯನ್ನು ನಿರಾಕರಿಸಲಿಲ್ಲ. ಬದಲಾಗಿ ಜ್ಞಾನದ ಪ್ರಯೋಗದಿಂದ ಪರಮ ಸತ್ಯವನ್ನು ಸಾಕ್ಷಾತ್ಕಾರಿಸಲು ಸಾಧ್ಯವಿಲ್ಲವೆಂದು ಬೋಧಿಸಿದನು. ಅಂತಹ ಸತ್ಯತೆಯ ಅಸ್ತಿತ್ವದ ಬಗೆಗಿನ ಜಿಜ್ಞಾಸೆಯನ್ನು ಪ್ರೋತ್ಸಾಹಿಸದ ಕಾರಣ ನಾಸ್ತಿಕನಂತೆ ಕಂಡುಬಂದ.

ವೇದಗಳ ಅಧಿಕಾರವನ್ನು ನಿರಾಕರಿಸಿದುದು ಬುದ್ಧನನ್ನು ನಾಸ್ತಿಕ ಎಂದು ಗುರುತಿಸಲು ಇನ್ನೊಂದು ಕಾರಣವಾಯಿತು. ಕೂಲಂಕುಶವಾಗಿ ಗಮನಿಸಿದರೆ ಧರ್ಮದ ತತ್ತ್ವಗಳನ್ನು ಪುನಸ್ಸ್ಥಾಪಿಸುವ ನಿಟ್ಟಿನಲ್ಲಿ ಇದೊಂದು ಕುಶಲವಾದ ಯೋಜನೆ ಎಂದು ವಿವರಿಸಬಹುದು. ಹಳೆಯ ಗಾದೆ ಮಾತಿನಂತೆ, "ಮುರುಕಲು ಮನೆಯನ್ನು ಸರಿಪಡಿಸುವುದಕ್ಕಿಂತ ಹೊಸ ಮನೆಯನ್ನು ಕಟ್ಟುವುದು ಸುಲಭ".

# ಆಸ್ತಿಕತೆಯ ವಿಕಾಸ

ಬುದ್ಧನ ಜನ್ಮದ ಸಮಯದಲ್ಲಿ, ಜನರು ಸರ್ವೇಸಾಮಾನ್ಯ ನಾಸ್ತಿಕರಾಗಿದ್ದರು ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ಮಾಂಸ ಸೇವನೆಯನ್ನು ಬಯಸುತ್ತಿದರು. ವೈದಿಕ ಆಧಾರದಲ್ಲಿ ಪಶುಬಲಿಯ ನೆಪವನ್ನು ಮುಂದಿಟ್ಟುಕೊಂಡು ದೇವಸ್ಥಾನಗಳು ಕೂಡಾ ವಧಾಸ್ಥಾನಗಳಾಗಿ ಮಾರ್ಪಟ್ಟಿದ್ದವು ಮತ್ತು ಪ್ರಾಣಿ ಹತ್ಯೆಯು ಯಾವುದೇ ನಿರ್ಬಂಧವಿಲ್ಲದೆ ನಡೆಯುತ್ತಿತ್ತು. ಹಾಗಾಗಿ ಪ್ರಾಣಿಗಳ ಮೇಲೆ ಕನಿಕರತೋರಿ ಬುದ್ಧ ಅಹಿಂಸೆಯನ್ನು ಪ್ರಚಾರ ಪ್ರತಿಪಾದಿಸಿದ.

ದೌರ್ಜನ್ಯವೇ ಜೀವನಕ್ಕೆ ಮಾದರಿಯಾಗಿದ್ದ ಸಮಯದಲ್ಲಿ, ಹಾಗೂ, ಸ್ವರ್ಗ ಸುಖವನ್ನು ಅನುಭವಿಸುವ ಉದ್ದೇಶದಿಂದ ಜನರು ದೇವತೆಗಳನ್ನು ಪ್ರಾರ್ಥಿಸುವುದನ್ನು ಅರಿತ ಬುದ್ಧನು, ಜನರು ವೇದಗಳನ್ನು ತಪ್ಪಾಗಿ ಈರೀತಿ ಅರ್ಥೈಸಿಕೊಳ್ಳುವುದಾದರೆ ಈ ತರಹದ ಜನರಿಂದ ವೇದಗಳನ್ನು ದೂರವಿರಿಸಿದರೆ ಇವರು ಇದಕ್ಕಿಂತ ಉತ್ತಮವಾಗಿ ಜೀವನ ನಡೆಸುವುದು ಸಾಧ್ಯವಾಗಬಹುದು ಎಂದು ತರ್ಕಿಸಿದ. ನಿಜವಾಗಿ ಹೇಳುವುದಾದರೆ ಬುದ್ಧನು ಆಗಿನ ಕಾಲಕ್ಕನುಗುಣವಾಗುವ ರೀತಿಯಲ್ಲಿ ವೈದಿಕ ತತ್ತ್ವಗಳ ಒಂದು ಭಾಗವಾದ ಅಹಿಂಸೆಯನ್ನು ಪ್ರಧಾನವಾಗಿ ಬೋಧಿಸಿದನು. ಹೀಗೆ ನಾಸ್ತಿಕನಾಗಿ ಕಂಡುಬರುವ ಬುದ್ಧ ತನ್ನ ಬುದ್ಧಿವಂತಿಕೆಯಿಂದ ಭವಿಷ್ಯದ ಆಸ್ತಿಕತೆಯ ವಿಕಾಸಕ್ಕೆ ರಂಗ ಸಜ್ಜುಮಾಡಿದ.

“ಏಳಿ ಎದ್ದೇಳಿ ತಡೆ ಮಾಡಬೇಡಿ,
ಪರಿಶುದ್ಧ ಜೀವನವನ್ನು ಅನುಸರಿಸಿ!
ಯಾರು ಸದ್ಗುಣವನ್ನು ಅನುಸರಿಸುವರೊ ಅವರು ಈ ಪ್ರಪಂಚದಲ್ಲಿ ಮತ್ತು ಮುಂದಿನ ಜನ್ಮದಲ್ಲಿ ಆನಂದದಲ್ಲಿ ನೆಲೆಸಿರುತ್ತಾರೆ”.



# ಭಾಗ ಎರಡು
# ಶಂಕರಾಚಾರ್ಯರು

## ಶಿವನ ಅವತಾರ

ಲೋಕದ ಸೃಷ್ಟಿಯ ಹಾಗೂ ಅದರ ಜೈವಿಕ ರಹಸ್ಯಗಳ ಬಗ್ಗೆ ಅರಿಯಲು ಪ್ರಯತ್ನಿಸುವ ಜಿಜ್ಞಾಸೆಯ ಕಾಲ ನಮ್ಮದು. ಬುದ್ಧಿವಂತ ಜನರಾಗಿ, ನಾವು ನಮ್ಮ ಪ್ರಸ್ತುತ ಜೀವನದ ಆಚೆಗಿನ ವಿಷಯಗಳನ್ನು ತಿಳಿಯಲು ಹಂಬಲಿಸುತ್ತೇವೆ. ನಾವು ಯಾರು ಮತ್ತು ನಾವು ಎಲ್ಲಿಂದ ಬಂದಿದ್ದೇವೆ ಎಂಬುದರ ಬಗ್ಗೆ ನಮ್ಮ ತಿಳುವಳಿಕೆಯನ್ನು ವೃದ್ಧಿಗೊಳಿಸಲು ನಾವು ಈ ಪ್ರಪಂಚದ ವಸ್ತುಗಳ ಸ್ವಭಾವದ ಬಗ್ಗೆ ಅಧ್ಯಯನ ಮಾಡುತ್ತೇವೆ. ನಮ್ಮ ಮುಂದಿನ ಪೀಳಿಗೆಗೆ ನಮ್ಮ ಸಂಶೋಧನೆಗಳ ಸಂಪತ್ತು ಉಪಯೋಗವಾಗಲೆಂದು ನಮ್ಮ ಪುಸ್ತಕ ಭಂಡಾರವನ್ನು ದೊಡ್ಡ ಪ್ರಮಾಣದಲ್ಲಿ ಪುಸ್ತಕಗಳಿಂದ ತುಂಬಿಸುತ್ತೇವೆ. ಇವೆಲ್ಲವನ್ನು ನಾವು ಜ್ಞಾನ ಮತ್ತು ವಿಜ್ಞಾನದ ಅಭಿವೃದ್ಧಿಯ ಹೆಸರಿನಲ್ಲಿ ಮಾಡುತ್ತೇವೆ. ಆದರೆ ಜೀವನದ ರಹಸ್ಯಗಳ ಬಗ್ಗೆ ಶೋಧಿಸುವಲ್ಲಿ ನಾವು ಮೊದಲಿಗರಲ್ಲ. ನಮ್ಮ ಶೋಧನೆಗಳಿಗಿಂತ ಮುಂಚಿತವಾಗಿಯೆ ಈ ನಿಟ್ಟಿನಲ್ಲಿ ಅನೇಕ ಶ್ರೇಷ್ಠ ಸಂಸ್ಕೃತಿಗಳು ಅಜ್ಞಾತದಲ್ಲಿ ಆಳವಾಗಿ ಹಾದು ಹೋಗಿರುತ್ತವೆ. ಇತಿಹಾಸ ಕಂಡ ಅಂತಹ ಒಂದು ಪ್ರಮುಖಕಾಲ, ಆತ್ಮಸಾಕ್ಷಾತ್ಕಾರದ ಬಗ್ಗೆ ಆಧ್ಯಾತ್ಮಿಕ ಚಿಂತನೆಯ ಪ್ರಕ್ರಿಯೆಯನ್ನು ಮೂಲತ: ಪರಿಶೋಧಿಸಿ ಅದಕ್ಕೆ ಚಾಲನೆಯನ್ನು ನೀಡಿದ ಅದ್ವೈತ ವೇದಾಂತವನ್ನು ಬೆಳಕಿಗೆ ತಂದ ಶಂಕರಾಚಾರ್ಯರದು.

ಎಂಟನೆಯ ಶತಮಾನದಲ್ಲಿ ಶಂಕರಾಚಾರ್ಯರು ದಕ್ಷಿಣ ಭಾರತದಲ್ಲಿ ಅವಿರ್ಭವಿಸಿದರು. ಮಾನವ ಜನಾಂಗವನ್ನು ಪ್ರಗತಿಪರ ಚಿಂತನೆಯ

# ಆಸ್ತಿಕತೆಯ ವಿಕಾಸ

ಮೂಲಕ ಅಮರತ್ವದೆಡೆಗೆ ಮಾರ್ಗದರ್ಶಿಸುವ ವೇದಗಳ ಅಧಿಕಾರವು ಅಂದು ಬೌದ್ಧಮತದ ವಿಚಾರಗಳ ತೀವ್ರ ಪ್ರಭಾವದಿಂದ ಬಹಳ ಕ್ಷೀಣಿಸಿತ್ತು. ಆ ಸಮಯದಲ್ಲಿ ಭಾರತದ ಬಹಳಷ್ಟು ತತ್ತ್ವಜ್ಞಾನಿಗಳು ಬುದ್ಧನ ಶೂನ್ಯವಾದ ಸಿದ್ಧಾಂತವಾದ ಪ್ರಕೃತಿ ನಿರ್ವಾಣ ಅಥವಾ ನಕಾರಾತ್ಮಕ ಅಸ್ತಿತ್ವ ತತ್ತ್ವದ ಬೋಧನೆಗಳನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯಲ್ಲಿ ಈಶ್ವರ(ಪರಾತ್ಪರ ಸತ್ಯ) ಮತ್ತು ಜೀವ(ಪರಾತ್ಪರ ಸತ್ಯದ ಶಾಶ್ವತ ಅಂಶಗಳು)ತತ್ತ್ವಕ್ಕೆ ಸಂಬಂಧಿಸಿದ ವೈದಿಕ ಸಿದ್ಧಾಂತಗಳನ್ನು ತ್ಯಜಿಸಿದ್ದರು. ಸಾಮ್ರಾಟ ಅಶೋಕನಂತಹ ಬಲಿಷ್ಠ ರಾಜನ ಆಶ್ರಯದಲ್ಲಿ ಬೌದ್ಧ ಧರ್ಮವು ಭಾರತದ ಉದ್ದಗಲಕ್ಕೂ ಪ್ರಚಾರವಾಗಿತ್ತು. ಏನೇ ಆದರೂ ತಮ್ಮ ವಿಶಾಲವಾದ ಜ್ಞಾನದ ಸಾಮರ್ಥ್ಯದಿಂದ ಮತ್ತು ತತ್ತ್ವಶಾಸ್ತ್ರ ಸಂಬಂಧಿತ ಚರ್ಚೆಗಳಲ್ಲಿ ವಿರೋಧಿ ಸಿದ್ಧಾಂತಗಳನ್ನು ಪರಾಭವಗೊಳಿಸುವ ಚಾಕಚಕ್ಯತೆಯಿಂದ ಶಂಕರಾಚಾರ್ಯರು ಉಪನಿಷತ್ತು ಹಾಗೂ ವೇದಾಂತಗಳಂತಹ ವೈದಿಕ ಗ್ರಂಥಗಳ ಪ್ರತಿಷ್ಠೆಯನ್ನು ಪುನರ್ಸ್ಥಾಪಿಸುವಲ್ಲಿ ಯಶಸ್ವಿಯಾದರು. ಭಾರತದಲ್ಲಿ ಸಂಚರಿಸಿದೆಲ್ಲೆಡೆ ಶಂಕರಾಚಾರ್ಯರು ಜಯಶಾಲಿಯಾಗುತ್ತಿದ್ದರು ಮತ್ತು ಅವರಿಗೆ ವಿರೋಧವಾದ ಸಿದ್ಧಾಂತಗಳು ಶರಣಾಗಿ ತಲೆ ಬಾಗುತ್ತಿದ್ದವು. ಶಂಕರಾಚಾರ್ಯರು ಬೌದ್ಧಮತದ ತತ್ತ್ವಗಳನ್ನು ಸಂಹಾರಗೊಳಿಸುತ್ತ ತಮ್ಮ ಅದ್ವೈತ ಸಿದ್ಧಾಂತವನ್ನು ಸ್ಥಾಪಿಸಿದರು.

ಭೌತಿಕ ಅಸ್ತಿತ್ವವು ಮಾಯೆ ಅಥವಾ ಅಸತ್ ಎಂಬ ಬೌದ್ಧ ಸಿದ್ಧಾಂತವನ್ನು ಅವರು ಒಪ್ಪಿಕೊಂಡರು, ಆದರೆ ಬೌದ್ಧರ ಪ್ರಕೃತಿ ನಿರ್ವಾಣ ತತ್ತ್ವದ ಬಗ್ಗೆ ಅಸಮ್ಮತಿ ತೋರಿದರು. ನಕಾರಾತ್ಮಕ ಪ್ರಧಾನವಾದ ಭ್ರಮೆಯ ಐಹಿಕ ಜಗತ್ತಿಗೆ ಸಕಾರಾತ್ಮಕ ಪರ್ಯಾಯವಾಗಿ ಆಧ್ಯಾತ್ಮಿಕ ಸಾರವನ್ನುಳ್ಳ ಬ್ರಹ್ಮನ್ ತತ್ತ್ವವನ್ನು ಪರಿಚಯಿಸಿದರು. ಅವರ ತತ್ತ್ವಶಾಸ್ತ್ರವು ಸಂಕ್ಷಿಪ್ತವಾಗಿ ಈ ಶ್ಲೋಕದಲ್ಲಿ ಅಡಗಿದೆ **'ಬ್ರಹ್ಮ**

# ಶಂಕರಾಚಾರ್ಯರು

**ಸತ್ಯಂ ಜಗನ್–ಮಿಥ್ಯಾ**' ಇದರ ಅರ್ಥ ಬ್ರಹ್ಮನ್ ಅಥವಾ ಆತ್ಮವು ಸತ್ಯ, ಈ ಜಗತ್ತು ಮಿಥ್ಯಾ. ಶಂಕರಚಾರ್ಯರ ಸಿದ್ಧಾಂತವು ಆಸ್ತಿಕತೆ ಮತ್ತು ನಾಸ್ತಿಕತೆಯ ನಡುವಿನ ಒಂದು ಒಡಂಬಡಿಕೆ. ಕಾಲ, ಸ್ಥಳ ಮತ್ತು ಸಂದರ್ಭಗಳಿಗನುಗುಣವಾಗಿ ಬೌದ್ಧರನ್ನು ಪರಿಪೂರ್ಣವಾದ ಆಸ್ತಿಕತೆಯದೆಡೆಗೆ ಸಂಪೂರ್ಣವಾಗಿ ಪರಿವರ್ತಿಸಲು ಸಾಧ್ಯವಿಲ್ಲದಿದ್ದ ಕಾರಣ ಶಂಕರಾಚಾರ್ಯರು ಆಸ್ತಿಕತೆ ಮತ್ತು ನಾಸ್ತಿಕತೆಯ ನಡುವಿನ ಒಂದು ಸಿದ್ಧಾಂತವನ್ನು ಸ್ಥಾಪಿಸಿದರು ಎಂದು ಹೇಳಲಾಗಿದೆ.

ಭಾರತದಲ್ಲಿ ತತ್ತ್ವಜ್ಞಾನದ ಪ್ರಾಚಾರ್ಯರು ಶಂಕರಚಾರ್ಯರ ನಿಕ್ಷಿಪ್ತವಾದ ವ್ಯಕ್ತಿತ್ವವನ್ನು ಪರಿಚಯಿಸುವ ಪದ್ಮ ಪುರಾಣದ ಈ ಶ್ಲೋಕವನ್ನು ಉಲ್ಲೇಖಿಸುತ್ತಾರೆ.

**ಮಾಯವಾದಮ್ ಅಸಚ್ಛಾಸ್ತ್ರಮ್**
**ಪ್ರಚ್ಛಾನ್ನಂ ಬೌದ್ಧಮುಚ್ಯತೆ**
**ಮಯ್ಯೈವ ವಿಹಿತಂ ದೇವಿ**
**ಕಲೌ ಬ್ರಾಹ್ಮಣ ಮೂರ್ತಿನ:**

"ಶಿವನು ಪಾರ್ವತಿಗೆ ಹೇಳುತ್ತಾನೆ, ಮಾಯಾವಾದವು ಬೌದ್ಧ ತತ್ತ್ವದಿಂದ ಆವೃತವಾಗಿರುತ್ತದೆ. ಕಲಿಯುಗದಲ್ಲಿ ಬ್ರಾಹ್ಮಣ ರೂಪದಲ್ಲಿ ನಾನು ಈ ಊಹಾತ್ಮಕ ತತ್ತ್ವವನ್ನು ಬೋಧಿಸುತ್ತೇನೆ". ಹಾಗಾಗಿ ಶಂಕರಚಾರ್ಯರನ್ನು ಶಿವನ ಅವತಾರವೆಂದು ವ್ಯಾಪಕವಾಗಿ ಒಪ್ಪಿಕೊಳ್ಳಲಾಗುತ್ತಿದೆ.

ಶಂಕರಾಚಾರ್ಯರು ಭಾರತದ ದಕ್ಷಿಣ ಪ್ರಾಂತ್ಯದ ಕಾಲಡಿ ಎಂಬ ಸಣ್ಣ ಗ್ರಾಮದಲ್ಲಿ ಶಿವಗುರು ಎಂಬ ವೈದಿಕ ಬ್ರಾಹ್ಮಣ ಮತ್ತು ಅವನ

# ಆಸ್ತಿಕತೆಯ ವಿಕಾಸ

ಪತ್ನಿ ಆರ್ಯಾ ಎಂಬ ದಂಪತಿಗಳಿಗೆ ಪುತ್ರನಾಗಿ ಆವಿರ್ಭವಿಸಿದರು. ಶಂಕರ(ಅವರ ತಂದೆ ಇಟ್ಟ ಹೆಸರು)ರ ಶ್ರೇಷ್ಠ ವ್ಯಕ್ತಿತ್ವವು ಅವರ ಬಾಲ್ಯಾವಸ್ಥೆಯಲ್ಲಿಯೇ ವ್ಯಕ್ತವಾಗುತ್ತಿತ್ತು . ಹುಡುಗನು ದೊಡ್ಡ ಪಂಡಿತನಾಗುವನು, ಅಧರ್ಮ ಮತ್ತು ಅಪಸಿದ್ಧಾಂತಗಳನ್ನು ನಶಿಸುವುದರ ವಿಷಯದಲ್ಲಿ ಶಂಕರಾಚಾರ್ಯರು ಬಾಳೆಹಣ್ಣಿನ ತೋಟದಲ್ಲಿ ಒಂದು ಆನೆ ಪ್ರವೇಶಿಸಿದ ಹಾಗೆ ಎಂದು ಅವರ ಜನನ ಸಮಯದಲ್ಲೇ ಜ್ಯೋತಿಷಿಯರು ಭವಿಷ್ಯ ನುಡಿದಿದ್ದರು. ವಿದ್ಯಾರ್ಥಿಯಾಗಿ ಶಂಕರರು ಬಹಳ ಬೇಗ ಸಂಸ್ಕೃತ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದರು. ಅವರಿಗೆ ಅದ್ಭುತವಾದ ಜ್ಞಾಪಕಶಕ್ತಿ ಇತ್ತು; ಅವರ ಶಿಕ್ಷಕರು ಹೇಳಿದ್ದೆಲ್ಲಾ ಅವರ ಮನಸ್ಸಿನಲ್ಲಿ ಸದಾ ಉಳಿಯುತ್ತಿತ್ತು. ಯವುದನ್ನು ಒಬ್ಬ ಸಾಮಾನ್ಯ ವಿದ್ಯಾರ್ಥಿ ಕಲಿಯಲು ೧೨ ವರುಷ ಅಭ್ಯಾಸ ಮಾಡುತಿದ್ದರೋ ಶಂಕರರು ಕೇವಲ ಒಂದು ವರುಷದಲ್ಲಿಯೆ ಅದರಲ್ಲಿ ಪ್ರಾವೀಣ್ಯತೆಯನ್ನು ಹೊಂದುತ್ತಿದ್ದರು.

ಶಂಕರರು ಮೂರು ವರ್ಷದವರಿದ್ದಾಗ ಅವರ ತಂದೆಯು ತೀರಿಕೊಂಡರು. ತಾಯಿ ಮತ್ತು ಮಗನಿಗೆ ಜೀವನ ಕಷ್ಟವಾಗಿತ್ತು ಆದರೆ ದೇವರ ಅನುಗ್ರಹದಿಂದ ಅವರ ಅನುಕೂಲಕ್ಕೆ ತಕ್ಕಂತೆ ನೆಮ್ಮದಿಯ ಜೀವನ ನಡೆಸಿದರು. ಶಂಕರರು ಎಂಟನೆ ವರುಷದ ವರೆಗೆ ವಿದ್ಯಾಭ್ಯಾಸ ಮುಂದುವರೆಸಿ ನಂತರ ವೈರಾಗ್ಯದ ಜೀವನ ನಡೆಸಲು ಸನ್ಯಾಸ ಸ್ವೀಕಾರ ಮಾಡಲು ನಿರ್ಧರಿಸಿದರು. ಒಂದು ದಿನ ಶಂಕರರು ತಮ್ಮ ತಾಯಿಗೆ ಹೀಗೆ ಹೇಳಿದರು, ‘‘ಈ ಭೂಮಿಯ ಮೇಲೆ ಮನುಷ್ಯನ ಜೀವನ ಎಷ್ಟು ದು:ಖಭರಿತವಾದದ್ದೆಂದರೆ ಅವನು ಎಂದೂ ಇಲ್ಲಿ ಹುಟ್ಟಬಾರದಿತ್ತೆಂದು ಕೆಲವುಬಾರಿ ಇಚ್ಛಿಸುತ್ತಾನೆ. ಈ ದೇಹವು ನಿಯಮಿತ ಸಮಯದಲ್ಲಿ ನಶಿಸುತ್ತದೆಂದು ಮನುಷ್ಯರಲ್ಲಿ ಅತಿ ದಡ್ಡನಾದವನಿಗೂ ತಿಳಿದಿರುವ ವಿಷಯ. ಸಂಸಾರದ ಚಕ್ರದಲ್ಲಿ ಒಬ್ಬನು ಕೋಟಿಗಟ್ಟಲೆ ಸಾರಿ

# ಶಂಕರಾಚಾರ್ಯರು

ಹುಟ್ಟುತ್ತಿರುತ್ತಾನೆ ಮತ್ತು ಸಾಯುತ್ತಿರುತ್ತಾನೆ ಎಂಬ ತಿಳುವಳಿಕೆ ಒಬ್ಬ ಯೋಗಿಗೆ ಮಾತ್ರ ಇರುತ್ತದೆ. ಸಂಸಾರದ ಚಕ್ರದಲ್ಲಿ ಅವನು ಕೆಲವುಬಾರಿ ಮಗನಾಗಿ, ಒಬ್ಬ ತಂದೆಯಾಗಿ, ಪತಿಯಾಗಿ, ಮಗಳಾಗಿ, ತಾಯಿಯಾಗಿ, ಅಥವಾ ಪತ್ನಿಯಾಗಿ ಪಾತ್ರವಹಿಸುತ್ತ ಕೊನೆಯಿಲ್ಲದ ಜನನ ಮರಣಗಳ ಪ್ರಕ್ರಿಯೆಯಲ್ಲಿ ತೊಡಗಿರುತ್ತಾನೆ. ಆತ್ಮ ಸಾಕ್ಷಾತ್ಕಾರಕ್ಕೆ ದಾರಿದೀಪವಾಗಿರುವ ವೈರಾಗ್ಯದಿಂದ ಮಾತ್ರ ಹುಟ್ಟು ಸಾವಿನ ಚಕ್ರದಿಂದ ಹೊರಬಂದು ನಿಜವಾದ ಮತ್ತು ಶಾಶ್ವತವಾದ ಆನಂದವನ್ನು ಪಡೆಯಲು ಸಾಧ್ಯ. ನನ್ನ ಪ್ರೀತಿಯ ಮಾತೆಯೇ! ದಯವಿಟ್ಟು ನನಗೆ ಆ ಸ್ಥಿತಿಯನ್ನು ಪಡೆಯಲು ಮತ್ತು ನನ್ನನ್ನು ನಾನು ಸಾಕ್ಷಾತ್ಕಾರಗೊಳಿಸುವ ಪ್ರಯತ್ನಕ್ಕೆ ಸಮ್ಮತಿಸಿ ಸನ್ಯಾಸ ಸ್ವೀಕರಿಸಲು ಅಪ್ಪಣೆನೀಡು."

"ಇನ್ನೊಮ್ಮೆ ಆ ರೀತಿ ಮಾತನಾಡಬೇಡ" ಎಂದು ಶಂಕರರ ಪ್ರೀತಿಯ ತಾಯಿ ಉತ್ತರಿಸಿದಳು. "ನಾನು ನಿನಗೊಬ್ಬ ಒಳ್ಳೆಯ ಹೆಣ್ಣಿನ ಜೊತೆಗೆ ಮದುವೆಮಾಡಿ ಅವಳಿಗೆ ಒಳ್ಳೆಯ ಗಂಡನಾಗಿ ನಿನ್ನನ್ನು ನೋಡಲು ಬಯಸುತ್ತೇನೆ. ದಯವಿಟ್ಟು ಸನ್ಯಾಸ ಸ್ವೀಕರಿಸುವ ಬಗ್ಗೆ ಮತ್ತೆ ಮಾತನಾಡಬೇಡ"

ಸ್ವಲ್ಪ ದಿನಗಳ ನಂತರ ಶಂಕರರು ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಒಂದು ಮೊಸಳೆಯು ಅವರ ಕಾಲನ್ನು ಹಿಡಿಯಿತು. ಮಗನ ದು:ಸ್ಥಿತಿಯನ್ನು ನೋಡಿದ ಶಂಕರರ ತಾಯಿಯು ಅಸಹಾಯದಿಂದ ಅಳಲು ಪ್ರಾರಂಭಿಸಿದಳು. ಮೊಸಳೆಯು ತನ್ನ ಮಗನನ್ನು ಜೀವಂತವಾಗಿ ಕಬಳಿಸುವಹಾಗೆ ಗೋಚರವಾಯಿತು. "ಅಮ್ಮ" ಎಂದು ಕೂಗುತ್ತ ಹೀಗೆ ಹೇಳಿದರು, "ನನ್ನನ್ನು ಉಳಿಸಿಕೊಳ್ಳಲು ಒಂದು ಮಾರ್ಗವಿರಬಹುದು. ಯಾವೊಬ್ಬನು ತನ್ನ ಜೀವನ ಅಪಾಯದಲ್ಲಿರುವಾಗ ಸನ್ಯಾಸ ಸ್ವೀಕರಿಸಲು ಒಪ್ಪಿಕೊಳ್ಳುತ್ತಾನೋ ಅವನು ಪ್ರಾಣಾಪಾಯದಿಂದ

ಪಾರಾಗುವನೆಂದು ನಮ್ಮ ದೇಶದ ವಿವೇಕವುಳ್ಳ ಜನರು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ನನಗೆ ಸನ್ಯಾಸಿಯಾಗಲು ಅನುಮತಿ ನೀಡು."

ತನ್ನ ಮಗನ ಪ್ರಾಣವನ್ನು ಉಳಿಸಲು ಏನು ಬೇಕಾದರೂ ಮಾಡಲು ಸಿದ್ಧರಿದ್ದ ಶಂಕರರ ತಾಯಿಯು ಅವರ ಬೇಡಿಕೆಗೆ ಸಮ್ಮತಿಸಿದರು. ಆಗ ಶಂಕರರು ತಮ್ಮ ಕೈಗಳನ್ನು ಮೇಲೆತ್ತಿ 'ಸನ್ಯಾಸೋಹಮ್' (ನಾನು ಸನ್ಯಾಸಿ) ಎಂದು ಉಚ್ಚರಿಸಿದರು. ತಾಯಿಯ ಸಮ್ಮತಿ ಸಿಕ್ಕಿದಾಕ್ಷಣ ಮೊಸಳೆಯು ಶಂಕರಚಾರ್ಯರ ಕಾಲನ್ನು ಬಿಟ್ಟಿತು. ಹೀಗೆ ಅವರ ಪ್ರಾಣ ಉಳಿಯಿತು. ನದಿಯಿಂದ ಹೊರ ಬರುತ್ತಿದ್ದಂತೆ ಶಂಕರರು ತಮ್ಮ ತಾಯಿಯನ್ನು ಅಪ್ಪಿಕೊಂಡರು. "ನನ್ನ ಪ್ರೀತಿಯ ಮಾತೆಯೇ ಇದುವರೆಗೆ ನೀನು ನನ್ನ ಪಾಲನೆ ಪೋಷಣೆ ಮಾಡುತ್ತಲಿದ್ದೆ. ಈಗ ನಾನು ಹೊರ ಪ್ರಪಂಚಕ್ಕೆ ಹೋಗುತ್ತಿರುವೆ ಹಾಗಾಗಿ ನನ್ನನ್ನು ಪೋಷಿಸುವವರೆಲ್ಲರೂ ನನ್ನ ಮಾತೆಯರು ಮತ್ತು ನನಗೆ ಬೋಧಿಸುವವರೆಲ್ಲರೂ ನನ್ನ ತಂದೆಯರು. ನನ್ನ ಶಿಷ್ಯರೇ ನನ್ನ ಮಕ್ಕಳು, ಶಾಂತಿ ನನ್ನ ಮದುಮಗಳು, ಮತ್ತು ಏಕಾಂತತೆಯೇ ನನ್ನ ಆನಂದ. ಇವೆಲ್ಲವು ನಾನು ಪಾಲಿಸಲಿರುವ ಕಠಿಣ ಕ್ರಿಯೆಗಳು.

"ನಿನ್ನ ಜೀವನವು ಈಗ ಪರಮ ಪೋಷಕನಾದ ಭಗವಂತನ ಆಧೀನಲ್ಲಿದೆ ಎಂದು ಹೇಳುತ್ತ ಶಂಕರರ ತಾಯಿ ಮಗನನ್ನು ಆಶೀರ್ವದಿಸಿದರು." ತಾಯಿ ಮತ್ತು ಮಗನ ನಡುವಿನ ಈ ಒಂದು ಹಾರ್ದಿಕ ವಿನಿಮಯದೊಂದಿಗೆ ಶಂಕರರು ಮನೆಯನ್ನು ಬಿಟ್ಟು ಹೊರಟರು.

ಸಾಧಾರಣ ಬಟ್ಟೆಯನ್ನುಟ್ಟು, ಒಂದು ಕೈಯಲ್ಲಿ ಕಮಂಡಲವನ್ನು ಹಿಡಿದು ಇನ್ನೊಂದು ಕೈಯಲ್ಲಿ ದಂಡವನ್ನು ಹಿಡಿದು ಬಾಲಕ ಶಂಕರ

# ಶಂಕರಾಚಾರ್ಯರು

ಸಂಚರಿಸುತ್ತ ಹಲವು ತಿಂಗಳು ಗ್ರಾಮಾಂತರ ಪ್ರದೇಶಗಳ ಉದ್ದಗಲಕ್ಕೂ ಅಲೆದಾಡಿದರು. ಒಂದು ದಿನ ಶಂಕರರು ಆಲದ ಮರದಡಿ ವಿಶ್ರಮಿಸುತ್ತಿದ್ದಾಗ ಹಲವು ಕಪ್ಪೆಗಳು ಒಂದು ನಾಗರಹಾವಿನ ಸಮೀಪ ಕುಳಿತ್ತಿದ್ದುದನ್ನು ಕಂಡರು. ಇಂತಹ ಆಶ್ಚರ್ಯಕರ ಸ್ಥಳವನ್ನು ಕಂಡು ಅವರಿಗೆ ತಮ್ಮ ಪೂರ್ವದ ಶಿಕ್ಷಕರು ಹೇಳಿಕೊಟ್ಟ ಪಾಠವು ನೆನಪಾಯಿತು, ಅದೇನೆಂದರೆ, ಇಬ್ಬರು ಸ್ವಾಭಾವಿಕ ಶತ್ರುಗಳ ನಡುವೆ ಸಹಬಾಳ್ವೆಯು ಕೇವಲ ಒಬ್ಬ ದೊಡ್ಡ ಋಷಿ ಅಥವಾ ಒಬ್ಬ ಜ್ಞಾನೋದಯ ಪಡೆದ ಗುರುವಿನ ಸಾನಿಧ್ಯದಲ್ಲಿ ಮಾತ್ರ ಸಾಧ್ಯ.

ಸ್ಥಳೀಯ ಹಳ್ಳಿಯ ಜನರ ಹತ್ತಿರ ವಿಚಾರಿಸಿದಾಗ ಶಂಕರರಿಗೆ ಅಲ್ಲಿಯೇ ಸಮೀಪದ ಒಂದು ಗುಹೆಯಲ್ಲಿ ವಾಸವಾಗಿದ್ದ ಗೋವಿಂದಪಾದ ಎಂಬ ಸಾಧುಗಳ ಬಗ್ಗೆ ತಿಳಿದು ಬಂದಿತು. ಅವರು ಆಕ್ಷಣವೆ ಅಲ್ಲಿಗೆ ಹೋಗಲು ನಿರ್ಧರಿಸಿದರು. ಗುಹೆಯ ಮುಂದೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತ ಶಂಕರರು ಆ ಮಹಾನ್ ಗುರುಗಳ ಪ್ರಶಂಸೆಯಲ್ಲಿ ಒಂದು ಮನೋಹರವಾದ ಸ್ತೋತ್ರವನ್ನು ಪಠಿಸಿದರು.

“ಎಲ್ಲ ಜ್ಞಾನಗಳ ಧಾಮವಾಗಿರುವ ಪೂಜ್ಯ ಗೋವಿಂದಪಾದರೇ! ನಿಮಗೆ ನನ್ನ ಪ್ರಣಾಮಗಳು. ನಿಮ್ಮ ಕೀರ್ತಿಯು ಎಲ್ಲೆಡೆ ಹರಡಿಕೊಂಡಿದೆ, ಏಕೆಂದರೆ ನೀವು ನಿಮ್ಮ ಅಸ್ತಿತ್ವದ ಅಂತರಾಳವನ್ನರಿತಿರುವಿರಿ. ವೈದಿಕ ಸಾಹಿತ್ಯವನ್ನು ಸಂಗ್ರಹಿಸಿದ ವ್ಯಾಸದೇವರ ಪುತ್ರನಾದ ಶುಕದೇವರ ಶಿಷ್ಯರಾದ ಗೌಡಪಾದರ ಶಿಷ್ಯರಾಗುವ ಭಾಗ್ಯವನ್ನು ಹೊಂದಿದ, ಹಾಗೂ ಬಹಳ ಅಪೂರ್ವವಾದ ಆಧ್ಯಾತ್ಮಿಕ ಗುರುಗಳ ಪರಂಪರೆಯನ್ನು ಪ್ರತಿನಿಧಿಸುವ ನೀವು ಈ ಭೂಮಿಯಲ್ಲೇ ಅತ್ಯಂತ ಶ್ರೇಷ್ಠ ಆತ್ಮಸಾಕ್ಷಾತ್ಕಾರ ಜ್ಞಾನಿಗಳು. ದಯವಿಟ್ಟು ಈ ಅನರ್ಹ ಸನ್ಯಾಸಿಯನ್ನು ನಿಮ್ಮ ಶಿಷ್ಯನಾಗಿ ಸ್ವೀಕರಿಸಿ ಮತ್ತು ನನ್ನನ್ನು ಆತ್ಮಸಾಕ್ಷಾತ್ಕಾರ ಜ್ಞಾನದ ಭಾಧ್ಯಸ್ಥನಾಗಿ ರೂಪಿಸಿರಿ.”

# ಆಸ್ತಿಕತೆಯ ವಿಕಾಸ

ಗೋವಿಂದಪಾದರಿಗೆ ಈ ಪುಟ್ಟ ಸನ್ಯಾಸಿಯನ್ನು ಶಿಷ್ಯನಾಗಿ ಸ್ವೀಕರಿಸಲು ಸಂತೋಷವಾಯಿತು. ಅವರು ಶಂಕರರಿಗೆ ನಾಲ್ಕು ಸೂತ್ರಗಳನ್ನು ಬೋಧಿಸಿದರು. ಇವುಗಳನ್ನೇ ಭವಿಷ್ಯದಲ್ಲಿ ಶಂಕರರು ಪ್ರಪಂಚದಾದ್ಯಂತ ಪ್ರಚಾರ ಮಾಡುವರು:

ಪ್ರಜ್ಞಂ ಬ್ರಹ್ಮ (ಬ್ರಹ್ಮನ್ ಶುದ್ಧ ಪ್ರಜ್ಞೆಯಾಗಿರುವುದು)
ಅಯಮಾತ್ಮ ಬ್ರಹ್ಮ (ಆತ್ಮವು ಬ್ರಹ್ಮನ್ ಆಗಿರುವುದು)
ತತ್ತ್ವಮ್ ಅಸಿ (ನೀನು ಆ ಪ್ರಜ್ಞೆ)
ಅಹಂ ಬ್ರಹ್ಮಾಸ್ಮಿ (ನಾನು ಬ್ರಹ್ಮನ್)

ಶಂಕರರು ತಮ್ಮ ಗುರುಗಳೊಂದಿಗೆ ದೀರ್ಘಕಾಲದವರೆಗೆ ಇದ್ದರು. ಒಂದು ದಿನ ಗೋವಿಂದಪಾದರಿಗೆ ಶಂಕರರು ಶಿವನ ಅವತಾರವೆಂದು ತಿಳಿದು ಹೀಗೆ ಹೇಳಿದರು. "ನನ್ನ ಇಚ್ಛೆಯನ್ನು ಕೇಳು, ಯಾವ ತತ್ತ್ವವನ್ನು ಬೌದ್ಧ ತತ್ತ್ವಜ್ಞಾನಿಗಳು ಬೋಧಿಸುತ್ತಾರೋ, ಅದು ಆತ್ಮದ ಸ್ವಭಾವವನ್ನು ತಿಳಿಸುವುದಿಲ್ಲ. ಆದ್ದರಿಂದ ಈ ಕ್ಷಣ ಪವಿತ್ರ ನಗರವಾದ ವಾರಣಾಸಿಗೆ ತೆರೆಳಿ ಅಲ್ಲಿಯ ಜನರಿಗೆ ಆತ್ಮಜ್ಞಾನವನ್ನು ಬೋಧಿಸಲು ಪ್ರಾರಂಭಿಸು. ಜನರನ್ನು ಆಸ್ತಿಕತೆಯ ಮಾರ್ಗದೆಡೆಗೆ ಕರೆದೊಯ್ಯುವುದು ನಿನ್ನ ಧ್ಯೇಯ. ವಾರಣಾಸಿಯಲ್ಲಿ ತತ್ತ್ವಶಾಸ್ತ್ರದ ಎಲ್ಲ ಅಂಗಗಳಲ್ಲಿ ನುರಿತ ಅನೇಕ ಸುಪ್ರಸಿದ್ಧ ವಿದ್ವಾಂಸರಿದ್ದಾರೆ. ನೀನು ಅವರೊಂದಿಗೆ ಚರ್ಚೆ ನಡೆಸುತ್ತ ಅವರನ್ನು ಒಳ್ಳೆಯ ಆಲೋಚನೆಯೆಡೆಗೆ ಮಾರ್ಗದರ್ಶಿಸು. ಇದು ಬಹಳ ತುರ್ತಾಗಿ ಮತ್ತು ಅಗತ್ಯವಾಗಿ ಆಗಬೇಕಾದ ಕೆಲಸ! ದಯವಿಟ್ಟು ಒಂದು ಕ್ಷಣವೂ ವಿಳಂಬಿಸಬೇಡ!" ತಮ್ಮ ಗುರುವಿನ ಆಜ್ಞೆಯನ್ನು ಪಡೆದು ಶಂಕರರು ವಾರಣಾಸಿಯತ್ತ ಹೊರಟರು.

# ಶಂಕರಾಚಾರ್ಯರು

ಶಂಕರರು ವಾರಣಾಸಿಯ ವಿದ್ವಾಂಸರುಗಳ ಮಧ್ಯೆ ಪ್ರವೇಶಿಸಿದಾಗ ಅವರ ವಯಸ್ಸು ಕೇವಲ ೧೨ ವರುಷ. ಸ್ವಾಭಾವಿಕವಾಗಿ ಆ ಕಿರು ವಯಸ್ಸಿನಲ್ಲಿ ಅವರಿಗಿದ್ದ ಅಗಾಧವಾದ ಜ್ಞಾನ ಸಂಪತ್ತು ಮತ್ತು ಗಾಢವಾದ ಆತ್ಮ ಸಾಕ್ಷಾತ್ಕಾರವು ಅವರನ್ನು ನೋಡಲು ಬಂದವರನ್ನು ದಿಗ್ಭ್ರಮೆಗೊಳಿಸಿತು. ದೈವಸಂಕಲ್ಪವೇನೊ ಎಂಬಂತೆ ಬೇಗನೆ ಶಂಕರರು ಅನೇಕ ಶಿಷ್ಯಂದಿರನ್ನು ಸ್ವೀಕರಿಸಿದರು. ಅವರೆಲ್ಲರೂ ಶಂಕರರು ಆಧ್ಯಾತ್ಮಿಕ ವಿಚಾರಗಳ ಕುರಿತಾಗಿ ಮಾತನಾಡತ್ತಿದ್ದ ಪ್ರತಿಯೊಂದು ಪದವನ್ನು ಆಸಕ್ತಿಯಿಂದ ಅವರ ಬಳಿ ಕುಳಿತು ಕೇಳುತ್ತಿದ್ದರು. ಅಂದಿನಿಂದ ಶಂಕರರು ಆಚಾರ್ಯ ಅಥವಾ ಶಂಕರಾಚಾರ್ಯ ಎಂದು ಪ್ರಸಿದ್ಧರಾದರು.

ವಾರಣಾಸಿಯಲ್ಲಿ ಶಂಕರಾಚಾರ್ಯರು ನಾಸ್ತಿಕತೆಯ ಬಗೆಗಿನ ಅಭಿಪ್ರಾಯವನ್ನೇ ಬದಲಾಯಿಸಿದರು. ಅದ್ವೈತ ತತ್ತ್ವವಾದ ಬ್ರಹ್ಮನ್‌ನನ್ನು ಪರಮ ಸತ್ಯವೆಂದು ಪ್ರತಿಪಾದಿಸುತ್ತಾ ಅವರು ಬ್ರಹ್ಮ ಸೂತ್ರ, ಭಗವದ್ಗೀತಾ ಮತ್ತು ಪ್ರಮುಖ ಉಪನಿಷತ್ತುಗಳ ಮೇಲೆ ವ್ಯಾಖ್ಯಾನಗಳನ್ನು ಬರೆದರು. ಶಾರೀರಕ ಭಾಷ್ಯ ಎಂದು ಪ್ರಸಿದ್ಧವಾಗಿರುವ ಅವರ ಬ್ರಹ್ಮ ಸೂತ್ರದ ಮೇಲಿನ ವ್ಯಾಖ್ಯಾನವು ಅವರ ಅನುಯಾಯಿ ವರ್ಗದಲ್ಲಿ ಬಹಳ ಪ್ರಮುಖವಾದ ಕೊಡುಗೆ ಎಂದು ಪರಿಗಣಿಸಲ್ಪಟ್ಟಿದೆ.

ಪರಮ ಸತ್ಯದ ಸಾರಸರ್ವಸ್ವವು ಇಂದ್ರಿಯಗಳಿಗೆ ಅತೀತವಾದುದು, ಅವ್ಯಕ್ತವಾದದ್ದು, ನಿರಾಕಾರವಾದುದು, ನಿತ್ಯವು ಮತ್ತು ಸ್ಥಿರವಾದದ್ದು ಎಂದು ಶಂಕರಾಚಾರ್ಯರು ಬ್ರಹ್ಮನ್‌ನ ಸ್ವಭಾವವನ್ನು ವ್ಯಾಖ್ಯಾನಿಸಿದ್ದಾರೆ. ಶಂಕರಾಚಾರ್ಯರ ಪ್ರಕಾರ ಆತ್ಮವು ಮಾಯೆಯಿಂದ ಆವೃತವಾದ ಅಥವಾ ಭ್ರಮೆಗೊಳಪಟ್ಟ ಪರಮಾತ್ಮನ ಭಾಗ. ಅಜ್ಞಾನ ಅಥವಾ ಆತ್ಮನ ವಿಸ್ಮರಣ (ಮರೆಯುವಿಕೆಯಿಂದಾಗುವ)ದಿಂದ ಸೃಷ್ಟಿಯಾಗುವ ಆ ಭ್ರಮೆಯು ಮಾಯೆಯ ಪರದೆಯೆಂದು ಶಂಕರಾಚಾರ್ಯರು

ಹೇಳುತ್ತಾರೆ. ಪರಮ ಸತ್ಯವು ಮಾಯೆಯಿಂದ ಮರೆಯಾಗಿದೆ ಎಂಬ ವಿಚಾರವು ಮುಂದೆ ಶ್ರೀ ರಾಮಾನುಜರಿಂದ ಯಶಸ್ವಿಯಾಗಿ ಆಕ್ಷೇಪಿಸಲ್ಪಟ್ಟಿತು. ಶಂಕರಚಾರ್ಯರ ಬೋಧನೆಗಳನ್ನು ಸ್ವೀಕರಿಸಿದ ಅವರ ಅನುಯಾಯಿಗಳು ಮಾಯಾವಾದಿಗಳೆಂದು ಪ್ರಸಿದ್ಧಿ ಪಡೆದಿದ್ದಾರೆ.

ಶಂಕರಚಾರ್ಯರ ಮಾಯಾವಾದ ಸಿದ್ಧಾಂತವು ಹೀಗೆಂದು ಹೇಳುತ್ತದೆ "ಪರಮ ಸತ್ಯವು ಎಂದಿಗೂ ಪರಿವರ್ತನೆಗೊಳಪಡದಿರುವಂಥದ್ದಾರೂ ನಾವು ಅದು ಪರಿವರ್ತನೆಯಾಗುವುದೆಂದುಕೊಳ್ಳುತ್ತೇವೆ, ಅದೇ ನಮ್ಮ ಭ್ರಮೆ" ಶಂಕರಾಚಾರ್ಯರು ಪರತತ್ತ್ವ ಶಕ್ತಿಯ ಪರಿವರ್ತನೆಯಲ್ಲಿ ವಿಶ್ವಾಸವಿಡಲಿಲ್ಲ. ಶಕ್ತಿಯ ಪರಿವರ್ತನೆಯನ್ನು ಒಪ್ಪುವುದರಿಂದ ಪರಮ ಸತ್ಯದ ವ್ಯಕ್ತಿತ್ವವನ್ನು ಅಥವಾ ದೇವರ ವೈಯಕ್ತಿಕ ಅಸ್ತಿತ್ವ(ಪೂರ್ಣವಾದ ಅಸ್ತಿಕತೆ)ವನ್ನು ಸಮ್ಮತಿಸಬೇಕಾಗುವ ಅನಿವಾರ್ಯತೆ ಉಂಟಾಗುತ್ತದೆ. ಶಂಕರಚಾರ್ಯರ ಪ್ರಕಾರ ನಾವೇ ದೇವರು. ಅಜ್ಞಾನದ ಪರದೆಯನ್ನು ಹೋಗಲಾಡಿಸಿದಾಗ ಒಬ್ಬನ ಪೂರ್ಣ ವ್ಯಕ್ತಿತ್ವವು ದೇವರಿಂದ ಅಥವಾ ಪರಬ್ರಹ್ಮನಿಂದ ಭಿನ್ನವಲ್ಲವೆಂದು ಅರಿವಾಗುತ್ತದೆ.

ಈ ವಿಶ್ವದ ಸೃಷ್ಟಿ ಮತ್ತು ಮಾಯೆಯ ಸ್ವಭಾವದ ಬಗೆಗಿನ ಪ್ರಶ್ನೆಗಳನ್ನು ಉತ್ತರಿಸಲಾಗದು ಮತ್ತು ವಿವರಿಸಲಾಗದೆಂಬುದು ಶಂಕರಚಾರ್ಯರ ನಿಲುವಾಗಿತ್ತು. ಆಧ್ಯಾತ್ಮಿಕ ತತ್ತ್ವವಾದ ಬ್ರಹ್ಮನ್ ಈ ಲೌಕಿಕ ಜಗತ್ತಿನಿಂದಾಚೆಗೆ ಈ ಪ್ರಪಂಚದಲ್ಲಿನ ಮನಸ್ಸು ಮತ್ತು ಬುದ್ಧಿಯ ಸ್ಥೂಲ ಮತ್ತು ಸೂಕ್ಷ್ಮ ಶರಿರೀರಗಳಿಂದ ಪ್ರತ್ಯೇಕವಾಗಿರುವುದೆಂಬುದು ಶಂಕರಚಾರ್ಯರ ದೃಢನಿಶ್ಚಯವಾಗಿತ್ತು. ಇದಲ್ಲದೆ ಜೀವಿಯು ಈ ಲೌಕಿಕ ಜಗತ್ತಿನೊಂದಿಗೆ ತನ್ನ ಸಂಬಂಧವನ್ನು ತ್ಯಜಿಸಿದಾಗ ಮಾತ್ರ ಜನನ ಮರಣಗಳಿಂದ ಮುಕ್ತಿ ದೊರೆಯಲು ಸಾಧ್ಯವೆಂದು ಶಂಕರಾಚಾರ್ಯರು ಒತ್ತಿ ಹೇಳಿದ್ದಾರೆ. ನಾನು ಮತ್ತು ನನ್ನದು, ನಾನು ಒಬ್ಬ ಪುರುಷ,

# ಶಂಕರಾಚಾರ್ಯರು

ಮತ್ತು ಹೆಂಡತಿ, ಮಕ್ಕಳು, ಆಸ್ತಿ ಮುಂತಾದುವು ಎಲ್ಲವು ನನ್ನ ಸ್ವತ್ತು ಎಂಬ ಎಲ್ಲ ಭಾವನೆಗಳು ಐಹಿಕ ಅಸ್ತಿತ್ವದಲ್ಲಿ ಬಂಧನಕ್ಕೊಳಗಾಗಲು ಕಾರಣಗಳು. ಇವೆಲ್ಲವನ್ನು ತ್ಯಜಿಸಲೇಬೇಕೆಂದು ಶಂಕರಾಚಾರ್ಯರು ಹೇಳುತ್ತಾರೆ. ಹಾಗಾಗಿ ಅವರ ಬಹುಮಂದಿ ಅನುಯಾಯಿಗಳು ನೈಷ್ಠಿಕ ಬ್ರಹ್ಮಚಾರಿಗಳಾಗಿದ್ದು ಈಗಲೂ ಆ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಅದ್ವೈತ ವೇದಾಂತದ ಉಪಸಂಹಾರಗಳನ್ನು ಸಮರ್ಥಿಸಲು ಶಂಕರಾಚಾರ್ಯರು ತಮ್ಮ ಸಿದ್ಧಾಂತಗಳಿಗೆ ಸರಿಹೊಂದುವಂತೆ ವೇದಗಳಿಗೆ ವ್ಯಾಖ್ಯಾನಗಳನ್ನು ನೀಡಿದರು. ಇನ್ನೊಂದರ್ಥದಲ್ಲಿ ವೇದಗಳಿಗೆ ತಮ್ಮದೆ ಆದ ನೇರವಾದ ಮತ್ತು ಪರೋಕ್ಷವಾದ ಅರ್ಥಗಳಿವೆ. ಶಂಕರಾಚಾರ್ಯರು ಅಂತ್ಯ ಪ್ರತ್ಯಯ, ಪೂರ್ವ ಪ್ರತ್ಯಯ, ಆದಿ ಪ್ರತ್ಯಯ ಇವುಗಳನ್ನು ಉಪಯೋಗಿಸಿಕೊಂಡು ವ್ಯಾಕರಣ ಹಾಗೂ ಶಬ್ದಗಳ ಮೋಡಿಯಿಂದ ಅವರದೇ ಆದ ಕಾಲ್ಪನಿಕ ಅಥವಾ ಪರೋಕ್ಷವಾದ ಅರ್ಥವನ್ನು ನೀಡಿದರು. ಹೀಗೆ ಶಂಕರಾಚಾರ್ಯರು ತಮ್ಮನ್ನು ಆಸ್ತಿಕ ಮತ್ತು ನಾಸ್ತಿಕ ಇವರಿಬ್ಬರ ಮಧ್ಯೆ ಗುರುತಿಸುತ್ತ ಕೆಲವು ಸಲ ಇವರಿಬ್ಬರನ್ನು ಸಮರ್ಥಿಸುವಂತೆ ಗೋಚರಿಸಿದ್ದಾರೆ. ಭವಿಷ್ಯದ ಆಸ್ತಿಕತೆಯ ವಿಕಾಸಕ್ಕೆ ಒಂದು ಭದ್ರ ಬುನಾದಿಯನ್ನು ಹಾಕಲು ಆಚಾರ್ಯರು ಈ ನಿಲುವನ್ನು ಸ್ವೀಕರಿಸಿದರು ಎನ್ನಬಹುದು.

ಆಸ್ತಿಕತೆಯ ವಿಕಾಸದ ವಿಚಾರದಲ್ಲಿ, ಬೌದ್ಧರ 'ಪ್ರಕೃತಿ ನಿರ್ವಾಣ' ದ ನಾಸ್ತಿಕತೆ ಅಥವಾ ಆಧುನಿಕ ಆಸ್ತಿಕತೆಯ ವಿಚಾರಗಳಿಂದ ಹಿಡಿದು ಶ್ರೇಷ್ಠ ಪರಾತ್ಪರ ಸ್ವತಂತ್ರ ತತ್ತ್ವ (ನಿಜವಾದ, ಅಸ್ತಿತ್ವದಲ್ಲಿರುವ) ವಾದ ಬ್ರಹ್ಮನ್‌ನ ವರೆಗೂ ಶಂಕರಚಾರ್ಯರು ನೀಡಿದ ಆಧ್ಯಾತ್ಮಿಕ ಕೊಡುಗೆಗಳಿಗೆ ಭಾರತದೇಶ ಹಾಗೂ ಮುಂಬರುವ ಪೀಳಿಗೆಯ ಆಸ್ತಿಕ ಮಹಾಶಯರು ಎಂದಿಗೂ ಕೃತಜ್ಞರಾಗಿರುತ್ತಾರೆ.

# ಆಸ್ತಿಕತೆಯ ವಿಕಾಸ

ತಮ್ಮ ಶಿಷ್ಯ ವರ್ಗದ ಸಂಗಡದಲ್ಲಿ ಶಂಕರಾಚಾರ್ಯರು ಭಾರತದೆಲ್ಲೆಡೆ ಸಂಚರಿಸಿದರು. ಎಲ್ಲಿಯವರೆಗೆಂದರೆ, ಉತ್ತರ ಭಾರತದಲ್ಲಿ ಹಿಮಾಲಯದಲ್ಲಿರುವ ಬದರಿನಾಥ ಆಶ್ರಮದವರೆಗೆ ಸಂಚರಿಸಿದರು. ಅಲ್ಲಿ ಅವರು ಧ್ಯಾನ ಮತ್ತು ವೈದಿಕ ಅಧ್ಯಯನಕ್ಕಾಗಿ ಒಂದು ಆಶ್ರಮವನ್ನು ಸ್ಥಾಪಿಸಿದರು. ಹಾಗೆಯೇ ಪೂರ್ವದಿಕ್ಕಿನ ಪುರಿಯಲ್ಲಿ, ಪಶ್ಚಿಮ ದಿಕ್ಕಿನ ದ್ವಾರಕೆಯಲ್ಲಿ ಮತ್ತು ದಕ್ಷಿಣ ದಿಕ್ಕಿನ ಶೃಂಗೇರಿಯಲ್ಲಿಮಠಗಳನ್ನು ಸ್ಥಾಪಿಸಿದರು. ಹನ್ನೆರಡು ಶತಮಾನಗಳ ನಂತರವೂ ಶಂಕರಾಚಾರ್ಯರು ಸ್ಥಾಪಿಸಿದ ಈ ಎಲ್ಲ ಸಂಸ್ಥೆಗಳು ಅಸ್ತಿತ್ವದಲ್ಲಿವೆ ಮತ್ತು ಅವರ ಸಿದ್ಧಾಂತಗಳನ್ನು ಪ್ರಚಾರಮಾಡುವ ಕಾರ್ಯಗಳಲ್ಲಿ ನಿರತವಾಗಿವೆ.
ದಕ್ಷಿಣ ಭಾರತದಲ್ಲಿನ ಒಂದು ಯಾತ್ರೆಯಲ್ಲಿ ಶಂಕರಾಚಾರ್ಯರಿಗೆ 'ವಿದ್ವಾಂಸರತ್ನ' ಎಂದು ಪ್ರಖ್ಯಾತಿ ಪಡೆದ ಮಹಿಷ್ಮತಿಯ ಪ್ರಸಿದ್ಧ ಪಂಡಿತರಾದ ಮಂದನ ಮಿಶ್ರ ರವರೊಂದಿಗೆ ತರ್ಕಿಸುವ ಅವಕಾಶ ದೊರೆಯಿತು. ಬಹಳಷ್ಟು ಜನ ಇವರಿಬ್ಬರ ನಡುವಿನ ವಾದ ವಿವಾದವನ್ನು ವೀಕ್ಷಿಸಲು ಸೇರಿದರು ಮತ್ತು ಆ ಪಂಡಿತನ ಪತ್ನಿಯಾದ ಭಾರತಿದೇವಿಯನ್ನು ನ್ಯಾಯವಿಮರ್ಶಕಿ ಮತ್ತು ತೀರ್ಪುಗಾರಳನ್ನಾಗಿ ಆಯ್ಕೆ ಮಾಡುಲಾಯಿತು. ಚರ್ಚೆ ಪ್ರಾರಂಭವಾಗುವ ಮುನ್ನ ಭಾರತಿ ಇಬ್ಬರು ಸ್ಪರ್ಧಿಗಳ ಕೊರಳಿನ ಸುತ್ತ ಹೂವಿನ ಹಾರವನ್ನು ಹಾಕಿದಳು. ಚರ್ಚೆಯ ಅಂತ್ಯದಲ್ಲಿ ಯಾರ ಕೊರಳಲ್ಲಿನ ಹಾರವು ಬಾಡಿ ಒಣಗದೇ ಉಳಿಯುವುದೋ ಅವರು ಜಯಶಾಲಿಗಳೆಂದು ಘೋಷಿಸಿದಳು.

ಎಂದಿಗೂ ಪರಾಭವವನ್ನೇ ಕಂಡಿರದ ಮಂದನ ಚರ್ಚೆಯನ್ನು ಹೀಗೆಂದು ಪ್ರಾರಂಭಿಸಿದರು, "ನಾನು ವೇದಗಳ ಪ್ರಮಾಣವನ್ನು ಒಪ್ಪಿಕೊಳ್ಳುತ್ತೇನೆ. ಅವುಗಳ ಮುಖ್ಯ ಉಪದೇಶವೇನೆಂದರೆ ಅವು ವಿಧಿಸಿದ ಧರ್ಮಾಚರಣೆಗಳನ್ನು ಯಥಾರೀತಿಯಲ್ಲಿ ನಿರ್ವಹಿಸುವುದರಿಂದ ಅವುಗಳಿಂದ ಪಡೆಯಬಹುದಾದ ಎಲ್ಲಾ

ಪುಣ್ಯಗಳಿಗೆ ಅರ್ಹರಾಗಬಹುದು.ಇಂತಹ ಧರ್ಮಾಚರಣೆಗಳನ್ನು ನಿರ್ವಹಿಸಿದವನು ಸ್ವರ್ಗಲೋಕದಲ್ಲಿ ಇಂದ್ರನೊಂದಿಗೆ ಮತ್ತು ಸ್ವರ್ಗೀಯ ಕನ್ಯೆಯರ ಸಂಗದಲ್ಲಿ ನೆಲೆಸಿ ಸುಖಿಸುತ್ತಾನೆ. ಹೀಗೆ ಅವನ ಪುಣ್ಯವು ಮುಗಿದಮೇಲೆ, ಮತ್ತೆ ಪುಣ್ಯ ಪ್ರಾಪ್ತಿ ಮಾಡಿಕೊಂಡು ದೇವ ಲೋಕದಲ್ಲಿ ದೀರ್ಘಕಾಲ ನೆಲೆಸಲು ಅವನು ಈ ಭೂಮಿಗೆ ವಾಪಸ್ಸಾಗುತ್ತಾನೆ. ಇಂತಹ ಧರ್ಮಾಚರಣೆಗಳಿಗೆ ಸಂಬಂಧಪಟ್ಟಂತೆ ಅವಶ್ಯವಿರುವ ಪೂರ್ವಾಪೇಕ್ಷಿತ ಆದೇಶಗಳೂ ವೇದಗಳಲ್ಲಿ ಅಡಕವಾಗಿರುತ್ತವೆ". ಪ್ರೇಕ್ಷಕರಲ್ಲಿದ್ದ ಅನೇಕ ಮಂದನನ ಶಿಷ್ಯರು ಮತ್ತು ಪ್ರಶಂಸಕರು ಅವನ ಹೇಳಿಕೆಗೆ ಚಪ್ಪಾಳೆ ತಟ್ಟಿದರು.

ನಂತರ ಶಕರಾಚಾರ್ಯರು ಮಂದನನ ಹೇಳಿಕೆಗೆ ಪ್ರತಿಸ್ಪಂದಿಸಿ ಹೀಗೆ ನುಡಿದರು, "ನಾನು ಕೂಡ ವೇದಗಳ ಪ್ರಮಾಣವನ್ನು ಒಪ್ಪುತ್ತೇನೆ. ಹೇಗಿದ್ದರೂ ಅವುಗಳ ಮುಖ್ಯ ತಾತ್ಪರ್ಯ ಇದಾಗಿದೆ: ಬ್ರಹ್ಮನ್ ಒಂದೇ ಸತ್ಯ; ಅದ್ಭುತವಾಗಿರುವ ಈ ಭೌತಿಕ ಜಗತ್ತು ಒಂದು ಭ್ರಮೆ; ಮತ್ತು ಪ್ರತಿಯೊಂದು ಆತ್ಮವೂ ಬ್ರಹ್ಮನ್ ನೊಂದಿಗೆ ಸಮಾನತೆಯನ್ನು ಹೊಂದಿದೆ. ವೇದಗಳಲ್ಲಿ ಕಂಡುಬರುವ ಧರ್ಮಾಚರಣೆಯ ವಿಧಿವಿಧಾನಕ್ಕೆ ಸಂಬಂಧಿತ ವಿವರಣೆಗಳು ಮತ್ತು ಆದೇಶಗಳು ಆತ್ಮ ಸಾಕ್ಷಾತ್ಕಾರ ಜ್ಞಾನ ಮತ್ತು ಅದನ್ನು ಹೊಂದುವ ಮಾರ್ಗಗಳನ್ನು ನಿರ್ದೇಶಿಸುವ ಪ್ರಧಾನ ಭಾಗಕ್ಕೆ ಆಧೀನವಾಗಿವೆ. ಬರಿ ಧರ್ಮಾಚರಣೆಯ ವಿಧಿವಿಧಾನಗಳ ನಿರ್ವಹಣೆಯು ಒಬ್ಬನನ್ನು ಕೇವಲ ಒಳ್ಳೆಯ ಮತ್ತು ಕೆಟ್ಟ ಕರ್ಮಗಳೆಡೆಗೆ ನಿರ್ದೇಶಿಸುತ್ತವೆ. ಈ ಕರ್ಮಗಳೇ ಅವನು ಆತ್ಮಸಾಕ್ಷಾತ್ಕಾರ ಹೊಂದುವುದಕ್ಕೆ ಅಡ್ಡಿಯಾಗುತ್ತವೆ. ವೇದಗಳ ಏಕಮಾತ್ರ ಗುರಿ ಬ್ರಹ್ಮನ್".

# ಆಸ್ತಿಕತೆಯ ವಿಕಾಸ

ಇಬ್ಬರು ಪಂಡಿತರು ವೇದಗಳ ಮೇಲೆ ವಿಧ ವಿಧ ರೀತಿಯಲ್ಲಿ ತಮಗಿದ್ದ ಅಗಾಧವಾದ ಜ್ಞಾನವನ್ನು ತೋರಿದರು ಮತ್ತು ತರ್ಕವು ಹದಿನೆಂಟು ದಿನಗಳ ವರೆಗೆ ಸತತವಾಗಿ ಹಾಗೂ ಪ್ರಬಲವಾಗಿ ಮುಂದುವರಿಯಿತು. ಕೊನೆಯ ದಿನ ಕಂಡು ಬಂದದ್ದೇನೆಂದರೆ ಮಂದನ ಮಿಶ್ರನ ಕೊರಳಲ್ಲಿದ್ದ ಮಾಲೆಯು ಒಣಗಲು ಪ್ರಾರಂಭಿಸಿತು ಮತ್ತು ಶಂಕರಚಾರ್ಯರ ಕರಳಲ್ಲಿದ್ದ ಹಾರವು ಹೊಚ್ಚಹೊಸದಾಗಿ ಉಳಿದಿತ್ತು. ಭಾರತಿಯು ಆಗ ಶಂಕರರು ವಿಜೇತರೆಂದು ಪ್ರಕಟಿಸಿದಳು. ಈಗ ಮಂದನ ಮಿಶ್ರರು ಲೌಕಿಕ ಪ್ರಪಂಚದೊಂದಿಗಿನ ಸಂಬಂಧವನ್ನು ತ್ಯಜಿಸಿ ಶಂಕರಚಾರ್ಯರ ಶಿಷ್ಯರಾಗಬೇಕಾಯಿತು.

ತನ್ನ ಪತಿಯನ್ನು ಉಳಿಸಿಕೊಳ್ಳುವ ಕೊನೆಯ ಪ್ರಯತ್ನದಲ್ಲಿ ಭಾರತಿ ಹೇಳಿದಳು, "ಓಹ್ ಮಹಾನ್ ಆಚಾರ್ಯರೆ, ಖಚಿತವಾಗಿಯೂ ನೀವು ನನ್ನ ಪತಿಯೊಡನೆ ತರ್ಕದಲ್ಲಿ ವಿಜಯಶಾಲಿಗಳು ಮತ್ತು ಈಗ ಅವರು ನಿಮ್ಮ ಶಿಷ್ಯರಾಗಬೇಕಾಗುತ್ತದೆ. ಏನೇ ಆದರೂ ಮಂದನ ಮಿಶ್ರರ ಪತ್ನಿಯಾದ ನಾನು ಅವರ ಅರ್ಧಾಂಗಿಯಾಗಿರುವುದರಿಂದ ನಿಮ್ಮ ಗೆಲುವು ಪೂರ್ಣವಾಗಬೇಕಾದರೆ ನೀವು ನನ್ನನ್ನು ಕೂಡ ಪರಾಭವಗೊಳಿಸಬೇಕು". ಶಂಕರಚಾರ್ಯರಿಗೆ ಸ್ವಲ್ಪ ಮಟ್ಟಿಗೆ ಆಶ್ಚರ್ಯವಾಯಿತಾದರೂ ಅವರು ಭಾರತಿಯ ಸವಾಲನ್ನು ಸ್ವೀಕರಿಸಿದರು.

ಶಂಕರಾಚಾರ್ಯರನ್ನು ಸಂಬೋಧಿಸುತ್ತ ಭಾರತಿ ಹೀಗೆಂದಳು,
"ನೀವು ಲೈಂಗಿಕ ಶಿಕ್ಷಣದ ಬಗ್ಗೆಯೂ ಕೂಡ ನಿಮಗೆ ಒಳ್ಳೆಯ ತಿಳಿವಳಿಕೆ ಇರುವುದೆಂದು ಪ್ರಮಾಣಿಸುವ ತನಕ ನನಗೆ ನೀವು ಎಲ್ಲ ವಿದ್ಯೆಗಳ ಒಡೆಯ(ಸ್ವಾಮಿ) ಎಂದು ಸ್ವೀಕರಿಸಲು ಸಾಧ್ಯವಿಲ್ಲ. ಈಗ ಹೇಳಿ ಪ್ರೇಮದ ವಿವಿಧ ಭಾವಗಳು ಮತ್ತು ರೂಪಗಳು ಯಾವುವು? ಲೈಂಗಿಕ ಪ್ರೀತಿಯ ಸ್ವಭಾವವೇನು? ಪುರುಷರು ಮತ್ತು ಸ್ತ್ರೀಯರಲ್ಲಿ ಲೈಂಗಿಕ ಒತ್ತಡಕ್ಕೆ

ಸಂಬಂಧಿಸಿದಂತೆ ಕೃಷ್ಣಪಕ್ಷ ಮತ್ತು ಶುಕ್ಲಪಕ್ಷದ ಪ್ರಭಾವಗಳೇನು? ಈ ಎಲ್ಲ ಪ್ರಶ್ನೆಗಳನ್ನು ನೀವು ಅಗತ್ಯವಾಗಿ ಉತ್ತರಿಸಬೇಕು".

ನೈಷ್ಠಿಕ ಸನ್ಯಾಸಿಯಾಗಿ ಮತ್ತು ಕೇವಲ ಹದಿನಾರು ವರುಷ ಪ್ರಾಯದ ಶಂಕರಾಚಾರ್ಯರು ತಮ್ಮ ಪ್ರತಿವಾದಿಗಳೆದುರಿಗೆ ದಿಗ್ಭ್ರಮೆಗೊಂಡವರಂತೆ ಗೋಚರಿಸಿದರು. ಆ ಕ್ಷಣದಲ್ಲಿ ಪ್ರಸ್ತುತ ವಿಷಯದ ಮೇಲೆ ಮಾತನಾಡಲು ತಾವು ಸಿದ್ಧವಾಗಿರಲಿಲ್ಲವಾದ್ದರಿಂದ ಶಂಕರಾಚಾರ್ಯರು ನಲವತ್ತು ದಿನಗಳ ಕಾಲಾವಕಾಶವನ್ನು ಬೇಡಿದರು. ಭಾರತಿ ಬೇಡಿಕೆಯನ್ನು ಸಮ್ಮತಿಸಿದ ನಂತರ ಶಂಕರಾಚಾರ್ಯರು ತಮ್ಮ ಶಿಷ್ಯರೊಂದಿಗೆ ಸಭೆಯಿಂದ ಹೊರಬಂದರು. ಆಧ್ಯಾತ್ಮಯೋಗದ ಮೂಲಕ ಶಂಕರಾಚಾರ್ಯರು ಸಮಾಧಿ ಪ್ರವೇಶಿಸಿದರು. ಅವರು ತಮ್ಮ ದೇಹವನ್ನು ಬಿಟ್ಟು ಅಮರುಕ ಎಂಬ ಭೋಗಾಸಕ್ತ ರಾಜನ ದೇಹವನ್ನು ಪ್ರವೇಶಿಸಿದರು. ರಾಜನ ದೇಹದಲ್ಲಿ ಶಂಕರಾಚಾರ್ಯರು ಕಾಮ ಸಂಬಂಧಿತ ಪ್ರೇಮವನ್ನು ಅನುಭವಿಸಿದರು ಮತ್ತು ಅದರ ಎಲ್ಲ ವಿಚಾರಗಳ ಸುವಿಸ್ತಾರವಾದ ಜ್ಞಾನವನ್ನು ಪಡೆದುಕೊಂಡರು. ನಲವತ್ತು ದಿನಗಳು ಅಂತ್ಯಗೊಳ್ಳುವ ಮುನ್ನ ಶಂಕರಾಚಾರ್ಯರು ಪುನಃ ತಮ್ಮ ದೇಹವನ್ನು ಪ್ರವೇಶಿಸಿ ಭಾರತಿಯೊಡನೆ ತರ್ಕಿಸಲು ಹಿಂದಿರುಗಿದರು.

ಒಂದು ಸಂಕ್ಷಿಪ್ತ ಸಂವಾದದ ತರುವಾಯ ಭಾರತಿಯು ಶಂಕರಾಚಾರ್ಯರನ್ನು ನಿರ್ವಿವಾದಿ ವಿಜೇತರೆಂದು ಒಪ್ಪಿಕೊಂಡಳು. ಶಂಕರಾಚಾರ್ಯರು ಈಗ ಭಾರತದಲ್ಲಿ ಪ್ರಮುಖ ಆಧ್ಯಾತ್ಮಿಕ ಗುರುಗಳಾದರು. ಹದಿನಾರು ವರುಷಗಳ ಕಾಲ ಹಗಲು ರಾತ್ರಿ ಸತತವಾಗಿ ಅದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಿದರು. ತಮ್ಮ ೩೨ ನೇ ವಯಸ್ಸಿನಲ್ಲಿ ಹಿಮಾಲಯದಲ್ಲಿ ತೀರ್ಥಯಾತ್ರೆ ಮಾಡುತ್ತಿರುವಾಗ ಇಹಲೋಕವನ್ನು ತ್ಯಜಿಸಿ ಪರಲೋಕವನ್ನು ಸೇರಿದರು.

# ಆಸ್ತಿಕತೆಯ ವಿಕಾಸ

ತಮ್ಮ ಜೀವನದಲ್ಲಿ ಶಂಕರಾಚಾರ್ಯರು 'ಭಜ ಗೋವಿಂದವ್' (ಗೋವಿಂದನನ್ನು ಭಜಿಸಿರಿ) ನಂತಹ ಅನೇಕ ಸುಂದರ ಶ್ಲೋಕಗಳನ್ನು ರಚಿಸಿದರು. ಸತತವಾಗಿ ತಮ್ಮ ವ್ಯಾಖ್ಯಾನಗಳುದ್ದಕ್ಕೂ ಬ್ರಹ್ಮನ್ನೇ ಪರಮ ಗುರಿ ಎಂದು ಬೋಧಿಸಿದ ಶಂಕರಚಾರ್ಯರ ಈ ಪ್ರಾರ್ಥನೆಗಳ ಸುತ್ತ ಒಂದು ರಹಸ್ಯ ಅಡಗಿದೆ ಅದೇನೆಂದರೆ ಅವರು ಈ ಶ್ಲೋಕಗಳಲ್ಲಿ ಗೋವಿಂದನಪೂಜೆಯ ಪ್ರಾಧಾನ್ಯತೆಯನ್ನು ಒತ್ತಿ ಹೇಳುತ್ತಾರೆ. ಶಂಕರಚಾರಯರು ಶಿವನ ಅವತಾರವಾದ್ದರಿಂದ ನಿಜವಾಗಿ ಅವರು ಭಗವಂತನ ಪರಮ ಭಕ್ತರು, ಆದರೆ ಅವರಿದ್ದ ಕಾಲ ಹಾಗೂ ಪರಿಸ್ಥಿತಿಯ ಅವಶ್ಯಕತೆಗಳಿಗನುಗುಣವಾಗಿ ಅವರು ಭಕ್ತಿಮಾರ್ಗದ ಪರಮೋಚ್ಚತೆಯನ್ನು ನೇರವಾಗಿ ಪ್ರತಿಪಾದಿಸಲು ಸಾಧ್ಯವಾಗಲಿಲ್ಲ ಎಂದು ಅವರ ಜೀವನವನ್ನು ವ್ಯಾಖ್ಯಾನಿಸಿದ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಈ ಪ್ರಪಂಚದಿಂದ ತೆರಳುವ ಮುನ್ನ ಶಂಕರಾಚಾರ್ಯರು ಈ ಕೊನೆಯ ಮಾತುಗಳನ್ನಾಡಿದರು

**ಭಜ ಗೋವಿಂದವ್ ಭಜ ಗೋವಿಂದವ್**
**ಗೋವಿಂದವ್ ಭಜ ಮೂಢ ಮತೆ**
**ಸಂಪ್ರಾಪ್ತೆ ಸನ್ನಿಹಿತೆ ಕಾಲೆ**
**ನಹಿ ನಹಿ ರಕ್ಷತಿ ದುಃಖರಿನ್ ಕರಣೆ**

"ಗೋವಿಂದನನ್ನು ಭಜಿಸಿರಿ, ಗೋವಿಂದನನ್ನು ಭಜಿಸಿರಿ! ಓಹ್ ಮೂಢಮತಿಗಳೇ! ಸುಮ್ಮನೆ ಗೋವಿಂದನನ್ನು ಭಜಿಸಿರಿ. ಮರಣ ಕಾಲದಲ್ಲಿ ನಿಮ್ಮ ವ್ಯಾಕರಣದ ನಿಯಮಗಳು ಮತ್ತು ಪದಗಳ ಮೋಡಿಗಳು ಯಾವ ಕೆಲಸಕ್ಕೂ ಬರಲಾರವು, ಸುಮ್ಮನೆ ಗೋವಿಂದನನ್ನು ಭಜಿಸಿ".



# ಭಾಗ ಮೂರು
# ರಾಮಾನುಜ

## ಭಕ್ತಿಮಾರ್ಗದ ಉಷ:ಕಾಲ

ಬುದ್ಧನ ನಿರ್ಗಮನದ ನಂತರ ಶಂಕರಾಚಾರ್ಯರ ಸಿದ್ಧಾಂತವು ಬೌದ್ಧ ಸಿದ್ಧಾಂತವನ್ನು ಮೀರಿ ಭಾರತದೆಲ್ಲೆಡೆ ಹರಡಿಕೊಂಡಿತು. ಉಪನಿಷತ್ತುಗಳು ಹಾಗೂ ಇನ್ನಿತರ ವೈದಿಕ ಸಾಹಿತ್ಯಗಳ ಪ್ರಭುತ್ವವು ಶಂಕರಾಚಾರ್ಯರಿಂದ ಪುನರುಜ್ಜೀವನಗೊಂಡು, ವೈದಿಕ ಕಟ್ಟಳೆಗಳು ಬೌದ್ಧ ಸಿದ್ಧಾಂತದೊಡನೆ ಹೋರಾಡಲು ಆಯುಧಗಳಾಗಿ ಬಳಸಲ್ಪಟ್ಟವು. ಒಂದು ನಿರ್ದಿಷ್ಟವಾದ ಪ್ರಮಾಣವನ್ನು ರೂಪಿಸಲು, ವೇದಗಳನ್ನು ವ್ಯಾಖ್ಯಾನಿಸುತ್ತ, ಎಲ್ಲ ಜೀವಿಗಳು ಭಗವಂತನೊಡನೆ ಒಂದು ಸಮಾನ ನೆಲೆಯಲ್ಲಿರುವರೆಂದು ಹೇಳುತ್ತಾ, ಶಂಕರರು ಅದ್ವೈತ ತತ್ತ್ವದ ಸಿದ್ಧಾಂತವನ್ನು ಸ್ಥಾಪಿಸಿದರು. ಬೌದ್ಧರ ವೈಚಾರಿಕ ನಾಸ್ತಿಕತೆಗೆ ಉತ್ತರವನ್ನು ಒದಗಿಸಿಬಲ್ಲ ಗ್ರಂಥಗಳಿಗೆ ಶಂಕರಾಚಾರ್ಯರು ಪ್ರಮುಖವಾಗಿ ಒತ್ತುಕೊಟ್ಟರು. ಆದಾಗ್ಯೂ ಶಂಕರರ ಬೋಧನೆಗಳು ಸಂಪೂರ್ಣವಾಗಿ ಆಸ್ತಿಕವಾದವುಗಳಾಗಿರಲಿಲ್ಲ, ಮತ್ತು, ಹೀಗೆ ಇನ್ನಷ್ಟು ಮುಂದಕ್ಕೆ ಕಟ್ಟಕಡೆಯ ಸತ್ಯಸ್ಥಿತಿಯ ಅನಾವರಣಗೊಳ್ಳುವಿಕೆಯು ಮೊದಲೇ ನಿರ್ಧರಿಸಲ್ಪಟ್ಟಿತ್ತು. ಆ ಪೂರ್ವನಿರ್ಣಯವು ಶ್ರೀ ರಾಮಾನುಜಾಚಾರ್ಯರ ಮೂಲಕ ಈಡೇರಿಸಲ್ಪಟ್ಟಿತು.

ರಾಮಾನುಜರು ೧೦೧೭ನೇ ಇಸವಿಯಲ್ಲಿ, ಜ್ಯೋತಿಷ್ಯಶಾಸ್ತ್ರದ ಗಣಿತದ ಪ್ರಕಾರ ಸೂರ್ಯನು ಕರ್ಕಾಟಕ ರಾಶಿಯಲ್ಲಿದ್ದಾಗ ಜನಿಸಿದರು. ಅವರ ತಂದೆ ಕೇಶವಾಚಾರ್ಯ ಮತ್ತು ತಾಯಿ ಕಾಂತಿಮತಿ. ಇವರಿಬ್ಬರೂ ಶ್ರೀಮಂತ ಕುಟುಂಬದಿಂದ ಬಂದವರು. ರಾಮಾನುಜರು ತಮ್ಮ

# ಆಸ್ತಿಕತೆಯ ವಿಕಾಸ

ಬಾಲ್ಯವನ್ನು ಅವರ ಹುಟ್ಟೂರಾದ ಶ್ರೀಪೆರೆಂಬದೂರ್‌ನಲ್ಲಿ ಕಳೆದರು. ೧೬ ವರುಷ ತುಂಬಿದಾಗ ರಕ್ಷಕಂಬಾಳ್ ಎಂಬ ಕನ್ಯೆಯೊಂದಿಗೆ ಅವರ ವಿವಾಹವಾಯಿತು.

ರಾಮಾನುಜರ ವಿವಾಹವಾಗಿ ಕೇವಲ ನಾಲ್ಕು ತಿಂಗಳಲ್ಲಿ ರಾಮಾನುಜರ ತಂದೆಯವರು ಭೀಕರ ಅನಾರೋಗ್ಯದಿಂದ ಬಳಲಿ ತೀರಿಕೊಂಡರು. ತಂದೆಯವರ ನಿಧನದ ನಂತರ ರಾಮಾನುಜರು ಕುಟುಂಬದ ಮುಖ್ಯಸ್ಥರಾದರು, ಮತ್ತು, ಪಂಡಿತರುಗಳು ಮತ್ತು ಅದ್ಭುತವಾದ ಮಂದಿರಗಳಿಗೆ ಹೆಸರುವಾಸಿಯಾದ ಪವಿತ್ರ ನಗರ ಕಾಂಚಿಗೆ ತೆರಳಲು ನಿರ್ಧರಿಸಿದರು.

ಕಾಂಚಿಯಲ್ಲಿ ಅದ್ವೈತ ಸಿದ್ಧಾಂತದಲ್ಲಿನ ತಮ್ಮ ಪಾಂಡಿತ್ಯಕ್ಕೆ ಪ್ರಸಿದ್ಧರಾದ ಯಾದವ ಪ್ರಕಾಶರೆಂಬ ಒಬ್ಬ ಪಂಡಿತರಿದ್ದರು. ವೇದಾಂತ ಸೂತ್ರದ ಮೇಲಿನ ಶಂಕರರ ಭಾಷ್ಯಗಳನ್ನು ವಿವರಿಸುವಲ್ಲಿ ಯಾದವಪ್ರಕಾಶರಿಗಿದ್ದ ಸಾಮರ್ಥ್ಯವನ್ನು ಮೀರಿಸಲು ಯಾರಿಂದಲೂ ಆಗುತ್ತಿರಲಿಲ್ಲ. ರಾಮಾನುಜರು ಯಾದವಪ್ರಕಾಶರ ಗುರುಕುಲದಲ್ಲಿ ದಾಖಲಾದರು ಮತ್ತು ಸಂಸ್ಕೃತ ಹಾಗೂ ವೈದಿಕ ಸಾಹಿತ್ಯದ ಅಧ್ಯಯನದಲ್ಲಿ ನಿರತರಾದರು. ಶಂಕರರ ಸಿದ್ಧಾಂತವನ್ನು ಎಳ್ಳಷ್ಟೂ ಒಪ್ಪದಿದ್ದರೂ, ರಾಮಾನುಜರು ತಮ್ಮ ಪಾಠಗಳನ್ನು ಚೆನ್ನಾಗಿ ಕಲಿತು ಬಹಳ ಬೇಗನೆ ಯಾದವಪ್ರಕಾಶರ ಮೆಚ್ಚಿನ ಶಿಷ್ಯರಲ್ಲಿ ಒಬ್ಬರಾದರು. ರಾಮಾನುಜರನ್ನು ಶಂಕರರ ವೈದಿಕ ನಿರ್ಣಯಗಳ ಒಬ್ಬ ನಿಷ್ಠಾವಂತ ಅನುಯಾಯಿ ಎಂದು ತಿಳಿದು, ಯಾದವಪ್ರಕಾಶರು ರಾಮಾನುಜರಲ್ಲಿ ವಿಶೇಷವಾದ ಪ್ರೀತಿಯನ್ನು ತೋರಿದರು. ಆದರೆ ಆ ಪ್ರೀತಿಯು ಹೆಚ್ಚು ದಿನ ಉಳಿಯಲಿಲ್ಲ.

# ರಾಮಾನುಜಾಚಾರ್ಯರು

ಒಂದು ದಿನ ಛಾಂದೋಗ್ಯ ಉಪನಿಷತ್ತಿನ ಮೇಲಿನ ಪ್ರವಚನ ಮುಕ್ತಾಯಗೊಂಡ ನಂತರ ಯಾದವಪ್ರಕಾಶರು ತೈಲಲೇಪಿಸಿ ತಮ್ಮ ಅಂಗಮರ್ಧನ ಮಾಡಲು ರಾಮಾನುಜರಿಗೆ ಹೇಳಿದರು, ಇದು ಆಗಿನ ಕಾಲದಲ್ಲಿ ಒಬ್ಬ ವಿದ್ಯಾರ್ಥಿಯು ಗುರುಗಳಿಗೆ ಸಲ್ಲಿಸಬೇಕಾದ ಒಂದು ಸಂಪ್ರದಾಯಿಕ ಸೇವೆಯಾಗಿತ್ತು. ತಮ್ಮ ಗುರುಗಳಿಗೆ ಅಂಗಮರ್ಧನ ಮಾಡುತ್ತಿದ್ದ  ಸಮಯದಲ್ಲಿ ಇನ್ನೊಬ್ಬ ವಿದ್ಯಾರ್ಥಿಯು ಯಾದವರ ಹತ್ತಿರ ಬೆಳಿಗ್ಗೆ ನೀಡಿದ ಉಪನ್ಯಾಸದಲ್ಲಿನ ಒಂದು ಮುಖ್ಯ ಅಂಶದ ಬಗ್ಗೆ ಸ್ಪಷ್ಟನೆ ಕೇಳಲು ಬಂದನು. ಆ ಹುಡುಗನು ಮೊದಲನೆಯ ಅಧ್ಯಾಯದ ಏಳನೆ ಶ್ಲೋಕದ ಅರ್ಥವನ್ನು ಸರಿಯಾಗಿ ಗ್ರಹಿಸುವಲ್ಲಿ ವಿಫಲನಾಗಿದ್ದನು. **'ತಸ್ಯ ಯಥಾ ಕಪ್ಯಸಂ ಪುಂಡರೀಕಂ ಏವಂ ಅಕ್ಷಿನಿ'** ಎಂದು ಪ್ರಾರಂಭವಾಗುವ ಆ ಶ್ಲೋಕಕ್ಕೆ ಯಾದವರು, ಭಗವಂತನ ದಿವ್ಯ ಗುಣಗಳನ್ನು ವಿವರಿಸುವ ತಮ್ಮದೇ ಆದ ಒಂದು ವ್ಯಾಖ್ಯಾನವನ್ನು, ಎದ್ದುಕಾಣುವಂತೆ ಆಕ್ಷೇಪಾರ್ಹವಾಗಿ ಬಣ್ಣಿಸತೊಡಗಿದರು. ಭಗವತ್ಪ್ರೇಮದಿಂದ ತುಂಬಿದ್ದ ರಾಮಾನುಜರ ಹೃದಯವು ತಮ್ಮ ಗುರುಗಳ ಆಕ್ಷೇಪಾರ್ಹ ವ್ಯಾಖ್ಯಾನವನ್ನು ಕೇಳಿ ಬಹಳ ದುಃಖಿತವಾಯಿತು ಮತ್ತು ಅವರ ಕಣ್ಣುಗಳಿಂದ ಅಶ್ರುಧಾರೆ ಹರಿದು ಯಾದವರ ತೊಡೆಯ ಮೇಲೆ ಬಿದ್ದಿತು. ಬಿಸಿ ಕಣ್ಣೀರಿನ ಸ್ಪರ್ಶವನ್ನು ಅರಿತ ಯಾದವರು ರಾಮಾನುಜರನ್ನು ನೋಡುತ್ತಿದ್ದಂತೆ ರಾಮಾನುಜರನ್ನು ಯಾವುದೋ ನೋವು ಕಾಡುತ್ತಿದೆಯೆಂದು ಅರ್ಥವಾಯಿತು. ರಾಮಾನುಜರ ವ್ಯಥೆಗೆ ಕಾರಣವೇನೆಂದು ಯಾದವಪ್ರಕಾಶರು ವಿಚಾರಿಸಿದಾಗ ರಾಮಾನುಜರು ಹೀಗೆಂದು ಉತ್ತರಿಸಿದರು, ''ಮಹಾಜ್ಞಾನಿಗಳಾಗಿರುವ ಓ ಶ್ರೇಷ್ಠ ಗುರುಗಳೇ, ನಿಮ್ಮಂತಹ ಉದಾತ್ತ ಸ್ವಭಾವದವರಿಂದ ಇಂತಹ ಒಂದು ಅನುಚಿತ ವಿವರಣೆಯನ್ನು ಕೇಳಿ ನನ್ನ ಹೃದಯಕ್ಕೆ ಬಹಳ ನೋವುಂಟಾಗಿದೆ. ಸಕಲ ವಿನಯಶೀಲ ಗುಣಗಳಿಂದ ಸಂಪನ್ನನಾಗಿರುವ ಹಾಗೂ ಈ ಜಗತ್ತಿನ

# ಆಸ್ತಿಕತೆಯ ವಿಕಾಸ

ಸಕಲ ಸುಂದರ ವಸ್ತುಗಳಿಗೆ ಮೂಲನಾಗಿರುವ ಭಗವಂತನನ್ನು ನೀವು ನಿಮ್ಮ ಅನುಚಿತ ವಿವರಣೆಗಳಿಂದ ಹೀನಾಯಿಸುವುದು ಎಂತಹ ಪಾಪದ ಕಾರ್ಯ. ನಿಮ್ಮಂತಹ ವಿದ್ವಾಂಸರ ಬಾಯಿಯಿಂದ ಇಂತಹ ಕೆಳಮಟ್ಟದ ಮತ್ತು ಕಪಟಯುಕ್ತವಾದ ವ್ಯಾಖ್ಯಾನವನ್ನು ನಾನು ಎಂದಿಗೂ ನಿರೀಕ್ಷಿಸಿರಲಿಲ್ಲ!''

ಯಾದವಪ್ರಕಾಶರು ಅತ್ಯಂತ ಕೋಪಗೊಂಡರು ಮತ್ತು ತಮ್ಮ ಕೋಪವನ್ನು ನಿಯಂತ್ರಿಸಿಕೊಳ್ಳಲಾಗದೇ ವ್ಯಂಗ್ಯವಾಗಿ ನಗುತ್ತ ಹೀಗೆಂದರು, ``ಸರಿ ಹಾಗಾದರೆ'' ``ನೀನು ನನಗಿಂತಲೂ ಹೆಚ್ಚು ತಿಳಿದಿರುವೆನೆಂದು ಸ್ಪಷ್ಟವಾಗಿ ಭಾವಿಸಿತ್ತಿರುವೆಯಾದ್ದರಿಂದ ಬಹುಶಃ ನೀನು ನಿನ್ನದೇ ಆದ ವ್ಯಖ್ಯಾನವನ್ನು ಕೊಡಲು ಇಚ್ಛಿಸುತ್ತಿರಬಹುದು!''

ಬಹಳ ಮೃದುವಾದ ಧ್ವನಿಯಲ್ಲಿ ರಾಮಾನುಜರು ಉತ್ತರಿಸಿದರು, ``ಪೂಜ್ಯರೇ ಶ್ಲೋಕದ ನಿಜವಾದ ಅರ್ಥವು ನೇರವಾಗಿ ಮತ್ತು ಶ್ಲಾಘನೀಯವಾಗಿರುವಾಗ ಕೀಳ್ದರ್ಜೆಯ ಭಾವನೆಯನ್ನುಂಟುಮಾಡುವ ವ್ಯಾಖ್ಯಾನವನ್ನು ಕೊಡುವುದು ಸಮಂಜಸವಲ್ಲ.''

``ಹಾಗಾದರೆ ಅಷ್ಟು ಶ್ಲಾಘನೀಯವಾಗಿರುವ ಆ ನಿನ್ನ ವಿವರಣೆಯನ್ನು ಕೇಳೋಣ!'' ಎಂದರು ಯಾದವರು. ಆಗ ರಾಮಾನುಜರು ಎದ್ದು ನಿಂತು ಬಹಳ ನಮ್ರತೆಯಿಂದ ಶ್ಲೋಕದ ಅರ್ಥವನ್ನು ಪಠಿಸಿದರು. ``ಭಗವಂತನ ಎರಡು ಕಣ್ಣುಗಳು ಸೂರ್ಯನ ಕಿರಣಗಳಿಂದ ಪ್ರಫುಲ್ಲಿತಗೊಂಡ ಎರಡು ಕಮಲಗಳಂತೆ ರಮಣೀಯವಾಗಿವೆ.''

``ಓಹೋ!'' ಯಾದವಪ್ರಕಾಶರು ನುಡಿದರು. ``ಅಂತಹ ಪರಮ ಪುರುಷನೊಬ್ಬನು ಅಸ್ತಿತ್ವದಲ್ಲಿರುವ ಹಾಗೆ ನೀನು ಮಾತನಾಡುತ್ತಿರುವೆ,

ಇದಕ್ಕೆ ನಿನ್ನ ಬಾಲಿಶ ಆಜ್ಞಾನವೇ ಕಾರಣ, ನೀನು ನಿನ್ನ ಪಾಠಗಳನ್ನು ಸರಿಯಾಗಿ ಕಲಿತುಕೊಂಡಿಲ್ಲ. ಭಗವಂತನು ಅನಾಮಿಕನು, ನಿರಾಕಾರನು ಮತ್ತು ನಿರ್ಗುಣನು ಎಂಬ ಅಂಶಗಳನ್ನು ನೀನು ಯಾವಾಗಲೂ ನೆನಪಿನಲ್ಲಿಡಬೇಕು. ಅದೇ ಶಂಕರಾಚಾರ್ಯರ ಬೋಧನೆ. ಭವಿಷ್ಯದಲ್ಲಿ ನಿನ್ನ ಇಂತಹ ಮೂಢ ಭಾವನೆಗಳನ್ನು ವ್ಯಕ್ತಪಡಿಸಬೇಡ! ಯಾದವಪ್ರಕಾಶರ ಮಾತುಗಳು ರಾಮಾನುಜರಿಗೆ ಬಹಳ ನೋವನ್ನುಂಟುಮಾಡಿದವು ಆದರೂ ಅವರು ತಮ್ಮ ಗುರುಗಳ ಮೇಲಿನ ಗೌರವದಿಂದಾಗಿ ಮೌನರಾದರು''.

ಕೆಲವು ದಿನಗಳ ನಂತರ ಇನ್ನೊಂದು ಘಟನೆ ಸಂಭವಿಸಿತು. 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂದು ಪ್ರಾರಂಭವಾಗುವ ತೈತ್ತಿರೀಯ ಉಪನಿಷತ್ತಿನ ಒಂದು ಶ್ಲೋಕವನ್ನು ವಿವರಿಸುವಾಗ ಯಾದವಪ್ರಕಾಶರು ಬ್ರಹ್ಮನ್ ಜ್ಞಾನವು, ಸತ್ಯವು ಮತ್ತು ಅನಂತವಾಗಿರುವುದೆಂದು ಹೇಳಿದರು.

ಈ ವಿವರಣೆಯನ್ನು ಕೇಳಿದ ರಾಮಾನುಜರು ವಿನಯವಾಗಿ ಹೀಗೆಂದರು, ಬ್ರಹ್ಮನ್(ಪರಮಾತ್ಮನು); ಜ್ಞಾನ, ಸತ್ಯ ಮತ್ತು ಅನಂತತೆಗಳಿಂದ ಸಂಪನ್ನನಾಗಿರುವನು, ಅಂದರೆ ಅವನು ಸಾಮಾನ್ಯ ಜೀವಿಗಳ ಹಾಗೆ ಅಜ್ಞಾನದಿಂದ ಆವೃತನಾಗಿಲ್ಲ, ಅವನು ಎಂದಿಗೂ ಅಸತ್ಯನಲ್ಲ, ಮತ್ತು ಅವನ ಶಕ್ತಿಗಳು ಅಪರಿಮಿತ, ಪರಿಮಿತವಲ್ಲ. ಪರಬ್ರಹ್ಮನು ಎಲ್ಲ ಒಳ್ಳೆಯ ಗುಣಗಳ ಆಗರ, ಆದಾಗ್ಯೂ, ಸೂರ್ಯನು ತನ್ನ ಬೆಳಕಿಗೆ ಹೇಗೆ ವರಿಷ್ಠನೋ, ಹಾಗೆ ಪರಬ್ರಹ್ಮನು ಆ ಎಲ್ಲ ಗುಣಗಳಿಗೆ ವರಿಷ್ಠನು.''

ಯಾದವಪ್ರಕಾಶರು ಆಂತರ್ಯದಲ್ಲಿ ಅನುಭವಿಸುತ್ತಿದ್ದ ಉದ್ವೇಗವು, ಅವರ ಧ್ವನಿಯನ್ನು ಕಂಪಿಸುವಂತೆ ಮಾಡಿತು. ಅನುಭವವಿಲ್ಲದ ಯುವ

# ಆಸ್ತಿಕತೆಯ ವಿಕಾಸ

ಮೂರ್ಖನೇ! ಯಾದವರು ರಾಮಾನುಜರನ್ನುದ್ದೇಶಿಸಿ ಕಿರುಚಿದರು. "ನಿನ್ನ ತೀರ್ಮಾನಗಳು ಶಂಕರರ ಅಥವಾ ಪೂರ್ವದ ಯಾವ ಆಚಾರ್ಯರ ಉಪಸಂಹಾರಗಳನ್ನೂ ಹೋಲುವುದಿಲ್ಲ! ನೀನು ಹೀಗೆ ಒಬ್ಬ ವ್ಯಕ್ತಿತ್ವವುಳ್ಳ ದೇವರ ಕುರಿತು ಪ್ರಯೋಜನವಿಲ್ಲದ ಮಾತುಗಳನ್ನಾಡಲು ಛಲ ಹಿಡಿಯುವುದಾದರೆ, ಸುಮ್ಮನೆ ನನ್ನ ಸಮಯ ವ್ಯರ್ಥ ಮಾಡಲು ಇಲ್ಲಿಗೇಕೆ ಬಂದೆ? ನಿನಗೆ ಇಷ್ಟವಾಗುವುದನ್ನು ಬೋಧಿಸಲು ನೀನು ನಿನ್ನದೇ ಆದ ಒಂದು ಗುರುಕುಲವನ್ನು ಏಕೆ ಪ್ರಾರಂಭಿಸಬಾರದು? ಈ ಕ್ಷಣವೇ ನನ್ನ ತರಗತಿಯಿಂದ ಹೊರಟು ಹೋಗು!"

ರಾಮಾನುಜರು ನಿಶ್ಯಬ್ದವಾಗಿ ತಮ್ಮ ಆಸನದಿಂದ ಎದ್ದು ತರಗತಿಯಿಂದ ಹೊರಬರುತ್ತಿದ್ದ ಹಾಗೆ ಯಾದವರು ಯೋಚಿಸಲು ಪ್ರಾರಂಭಿಸಿದರು, "ಈ ರಾಮಾನುಜನು ಒಬ್ಬ ಸಾಮಾನ್ಯ ಬಾಲಕನಲ್ಲ. ಅವನು ತನ್ನ ಸ್ವಂತ ಶಾಲೆಯನ್ನು ಪ್ರಾರಂಭಿಸಿದರೆ, ಭಕ್ತಿಯ ಸಿದ್ಧಾಂತವು ಅದ್ವೈತ ಸಿದ್ಧಾಂತಕ್ಕೆ ಕಂಟಕವಾಗಬಹುದು. ನಮ್ಮ ಸಿದ್ಧಾಂತವನ್ನು ಸಂರಕ್ಷಿಸುವ ಸಲುವಾಗಿ ಈ ಮೂರ್ಖನು ಹತನಾಗಬೇಕು!."

ಈಘಟನೆ ನಡೆದ ಸ್ವಲ್ಪಸಮಯದಲ್ಲೇ, ರಾಮಾನುಜರು ತಮ್ಮ ನಿವಾಸದಲ್ಲಿ ಒಂದು ಸಣ್ಣಗುರುಕುಲವನ್ನು ಪ್ರಾರಂಭಿಸಿದರು. ಸ್ವಲ್ಪ ಸಮಯದಲ್ಲೇ ಬಹಳಷ್ಟು ಜನ ಭಕ್ತಿಮಾರ್ಗದ ಕುರಿತು ರಾಮಾನುಜರ ಉಪನ್ಯಾಸಗಳನ್ನು ಕೇಳಲು ಅವರಲ್ಲಿಗೆ ಬರಲಾರಂಭಿಸಿದರು. ರಾಮಾನುಜರ ಉಪನ್ಯಾಸಗಳು ಸಂಪೂರ್ಣವಾಗಿ ಆಸ್ತಿಕತೆಯ ಕುರಿತಾಗಿದ್ದವು. ಶಂಕರರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತದ ಪ್ರಕಾರ ಒಂದು ಜೀವಿಯು ಪರಬ್ರಹ್ಮನಿಗೆ ಸಮಾನವಾಗಿರಬಹುದು ಅಥವಾ ದೇವರೆ ಆಗಬಹುದು ಎಂಬ ತತ್ತ್ವವನ್ನು ರಾಮಾನುಜರು ತಿರಸ್ಕರಿಸಿದರು. ಜೀವವು ಭಗವಂತನ ಒಂದು ಅಂಶ ಮತ್ತು

# ರಾಮಾನುಜಾಚಾರ್ಯರು

ಪರಿಪೂರ್ಣನಾದ ಭಗವಂತನ ಸೇವೆಯೇ ಅದರ ಪ್ರವೃತ್ತಿ ಎಂದು ರಾಮಾನುಜರು ಬೋಧಿಸಿದರು. ದೇಹದ ಒಂದು ಅಂಗ ಹೇಗೆ ದೇಹದ ಭಾಗವಾಗಿದ್ದು ಸ್ವಾಭಾವಿಕವಾಗಿ ಅದೇ ದೇಹಕ್ಕೆ ಸೇವಕನಾಗಿರುತ್ತದೋ, ಹಾಗೆಯೇ, ಜೀವವು ಭಗವಂತನ ಅಂಶವಾಗಿದ್ದು ಪರಮ ಪ್ರಭುವಿನ ಸೇವೆಯೇ ಅದರ ಸ್ವಾಭಾವಿಕ ಪ್ರವೃತ್ತಿಯಾಗಿರುತ್ತದೆ. ರಾಮಾನುಜರ ಸಿದ್ಧಾಂತವು ವಿಶಿಷ್ಟಾದ್ವೈತ ಅಥವಾ ಗುಣಾತ್ಮಕ(ತನ್ನ ರೂಪ, ಗುಣ ಮತ್ತು ಶಕ್ತಿಗಳೊಂದಿಗೆ ಬ್ರಹ್ಮನ್‌ನನ್ನು ಗುರುತಿಸುವ ವಿಶಿಷ್ಟ)ಅದ್ವೈತ ಸಿದ್ಧಾಂತ ಎಂದು ಪ್ರಸಿದ್ಧವಾಗಿದೆ. ಈ ಸಿದ್ಧಾಂತದ ಪ್ರಕಾರ ಏಕಕಾಲದಲ್ಲಿ ಜೀವಿಯು ಭಗವಂತನಿಗೆ ಗುಣಾತ್ಮಕವಾಗಿ ಸಮನಾಗಿರುವನು ಮತ್ತು ಪರಿಮಾಣದಲ್ಲಿ ಭಿನ್ನನಾಗಿರುವನು. ಪರಿಮಾಣದಲ್ಲಿ ಅಂತರ ಅಂದರೆ ಭಗವಂತನ ತುಣುಕು ಭಾಗಗಳು ಭಗವಂತನನ್ನು ಅವಲಂಬಿಸಿವೆ, ಆದರೆ ಅವು ಭಗವಂತನಾಗಲು ಸಾಧ್ಯವಿಲ್ಲ.

ಎಲ್ಲವೂ ಬ್ರಹ್ಮನ್ ಮತ್ತು ಬ್ರಹ್ಮನ್ ತಾನೇತಾನಾಗಿ ನಿರಂಕುಶ, ಏಕಸಾಮ್ಯ, ಅಭಿನ್ನ ಮತ್ತು ವ್ಯಕ್ತಿತ್ವರಹಿತ; ಮಾಯೆ ಅಥವಾ ಭ್ರಮೆಯಿಂದಾಗಿ ಪ್ರತ್ಯೇಕ ವ್ಯಕ್ತಿತ್ವವು ಉಂಟಾಗಿದೆ ಎಂದು ಶಂಕರರ ಸಿದ್ಧಾಂತವು ಪ್ರತಿಪಾದಿಸುತ್ತದೆ. ಆದರೆ ಈ ಸಿದ್ಧಾಂತವನ್ನು ರಾಮಾನುಜರು ಖಡಾ ಖಂಡಿತವಾಗಿ ವಿರೋಧಿಸಿದರು. ಯೋಗ್ಯತಾವಿಶೇಷವಿಲ್ಲದ ಒಂದು ವ್ಯಕ್ತಿ ಅಥವಾ ವಸ್ತುವಿನ ಜ್ಞಾನವು ಇರುವುದು ಅಸಾಧ್ಯ; ಜ್ಞಾನವು ಅವಶ್ಯವಾಗಿ ಯಾವುದಾದರೊಂದುವಿಧದ ಗುಣಲಕ್ಷಣಗಳ ವಿವರಣೆಯಂತೆ ಒಂದು ವ್ಯಕ್ತಿ ಅಥವಾ ವಸ್ತುವನ್ನು ಸೂಚಿಸುತ್ತದೆ. ರಾಮಾನುಜರು ಎಂದಿಗೂ ನಿರ್ಗುಣ, ನಿರ್ಭಿನ್ನ ಬ್ರಹ್ಮನ್ ತತ್ತ್ವವನ್ನು ಸ್ವೀಕರಿಸಲಿಲ್ಲ ಬದಲಾಗಿ ಒಂದು ಅತ್ಯುನ್ನತವಾದ ವಾಸ್ತವಿಕ ಗುಣಲಕ್ಷಣಗಳನ್ನುಳ್ಳ ಸ್ವಯಂ ಭಗವಾನ್ ನನ್ನು ಸ್ವೀಕರಿಸಿದರು. ಹೇಗೆ ಜೀವಿಗಳು ಪ್ರತ್ಯೇಕವಾದ ವ್ಯಕ್ತಿತ್ವವುಳ್ಳವರೊ ಹಾಗೆಯೇ ಭಗವಂತನು

# ಆಸ್ತಿಕತೆಯ ವಿಕಾಸ

ಒಬ್ಬ ವ್ಯಕ್ತಿ – ಪರಮ ವ್ಯಕ್ತಿತ್ವವುಳ್ಳವನು ಎಂದು ರಾಮಾನುಜರ ಸಿದ್ಧಾಂತವು ಹೇಳುತ್ತದೆ.

ರಾಮಾನುಜರು ಇನ್ನೂ ಮುಂದಕ್ಕೆ ತರ್ಕಿಸುತ್ತಾ, ಒಂದುವೇಳೆ ಭ್ರಮೆಯು ಭಗವಂತನ ವ್ಯಕ್ತಿತ್ವವನ್ನು ಆವರಿಸಬಹುದಾದರೆ, ಭ್ರಮೆಯು ಭಗವಂತನಿಗಿಂತ ಮಿಗಿಲಾಗಿರಬೇಕಿತ್ತು ಎಂದು ಶಂಕರರ ಸಿದ್ಧಾಂತವನ್ನು ಖಂಡಿಸಿದರು. ಹಾಗಾಗಿ ನಾವು ನಿತ್ಯವಾಗಿ ಪ್ರತ್ಯೇಕ ವ್ಯಕ್ತಿತ್ವಗಳು ಮತ್ತು ಭಗವಂತನು ನಿತ್ಯವಾಗಿ ಪರಮ ಪುರುಷನು, ಆದರೆ ನಮ್ಮ ಪರಿಮಿತ ಸ್ವಭಾವದಿಂದಾಗಿ ನಾವು ಕಲವುಸಲ ಭ್ರಮೆಗೊಳಗಾಗುತ್ತೇವೆ ಎಂದು ರಾಮಾನುಜರು ಪ್ರತಿಪಾದಿಸಿದರು.

ಶಂಕರರು ತಿರಸ್ಕರಿಸಿದ ಪರಿವರ್ತನಾವಾದದ ತತ್ತ್ವವನ್ನು ರಾಮಾನುಜರು ಸ್ವೀಕರಿಸಿದರು. ಶಂಕರರ ಪ್ರಕಾರ ಈ ಐಹಿಕ ಜಗತ್ತು ಅಸತ್ಯವಾದದ್ದು; ಅದಕ್ಕೆ ಅಸ್ತಿತ್ವವಿಲ್ಲ. ಆದರೆ ರಾಮಾನುಜರ ಪ್ರಕಾರ ಈ ಭೌತಿಕ ಜಗತ್ತು ಭಗವಂತನ ಶಕ್ತಿಯಿಂದುಂಟಾಗಿದೆ ಮತ್ತು ಈ ಭೌತಿಕಜಗತ್ತನ್ನು ಸೃಷ್ಟಿಸುವ ಪ್ರಕ್ರಿಯೆಯಿಂದಾಗಿ ಪರಾತ್ಪರ ಸತ್ಯನಾದ ಭಗವಂತನ ಮಹತ್ವತೆಯಲ್ಲಿ ಯಾವುದೇ ಬದಲಾವಣೆಯುಂಟಾಗುವುದಿಲ್ಲ. ಉದಾಹರಣೆಗೆ ಒಬ್ಬ ಸಂಗೀತಗಾರನು ತನ್ನ ಸ್ವಂತ ಪತಿಭೆಯಿಂದ ಒಂದು ಹಾಡನ್ನು ಸೃಷ್ಟಿಸಿದಾಗ ಅವನ ಪ್ರತಿಭೆಯು ಹೇಗೆ ಕುಂಠಿತಗೊಳ್ಳದೇ ಇನ್ನಷ್ಟು ಶ್ಲಾಘನೀಯವಾಗುತ್ತದೋ ಹಾಗೆ, ಭೌತಿಕ ಜಗತ್ತಿನ ಸೃಷ್ಟಿಯಿಂದ ಭಗವಂತನ ಶಕ್ತಿಯು ಕುಂಠಿತ ಗೊಳ್ಳುವುದಿಲ್ಲ ಬದಲಾಗಿ ಅವನ ಕೀರ್ತಿಯು ಇನ್ನಷ್ಟು ಹೆಚ್ಚುತ್ತದೆ.

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಈ ಐಹಿಕ ಜಗತ್ತಾಗಲಿ ಅಥವಾ ಜೀವಿಗಳಾಗಲಿ ಯಾವುದೂ ಪರಮ ಪುರುಷನಿಂದ

ಸ್ವತಂತ್ರವಾಗಿಲ್ಲವೆಂದು ಕಲ್ಪಿಸಲಾಗಿದೆ. ಸ್ವತಂತ್ರ ಸಂಕಲ್ಪದಿಂದ ಸಂಪನ್ನರಾಗಿರುವುದರಿಂದ ಜೀವಶಕ್ತಿಗಳು ಪರಮ ಪ್ರಭುವಿನ ಭಿನ್ನ ಅಂಶಗಳು ಆದರೆ ಐಹಿಕ ಶಕ್ತಿಯು ನೇರವಾಗಿ ಪರಮ ಪ್ರಭುವಿನ ಸಂಕಲ್ಪದಿಂದ ಪ್ರಕಟವಾಗುತ್ತದೆ. ಈ ಜೀವಾತ್ಮರಿಗೆ ಇರುವ ಸ್ವತಂತ್ರ ಸಂಕಲ್ಪವೇ ಒಂದು ಬಹು ಮುಖ್ಯವಾದ ಅಂಶ ಏಕೆಂದರೆ ಈ ಸ್ವತಂತ್ರ ಸಂಕಲ್ಪವು ಭಗವಂತನ ಮತ್ತು ಜೀವಿಗಳ ನಡುವೆ ಇರುವ ಪರಸ್ಪರ ಅನ್ಯೋನ್ಯ ಸಂಬಂಧದ ಮೂಲಭೂತ ತತ್ತ್ವವೆಂದು ಪರಿಗಣಿಸಲಾಗಿದೆ.

ರಾಮಾನುಜರು ಜೀವಿಗಳ ಮತ್ತು ಭಗವಂತನ ನಡುವಿನ ಸಂಬಂಧವು ನಿತ್ಯ ಸೇವೆಯದು ಎಂದು ತೋರಿಸಿಕೊಟ್ಟರು. ರಾಮಾನುಜರ ಪ್ರಕಾರ ಒಬ್ಬ ಒಡೆಯ ಮತ್ತು ಅವನ ಸೇವಕನ ನಡುವೆ ಇರುವ ಭಾವನಾತ್ಮಕ ಸಂಬಂಧದ ಹಾಗೆ ಜೀವಿಗಳು ಭಗವಂತನ ಮೇಲಿನ ಭಕ್ತಿ ಹಾಗೂ ಸ್ವಾಭಾವಿಕ ಪ್ರೀತಿಯ ವಿಧಾನದಿಂದ ಈ ಭೌತಿಕ ಶಕ್ತಿಯಿಂದ ಉತ್ಪತ್ತಿಯಾದ ಭ್ರಮೆಗಳಿಂದ ಬಿಡುಗಡೆ ಹೊಂದಿದಾಗ ಆತ್ಮವು ವೈಕುಂಠ ಎನ್ನುವ ಆಧ್ಯಾತ್ಮಿಕ ಆಕಾಶವನ್ನು ಪ್ರವೇಶಿಸುತ್ತವೆ. ವೈಕುಂಠ ಪ್ರವೇಶಿಸಿದ ನಂತರ ಆತ್ಮವು ಪರಮ ಪುರುಷನಾದ ನಾರಾಯಣನ ನಿತ್ಯ ಸೇವೆಯಲ್ಲಿ ತೊಡಗುತ್ತದೆ. ಈ ಶ್ರೇಷ್ಠವಾದ ಸಂದೇಶವನ್ನು ರಾಮಾನುಜರು ದಿನನಿತ್ಯ ತಮ್ಮ ಉಪನ್ಯಾಸ ಕೇಳುವವರಿಗೆ ಉಪದೇಶಿಸುತ್ತಿದ್ದರು.

ರಾಮಾನುಜರ ಬೆಳೆಯುತ್ತಿರುವ ಜನಪ್ರಿಯತೆ ಮತ್ತು ಕಾಂಚಿಯ ಜನಗಳ ಮೇಲಿನ ಅವರ ಪ್ರಭಾವವನ್ನು ನೋಡಿದ ಒಣಪ್ರತಿಷ್ಠೆಯ ಮತ್ತು ದುರಹಂಕಾರಿಯಾದ ಯಾದವ ಪ್ರಕಾಶರು ಉದ್ರಿಕ್ತರಾದರು. ತಮ್ಮ ಆಪ್ತ ಶಿಷ್ಯಂದಿರನ್ನು ತಮ್ಮ ಬಳಿಗೆ ಕರೆದುಒಟ್ಟುಗೂಡಿಸಿ ಯಾದವಪ್ರಕಾಶರು ಹೀಗೆಂದರು, "ಉದ್ಧಟನಾದ ರಾಮಾನುಜನು

# ಆಸ್ತಿಕತೆಯ ವಿಕಾಸ

ಪಾಖಂಡಿ! ಅವನು ಸಮಾಜಕ್ಕೆ ಒಂದು ಪೀಡೆ ಮತ್ತು ನಮ್ಮ ಅದ್ವೈತ ಸಿದ್ಧಾಂತಕ್ಕೆ ಒಂದು ಕಂಟಕ. ಈ ನೀಚನನ್ನು ಕೊಲ್ಲುವುದೊಂದನ್ನು ಬಿಟ್ಟರೆ ಈ ಸಮಸ್ಯೆಗೆ ಇನ್ಯಾವ ಪರಿಹಾರವೂ ನನಗೆ ಕಾಣಿಸುತ್ತಿಲ್ಲ! ನಿಮ್ಮ ಅಭಿಪ್ರಾಯವೇನು?" ಯಾದವಪ್ರಕಾಶರ ಶಿಷ್ಯಂದಿರು ಸಂಪೂರ್ಣವಾಗಿ ಅವರಮಾತಿಗೆ ಸಮ್ಮತಿಸಿದರು ಏಕೆಂದರೆ ಅವರಿಗೂ ಕೂಡಾ ರಾಮಾನುಜರ ಮೇಲೆ ಮತ್ಸರವಿತ್ತು. ಹೀಗೆ ರಾಮಾನುಜರನ್ನು ಕೊಲ್ಲುವ ಸಂಚುಸಿದ್ದವಾಯಿತು.

ಪವಿತ್ರವಾದ ಗಂಗಾ ನದಿಯನ್ನು ಪೂಜಿಸುವ ನೆಪವನ್ನು ಮಾಡಿ ಯಾದವರು ಮತ್ತು ಅವರ ಶಿಷ್ಯ ವರ್ಗದವರು ತೀರ್ಥಯಾತ್ರೆಗೆಂದು ವಾರಣಾಸಿಗೆ ತೆರಳಲು ಸಿದ್ದತೆಗಳನ್ನು ಮಾಡಿಕೊಂಡು ಅವರೊಂದಿಗೆ ಜೊತೆಗೂಡಲು ರಾಮಾನುಜರನ್ನೂ ಆಹ್ವಾನಿಸಿದರು. ಅವರ ವಿಶ್ವಾಸ ಘಾತುಕವಾದ ಉಪಾಯವನ್ನರಿಯದ ರಾಮಾನುಜರು ಯಾವದೇ ಅನುಮಾನವಿಲ್ಲದೆ ಯಾದವ ಪ್ರಕಾಶರ ಆಹ್ವಾನವನ್ನು ಸ್ವೀಕರಿಸಿದರು. ಇನ್ನೇನು ಹೊರಡಬೇಕು ಎನ್ನುವ ಸಮಯದಲ್ಲಿ ರಾಮಾನುಜರು ತಮ್ಮ ಚಿಕ್ಕಪ್ಪನ ಮಗನಾದ ಗೋವಿಂದನನ್ನು ಅವರೊಂದಿಗೆ ಬರುವಂತೆ ಕೋರಿದರು. ಪ್ರಯಾಣದ ನಾಲ್ಕನೆಯ ದಿನ ಯಾದವರ ಕಿರಿಯ ಶಿಷ್ಯಂದಿರು ಗೋವಿಂದನನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವನನ್ನು ನಂಬಿ ರಾಮಾನುಜರನ್ನು ಕೊಲ್ಲಲು ತಾವುಗಳು ಮಾಡಿದ ಉಪಾಯವನ್ನು ಬಹಿರಂಗಪಡಿಸಿದರು.

ಯಾದವ ಪ್ರಕಾಶ ಮತ್ತು ಅವರ ಅನುಯಾಯಿಗಳ ದುಷ್ಟ ಉದ್ದೇಶವನ್ನು ಕೇಳಿ ತಲ್ಲಣಗೊಂಡ ಗೋವಿಂದನು ರಾಮಾನುಜರನ್ನು ಅರಣ್ಯದೊಳಗಿನ ಒಂದು ಏಕಾಂತ ಸ್ಥಳಕ್ಕೆ ಕೆರೆದೊಯ್ದು ಅವರಿಗಿರುವ ಅಪಾಯದ ಕುರಿತು ತಿಳಿಸಿದನು. ಕಾಲಮೀರುವ ಮುನ್ನ ಕಾಡಿನೊಳಗೆ

# ರಾಮಾನುಜಾಚಾರ್ಯರು

ಮರೆಯಾಗಲು ಗೋವಿಂದನು ರಾಮಾನುಜರನ್ನು ಪ್ರಾರ್ಥಿಸಿಕೊಂಡನು. ಗೋವಿಂದನು ಶಿಬಿರಕ್ಕೆ ಹಿಂದಿರುಗಿದ ನಂತರ ಅಲ್ಲಿದ್ದವರಿಗೆ ಹೀಗೆಂದು ಹೇಳಿದನು, ತಾನು ಮತ್ತು ರಾಮಾನುಜರು ಕಾಡಿನಲ್ಲಿ ನೇರಳೆ ಹಣ್ಣುಗಳನ್ನು ಹುಡುಕುತ್ತಿದ್ದಾಗ ಒಂದು ಹುಲಿಯು ರಾಮಾನುಜರನ್ನು ಕೊಂದು ಅವರ ಅಸಹಾಯಕ ಶರೀರವನ್ನು ಎಳೆದುಕೊಂಡು ಹೋಯಿತು. ಹೊರಗಿನ ನೋಟಕ್ಕೆ ಯಾದವರು ಮತ್ತು ಅವರ ಶಿಷ್ಯರು ದು:ಖಿತರಾದವರಂತೆ ನಟಿಸಿದರು ಆದರೆ ಒಳಗೆ ಅವರ ಹೃದಯಗಳು ಸಂತೋಷದಿಂದ ಕುಣಿದಾಡುತ್ತಿದ್ದವು. ರಾಮಾನುಜರು ಈಗ ತಮ್ಮ ಜೀವನದಿಂದ ಇನ್ನೆಂದಿಗೂ ಹಿಂದಿರುಗದ ಸ್ಥಳಕ್ಕೆ ಹೊರಟು ಹೋದರು ಎಂದು ಯಾದವಪ್ರಕಾಶರು ಮತ್ತು ಅವರ ಅನುಯಾಯಿಗಳು ಯೋಚಿಸಿದರು.

ತಮ್ಮ ಮನೆಯನ್ನು ಹುಡುಕಲು ಪ್ರಯತ್ನಿಸುತ್ತ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದಾಗ ರಾಮಾನುಜರು ಒಂದು ಬಾವಿಯ ಹತ್ತಿರ ಬಂದರು. ಅಲ್ಲಿ ಅವರು ಒಬ್ಬ ಪುರುಷ ಮತ್ತು ಮಹಿಳೆ ಹಳ್ಳಿಗೆ ನೀರು ತೆಗೆದುಕೊಂಡು ಹೋಗಲು ಬಾವಿಯಿಂದ ನೀರು ಸೇದುವಲ್ಲಿ ನಿರತರಾಗಿರುವುದನ್ನು ಕಂಡರು. ಆ ದಂಪತಿಗಳು ರಾಮಾನುಜರ ಬಾಯಾರಿಕೆಯನ್ನು ತಣಿಸಲು ಒಂದು ಲೋಟ ನೀರನ್ನು ಅರ್ಪಿಸಿದರು. ನೀರನ್ನು ಕುಡಿದ ನಂತರ ರಾಮಾನುಜರು ವಿಶ್ರಮಿಸುವಸಲುವಾಗಿ ಮಲಗಿ ಸ್ವಪ್ನಭರಿತ ನಿದ್ರೆಗೆ ಇಳಿದರು. ಕನಸಿನಲ್ಲಿ ಅವರು ಭಗವಾನ್ ಶ್ರೀ ರಾಮಚಂದ್ರ ಮತ್ತು ಅವನ ಧರ್ಮಪತ್ನಿ ಸೀತಾದೇವಿಯ ಅವತಾರಗಳನ್ನು ಕಂಡರು. ತಾವು ಕಾಡಿನಲ್ಲಿ ನಡೆಯುತ್ತಿರುವಾಗ ತಮ್ಮ ಹಳ್ಳಿಗೆ ಹೋಗುವ ದಾರಿಯನ್ನು ಅವರು ತೋರಿಸಿಕೊಟ್ಟಂತೆ ಕನಸು ಕಂಡರು. ರಾಮಾನುಜರು ಕನಸಿನಿಂದ ಎಚ್ಚರಗೊಂಡು ನೋಡಿದಾಗ ಬಾವಿಯ ಹತ್ತಿರ ಇದ್ದ ಪುರುಷ ಮತ್ತು ಮಹಿಳೆ ಹೊರಟುಹೋಗಿದ್ದರು.

# ಆಸ್ತಿಕತೆಯ ವಿಕಾಸ

ಸುತ್ತತಿರುಗಿ ನೋಡಿದಾಗ ತಾವು ಕಾಂಚಿಪಟ್ಟಣದ ಸರಹದ್ದಿನಲ್ಲಿ ಇರುವುದನ್ನು ಅರಿತರು. ತಾವು ಕಾಂಚಿಗೆ ಬಂದು ಸೇರಿದ್ದು ಹೇಗೆಂದು ಅರಿಯಲಾಗದೇ ಇದೊಂದು ಚಮತ್ಕಾರವೆಂದು ಭಾವಿಸಿದರು.

ತಮ್ಮ ಜೀವನ ಅಪಾಯದಲ್ಲಿದ್ದದ್ದನ್ನು ಯಾರಿಗೂ ಬಹಿರಂಗಪಡಿಸದೆ ಕಾಂಚಿಯಲ್ಲಿ ರಾಮಾನುಜರು ತಮ್ಮ ಸಾಮಾನ್ಯ ಜೀವನ ನಡೆಸಿದರು. ಹಲವು ತಿಂಗಳುಗಳು ಕಳೆದವು. ಕೊನೆಗೂ ಒಂದು ದಿನ ಯಾದವಪ್ರಕಾಶ ಮತ್ತು ಅವರ ಶಿಷ್ಯಂದಿರು ತೀರ್ಥಯಾತ್ರೆ ಮುಗಿಸಿಕೊಂಡು ಕಾಂಚಿಗೆ ಹಿಂದಿರುಗಿದರು. ರಾಮಾನುಜರು ಜೀವಂತವಾಗಿದ್ದು ಯಥಾರೀತಿ ತಮ್ಮ ಗುರುಕುಲವನ್ನು ನಡೆಸಿಕೊಂಡು ಹೋಗುತ್ತಿರುವುದನ್ನು ಕಂಡು ಅವರೆಲ್ಲರು ದಿಗ್ಭ್ರಮೆಗೊಂಡರು. ಅವರು ಮಾಡಿದ್ದ ಸಂಚು ಬಯಲಾಗಿದೆಯೆಂದು ಯೋಚಿಸಿ ಭಯಭೀತರಾಗಿ ರಾಮಾನುಜರನ್ನು ಕೊಲ್ಲುವ ಯೋಜನೆಯನ್ನು ಕೈಬಿಟ್ಟರು.

ರಾಮಾನುಜರ ಕೀರ್ತಿಯು ಎಲ್ಲೆಡೆಯೂ ಹರಡುತ್ತಾ ಮುಂದುವರಿಯುತ್ತಿತ್ತು. ಒಂದು ದಿನ ರಾಮಾನುಜರು ಅಧ್ಯಯನ ಮಾಡಲು ಏಕಾಂತತೆಯಲ್ಲಿ ಕುಳಿತಿರುವಾಗ ಯಮುನಾಚಾರ್ಯರೆಂಬ ಪೂಜ್ಯ ಸಂತರು ಅವರ ಬಾಗಿಲಿಗೆ ಭಿಕ್ಷೆಗೆಂದು ಬಂದರು. ಅತ್ಯಂತ ಸೌಜನ್ಯತೆಯಿಂದ ರಾಮಾನುಜರು ಸಂತರನ್ನು ಮನೆಯೊಳಗೆ ಸ್ವಾಗತಿಸಿದರು. ಯಮುನಾಚಾರ್ಯರು ವಿಷ್ಣುವಿನ ಪ್ರಖ್ಯಾತ ದೇಗುಲವಿರುವ ಶ್ರೀರಂಗಂನಿಂದ ಬಂದಿರುವರೆಂದು ರಾಮಾನುಜರಿಗೆ ತಿಳಿಯಿತು. ಯಮುನಾಚಾರ್ಯರು ಭಕ್ತಿ ವಿಜ್ಞಾನದ ಒಬ್ಬ ಶ್ರೇಷ್ಠ ಆಚಾರ್ಯರೆಂದು ಅವರೊಂದಿಗಿನ ಸಂವಾದದ ಮೂಲಕ ರಾಮಾನುಜರಿಗೆ ಬಹಳಬೇಗನೆ ಸ್ಪಷ್ಟವಾಯಿತು. ಮಿತಿಮೀರಿದ ಆನಂದದಿಂದ ಭಾವಪರವಶರಾಗಿ ರಾಮಾನುಜರು ಯಮುನಾಚಾರ್ಯರ

ಪಾದಗಳಿಗೆ ನಮಿಸುತ್ತ ತಮ್ಮನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಅವರನ್ನು ಕೋರಿದರು.

ತಕ್ಷಣವೇ ಯಮುನಚಾರ್ಯರು ರಾಮಾನುಜರನ್ನು ಮೇಲೆತ್ತಿ ಗಾಢವಾದ ಪ್ರೀತಿಯಿಂದ ಅವರನ್ನು ಆಲಿಂಗಿಸಿಕೊಂಡು ಹೀಗೆ ನುಡಿದರು "ನನ್ನ ಮಗುವೆ! ಭಗವಂತನ ಮೇಲಿರುವ ನಿನ್ನ ಭಕ್ತಿಯನ್ನು ನೋಡಿ ಈ ದಿನ ನಾನು ಧನ್ಯನಾದೆ. ನೀನು ದೀರ್ಘಕಾಲ ಪ್ರಯೋಜನಕರವಾದ ಬದುಕನ್ನು ನಡೆಸಿ ಸದಾ ಪರಮ ಪುರುಷನಾದ ನಾರಾಯಣನ ಸೇವೆಯಲ್ಲಿ ನಿರತನಾಗಿರು". ರಾಮಾನುಜರು ಶುಭಸೂಚನೆಯನ್ನು ಆಹ್ವಾನಿಸಲು ತಮ್ಮ ಗುರುಗಳ ಸುತ್ತ ಪ್ರದಕ್ಷಣೆ ಮಾಡಿದರು ಮತ್ತು ಯಮುನಾಚಾರ್ಯರು ಶ್ರೀರಂಗಂಗೆ ತೆರಳಿದರು.

ಈಗ ರಾಮಾನುಜರು ಭಕ್ತಿಮಾರ್ಗದ ತತ್ತ್ವವನ್ನು ಹಿಂದೆಂದೂ ಇಲ್ಲದ ಭರವಸೆ ಮತ್ತು ದೃಢವಿಶ್ವಾಸದಿಂದ ಬೋಧಿಸಿದರು. ರಾಮಾನುಜರು ತಮ್ಮ ಬೋಧನೆಯಲ್ಲಿ ಎಷ್ಟು ಪ್ರಬಲರಾಗಿದ್ದರೆಂದರೆ ಯಾದವ ಪ್ರಕಾಶ ಮತ್ತು ಅವರ ಅನುಯಯಿಗಳು ಕೂಡಾ ರಾಮಾನುಜರಿಗೆ ಶರಣಾಗತರಾಗಿ ಅವರ ಶಿಷ್ಯತ್ವವನ್ನು ಸ್ವೀಕರಿಸಿದರು.

ಹೀಗಿರುವಾಗ ಒಂದು ದಿನ ಶ್ರೀರಂಗಂನಿಂದ ಬಂದ ಒಬ್ಬ ದೂತನು ತಮ್ಮ ಗುರುಗಳು ಅಸ್ವಸ್ಥರಾಗಿರುವರು ಮತ್ತು ಸಾವಿನ ಅಂಚಿನಲ್ಲಿರುವರೆಂಬ ಸಂದೇಶವನ್ನು ರಾಮಾನುಜರಿಗೆ ತಿಳಿಸಿದನು. ರಾಮಾನುಜರು ಕೂಡಲೇ ಶ್ರೀರಂಗಂಗೆ ಹೊರಟರಾದರೂ ಸಮಯಕ್ಕೆ ಸರಿಯಾಗಿ ಶ್ರೀರಂಗಂಗೆ ಸೇರಲು ಸಾಧ್ಯವಾಗಲಿಲ್ಲ. ರಾಮಾನುಜರು ಬರುವದಕ್ಕೆ ಸ್ವಲ್ಪ ಮುನ್ನ ಯಮುನಾಚಾರ್ಯರು ತಮ್ಮ ಇಹದೇಹವನ್ನು ತ್ಯಜಿಸಿ ವೈಕುಂಠವನ್ನು ಪ್ರವೇಶಿಸಿದ್ದರು.

# ಆಸ್ತಿಕತೆಯ ವಿಕಾಸ

ಕಾವೇರಿ ನದಿಯನ್ನು ದಾಟುತ್ತ ರಾಮಾನುಜರು ದ್ವೀಪದ ಮೇಲೆ ನೆಲೆಸಿರುವ ಶ್ರೀರಂಗಂನ ದೇವಸ್ಥಾನಕ್ಕೆ ತಲುಪಿ ನೇರವಾಗಿ ತಮ್ಮ ಗುರುಗಳು ಇದ್ದ ಸ್ಥಳಕ್ಕೆ ಧಾವಿಸಿದರು. ಶಿಷ್ಯರ ಗುಂಪಿನಿಂದ ಸುತ್ತುವರಿದಿದ್ದ ಯಮುನಾಚಾರ್ಯರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಕೈಗಳನ್ನು ಬಗಲಲ್ಲಿ ಚಾಚಿಕೊಂಡು ಅಪರಿಮಿತ ಸೌಂದರ್ಯದ ಕಲ್ಪನೆಯಲ್ಲಿ ಮುಳುಗಿರುವವರೇನೋ ಎಂಬಂತೆ ಮುಖದತುಂಬ ಕಾಂತಿಯನ್ನು ಹೊತ್ತು ಮಲಗಿದ್ದರು.

ರಾಮಾನುಜರು ಕೊಠಡಿಯನ್ನು ಪ್ರವೇಶಿಸಿ ತಮ್ಮ ಗುರುಗಳ ಬಳಿ ಕೂರಲು ಬರುತ್ತಿದ್ದಂತೆ ಎಲ್ಲರ ಗಮನವು ಅವರ ಕಡೆಗೆ ತಿರುಗಿತು. ರಾಮಾನುಜರ ಕಣ್ಣುಗಳು ಪ್ರೀತಿಯ ಕಣ್ಣೀರಿನಿಂದ ತುಂಬಿಕೊಂಡವು ಮತ್ತು ಹೃದಯಾಂತರಾಳದಲ್ಲಿ ತಮ್ಮ ಗುರುಗಳ ಅಗಲಿಕೆಯನ್ನು ತೀವ್ರವಾಗಿ ಅನುಭವಿಸುತ್ತ ಅಳ ತೊಡಗಿದರು. ಯಮುನಾಚಾರ್ಯರ ಎಡಗೈಯ ಮೂರು ಬೆರಳುಗಳು ಮುಂದಾಗಿದ್ದು ಅವರ ಹೆಬ್ಬೆಟ್ಟು ಮತ್ತು ತೋರುಬೆರಳು ತುದಿಯಲ್ಲಿ ಕೂಡಿಕೊಂಡು ಶಾಂತಿ ಸಂಕೇತವಾದ ಯೋಗ ಮುದ್ರೆಯಲ್ಲಿ ಸ್ಥಿತವಾಗಿದ್ದಿತು. ಪಕ್ಕಕ್ಕೆ ಚಾಚಿದ ಅವರ ಬಲಗೈ ಭದ್ರಮುಷ್ಠಿಯ ಮುದ್ರೆಯಲ್ಲಿತ್ತು. ಅವರ ಶಿಷ್ಯವರ್ಗದವರೆಲ್ಲರಿಗೂ ತಮ್ಮ ಗುರುಗಳ ಬಲಗೈಯ ಸ್ಥಿತಿಯನ್ನು ನೋಡಿ ಆಶ್ಚರ್ಯವಾಗಿದ್ದರೂ ಯಾರಿಗೂ ಅದರ ಅರ್ಥ ತಿಳಿದಿರಲಿಲ್ಲ. ಎಲ್ಲರೂ ಆಶ್ಚರ್ಯದಿಂದ ನೋಡುತಿದ್ದ ಹಾಗೆ ರಾಮಾನುಜರು ತಮ್ಮ ಮೌನಮುರಿದು ಹೀಗೆಂದು ಘೋಷಿಸಿದರು; "ನಮ್ಮ ಪೂಜನೀಯ ಗುರುಗಳಾದ ಯಮುನಾಚಾರ್ಯರು ಮೂರು ಆಸೆಗಳನ್ನು ಈಡೇರಿಸಲು ಇಚ್ಛಿಸುತ್ತಾರೆ. ಮಾಯಾವಾದ ತತ್ತ್ವದಿಂದ ಭ್ರಮೆಗೊಂಡ ಜನರಿಗೆ ನಾರಾಯಣನ ಪಾದ ಕಮಲಗಳಲ್ಲಿ ಶರಣಾಗತಿಯ ಅಮೃತವನ್ನು ದಯಪಾಲಿಸಿ ರಕ್ಷಿಸುತ್ತೇನೆ."

# ರಾಮಾನುಜಾಚಾರ್ಯರು

ರಾಮಾನುಜರು ಮಾತನಾಡುತ್ತಿದ್ದಂತೆ ಯಮುನಾಚಾರ್ಯರ ಬಲಗೈಯ ಒಂದು ಬೆರಳು ಮುಂದಾಯಿತು. ನಂತರ ರಾಮಾನುಜರು ಹೇಳಿದರು "ಜಗತ್ತಿನ ಜನರ ಒಳಿತಿಗಾಗಿ ನಾನು ಪರಮ ಪುರುಷನೇ ಅಂತಿಮ ಸತ್ಯವೆಂದು ಸಂಸ್ಥಾಪಿಸುವ ವ್ಯಾಖ್ಯಾನವನ್ನು ವೇದಾಂತ ಸೂತ್ರದ ಮೇಲೆ ಸಿದ್ಧಪಡಿಸುತ್ತೇನೆ." ಆಗ ಯಮುನಾಚಾರ್ಯರ ಬಲಗೈಯ ಎರಡನೆಯ ಬೆರಳು ತೆರೆದುಕೊಂಡಿತು, ಮತ್ತೆ ರಾಮಾನುಜರು ಮಾತನ್ನು ಮುಂದುವರೆಸಿದರು. "ಪ್ರಾಚೀನ ಕಾಲದಲ್ಲಿ ಜೀವಿಗಳು ಮತ್ತು ಪರಮ ಪುರುಷನಾದ ಈಶ್ವರನ ನಡುವೆ ಸಂಬಂಧ ಸ್ಥಾಪಿಸಿದ್ದ ಪರಾಶರ ಮುನಿಗಳನ್ನು ಗೌರವಿಸಿವುದಕ್ಕಾಗಿ ಬಹಳ ವಿದ್ಯಾವಂತ ಮತ್ತು ಭಕ್ತಿಯುಳ್ಳನಾದ ನನ್ನ ಶಿಷ್ಯರಲ್ಲಿ ಒಬ್ಬನಿಗೆ ಅವರ ಹೆಸರನ್ನು ಕೊಡುತ್ತೇನೆ".

ನಂತರ ರಾಮಾನುಜರು ಮೌನರಾದರು ಮತ್ತು ಯಮುನರ ಬಲಗೈಯ ಮೂರನೆಯ ಬೆರಳು ತೆರೆಯಿತು. ಅಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಈ ಚಮತ್ಕಾರವನ್ನು ನೋಡಿ ಆಶ್ಚರ್ಯವಾಯಿತು ಮತ್ತು ಅಂದಿನಿಂದ ಅವರೆಲ್ಲರು ರಾಮಾನುಜರನ್ನು ತಮ್ಮ ನಾಯಕನಾಗಿ ಮತ್ತು ಮಾರ್ಗದರ್ಶಕನಾಗಿ ಸ್ವೀಕರಿಸಿದರು. ರಾಮಾನುಜರು ತಮ್ಮ ಉಳಿದ ಜೀವಿತವನ್ನು ಶ್ರೀರಂಗಂನಲ್ಲೇ ಮುಂದುವರೆಸಿದರು ಮತ್ತು ಅಲ್ಪ ಕಾಲದಲ್ಲೇ ತಮ್ಮ ಗುರುಗಳ ಮೂರು ಇಚ್ಛೆಗಳನ್ನು ಈಡೇರಿಸಿದರು.

ಬಹಳ ವರುಷಗಳ ಕಾಲ ಅವರು ಯಶಸ್ವಿ ಗೃಹಸ್ಥರಾಗಿ ಜೀವನ ನಡೆಸಿದ್ದರೂ ರಾಮಾನುಜರು ವೈರಾಗ್ಯ ಮಾರ್ಗವನ್ನು ಸ್ವೀಕರಿಸುವುದು ವಿಧಿನಿಯೋಜಿತವಾಗಿತ್ತು. ಕೊನೆಗೆ ರಾಮಾನುಜರು ಭಗವಂತನ ಸೇವೆಯಲ್ಲಿ ಸತತವಾಗಿ ನಿರತರಾಗಿರುವಂತೆ ಪ್ರಾರ್ಥಿಸುತ್ತ ದೇವಸ್ಥಾನದಲ್ಲಿ ಶ್ರೀ ಮೂರ್ತಿಯ ಸಮಕ್ಷಮದಲ್ಲಿ ಸನ್ಯಾಸವನ್ನು

# ಆಸ್ತಿಕತೆಯ ವಿಕಾಸ

ಸ್ವೀಕರಿಸಿದರು. ಅಂದಿನಿಂದ ರಾಮಾನುಜರು ಯಾವಾಗಲೂ ನಾರಾಯಣನ ಸಂಕೇತವಾದ ತಿಲಕವನ್ನು ಹಣೆಯ ಮೇಲೆ ಧರಿಸಿ, ಕಾವಿ ಬಟ್ಟೆಯನ್ನುಟ್ಟು, ಶರೀರ, ಮನಸ್ಸು ಮತ್ತು ಮಾತುಗಳ ಮೂಲಕ ಭಗವಂತನ ಸೇವೆಯನ್ನು ಸೂಚಿಸುವ ತ್ರಿದಂಡವನ್ನು ಹೊತ್ತು ಸಂಚರಿಸುತ್ತಿದ್ದರು.

ರಾಮಾನುಜರು ಎಷ್ಟು ಪ್ರಬಲರಾಗಿದ್ದರೆಂದರೆ ಯಾವುದೇ ರಾಜ್ಯದಲ್ಲಾಗಲಿ ಅದ್ವೈತ ಸಿದ್ಧಾಂತದ ತತ್ತ್ವವಾದಿಗಳಿಗೆ ತಮ್ಮ ಸ್ಥಾನವನ್ನು ಕಾಪಾಡಿಕೊಳ್ಳುವುದು ಬಹಳ ಕಷ್ಟವಾಯಿತು. ರಾಮಾನುಜರು ಭಕ್ತಿಮಾರ್ಗದ ತತ್ತ್ವಗಳನ್ನು ಎಷ್ಟು ಭದ್ರವಾಗಿ ಸ್ಥಾಪಿಸಿದರೆಂದರೆ ಯಾರಿಂದಲೂ ಅವರನ್ನು ವಿರೋಧಿಸಲಾಗಲಿಲ್ಲ. ಬಹಳ ದೊಡ್ಡ ದೊಡ್ಡ ಪಂಡಿತರು ಅವರ ಬೋಧನೆಗಳನ್ನು ಕೇಳಲು ಬಂದು ಅವರ ಶಿಷ್ಯತ್ವವನ್ನು ಸ್ವೀಕರಿಸಿದರು.

ಬೆಳೆಯುತ್ತಿರುವ ಭಕ್ತಿಯ ಜನಪ್ರಿಯತೆಯಿಂದ ತಮಗೆ ಅನ್ಯಾಯವಾಗುತ್ತಿದೆಯೆಂದು ಆರೋಪಿಸಿ ಮಾಯಾವಾದಿಗಳ ಒಂದು ಗುಂಪಿನವರು ಕಂಚಿಯಲ್ಲಿನ ಚೋಳ ರಾಜನಾದ ಕ್ರಿಮಿಕಂಠನನ್ನು ನೋಡಲು ಹೋದರು. ಸ್ವತಃ ಒಬ್ಬ ಮಾಯಾವಾದಿಯಾಗಿದ್ದ ರಾಜನಿಗೆ ನಮ್ರತೆಯಿಂದ ನಮಸ್ಕರಿಸಿ ರಾಮಾನುಜರನ್ನು ತಡೆಯಲು ಏನಾದರು ಮಾಡಬೇಕೆಂದು ಕೋರಿದರು. ಸ್ವಲ್ಪ ಚರ್ಚೆಯ ನಂತರ ರಾಜನು ರಾಮಾನುಜರನ್ನು ಒಂದು ತತ್ತ್ವಶಾಸ್ತ್ರದ ಚರ್ಚೆಯಲ್ಲಿ ಭಾಗವಹಿಸಲು ತನ್ನ ಆಸ್ಥಾನಕ್ಕೆ ಆಹ್ವಾನಿಸುವಂತೆ ನಿರ್ಣಯಿಸಲಾಯಿತು. ಹೀಗೆ ರಾಜನ ದೂತರನ್ನು ಶ್ರೀರಂಗಂಗೆ ಹೋಗಿ ರಾಮಾನುಜರನ್ನು ಕರೆತರಲು ಕಳುಹಿಸಲಾಯಿತು. ಅಗತ್ಯಬಿದ್ದರೆ ಬಲವಂತವಾಗಿ ರಾಮಾನುಜರನ್ನು ಮಾರ್ಪಡಿಸಬೇಕು ಎಂಬುದು ರಾಜನ ಮನದ ಇಂಗಿತವಾಗಿತ್ತು.

# ರಾಮಾನುಜಾಚಾರ್ಯರು

ಒಂದು ಬಾರಿ ರಾಮಾನುಜರನ್ನು ಪರಿವರ್ತಿಸಿದರೆ ಆಗ ತನ್ನ ರಾಜ್ಯದಲ್ಲಿ ಎಲ್ಲರೂ ಶಂಕರರ ಸಿದ್ಧಾಂತಕ್ಕೆ ಮರಳುವರೆಂದು ರಾಜನು ಅಂದುಕೊಂಡಿದ್ದನು.

ಶ್ರೀರಂಗಂನಲ್ಲಿ ರಾಜನ ಸಂದೇಶವನ್ನು ಸ್ವೀಕರಿಸಿದ ರಾಮಾನುಜರು ಕಾಂಚಿಗೆ ಹೋಗಲು ಸಿದ್ಧರಾದರು. ಕುರೇಶ ಎಂಬ ರಾಮಾನುಜರ ಒಬ್ಬ ಬುದ್ಧಿವಂತ ಶಿಷ್ಯನು ರಾಜನ ಉದ್ದೇಶಗಳನ್ನು ನಂಬಲಾಗದೇ ತನ್ನ ಗುರುಗಳ ಸ್ಥಾನದಲ್ಲಿ ತಾನು ಹೋಗುವೆನೆಂದು ರಾಮಾನುಜರಲ್ಲಿ ಬೇಡಿಕೊಂಡನು. ಕುರೇಶನ ಒತ್ತಾಯಕ್ಕೆ ರಾಮಾನುಜರು ಒಪ್ಪಲೇಬೇಕಾಯಿತು. ನಂತರ ಕುರೇಶನು ತನ್ನ ಗುರುಗಳ ಕಾವಿ ಬಟ್ಟೆಯನ್ನುಟ್ಟು ಕೈಯಲ್ಲಿ ದಂಡವನ್ನು ಹಿಡಿದು ದೂತರ ಮುಂದೆ ಬಂದು ನಿಂತನು. ಕುರೇಶನನ್ನೇ ರಾಮಾನುಜರೆಂದು ತಿಳಿದು ರಾಜನ ದೂತರು ಕಾಂಚಿಯತ್ತ ಪ್ರಯಾಣಿಸಲು ಪ್ರಾರಂಭಿಸಿದರು. ಈ ಮಧ್ಯೆ ರಾಮಾನುಜರು ಬಿಳಿ ಬಟ್ಟೆಯನ್ನುಟ್ಟುಕೊಂಡು ಶ್ರೀರಂಗಂನಲ್ಲೇ ಉಳಿದುಕೊಂಡರು.

ಕುರೇಶನು ಅರಮನೆ ಪ್ರವೇಶಿಸುತ್ತಲೆ ಅವನನ್ನು ರಾಮಾನುಜರೆಂದು ಭಾವಿಸಿ ರಾಜಕ್ರಿಮಿಕಂಠನು ಗೌರವದಿಂದ ಸ್ವಾಗತಿಸಿದನು. ಆದರೆ ನಂತರ ಕುರೇಶನು ರಾಜನ ಬೆದರಿಕೆಯ ನಡವಳಿಕೆಯನ್ನು ಅಂಗೀಕರಿಸದಿದ್ದಾಗ ಕ್ರಿಮಿಕಂಠನು ಬುದ್ಧಿಗೆಟ್ಟು ಕ್ರೋಧದಿಂದ ಕುರೇಶನನ್ನು ಬಂಧಿಸಿ ಅವನ ಕಣ್ಣುಗಳನ್ನು ಸುಡುವಂತೆ ತನ್ನ ಸೈನಿಕರಿಗೆ ಆದೇಶ ನೀಡಿದನು.

ರಾಜನ ಸೈನಿಕರು ಕುರೇಶನನ್ನು ಸೆರೆಮನೆಗೆ ಕರೆದೊಯ್ದು ಕುರುಡನನ್ನಾಗಿಸಿ ಕಾಡಿನಲ್ಲಿ ಬಿಟ್ಟರು. ಅಲ್ಲಿಯವರೆಗೂ ನಡೆದ ಭಯಾನಕ ಅನುಭವದಲ್ಲಿ ಕುರೇಶನು ಒಂದು ಬಾರಿಯೂ ಪ್ರತಿಭಟಿಸಲಿಲ್ಲ. ತನ್ನ

# ಆಸ್ತಿಕತೆಯ ವಿಕಾಸ

ಗುರುಗಳು ಕ್ಷೇಮವಾಗಿದ್ದಾರೆ ಎಂದು ತಿಳಿದು ಅವನು ತನ್ನೊಳಗೇ ಮನಃಸ್ಥೈರ್ಯವನ್ನು ತಂದುಕೊಂಡನು.

ರಾಜನ ಕೃತ್ಯದಿಂದ ದಿಗ್ಭ್ರಾಂತಗೊಂಡ ಕಾಂಚಿಯ ಕೆಲವುಜನರ ಸಹಾಯದಿಂದ ಕುರೇಶನು ಶ್ರಿರಂಗಂಗೆ ತೆರಳಿ ತನ್ನ ಗುರುಗಳನ್ನು ಪುನಃ ಸೇರಲು ಸಾಧ್ಯವಾಯಿತು. ಕುರೇಶನಿಗೆ ಎಸಗಿದ ಆ ಹೀನ ಅಪರಾಧದ ಕೆಲವೇ ದಿನಗಳಲ್ಲಿ ರಾಜ ಕ್ರಿಮಿಕಂಠನು ವಾಸಿಮಾಡಲಾಗದ ರೋಗದಿಂದ ಪೀಡಿತನಾಗಿ ನಿರ್ಗತಿಕ ಸಾವನ್ನಪ್ಪಿದನು.

ಶ್ರೀರಂಗಂನಲ್ಲಿ ರಾಮಾನುಜರು ಕುರೇಶನನ್ನು ನಾರಾಯಣನ ಮೂರ್ತಿಯೆದುರು ಕರೆದೊಯ್ದು ಭಾವೋದ್ದೀಪಿತ ಪ್ರಾರ್ಥನೆಗಳಿಂದ ಕುರೇಶನ ಕಳೆದುಹೋದ ದೃಷ್ಟಿಯು ಮರಳುವಂತಾಗಲಿ ಎಂದು ಕೇಳಿಕೊಂಡರು. "ಓ ಜಗದೊಡೆಯನೇ ! ನೀನು ನಿನ್ನ ಭಕ್ತರ ರಕ್ಷಕನು ಮತ್ತು ಅವರ ಒಳಿತನ್ನು ಬಯಸುವವನು. ದಯಮಾಡಿ ಕರುಣೆತೋರಿಸಿ ಯಾವ ಪ್ರತಿಭಟನೆಯನ್ನೂ ತೋರದೆ ಪರಮ ತ್ಯಾಗ ಮಾಡಿದ ಕುರೇಶನ ಕಣ್ಣುಗಳು ಮರಳುವಂತೆ ಮಾಡು." ತಕ್ಷಣವೇ ಕುರೇಶನು ತನ್ನ ಹುಬ್ಬಿನ ಮುಂದೆ ಮೃದುವಾದ ಮೆಲುಗಾಳಿಯು ಬೀಸಿದ ಅನುಭವವಾಗಿ ತನ್ನ ದೃಷ್ಟಿಯನ್ನು ಪುನಃ ಸಂಪಾದಿಸಿದನು.

ರಾಮಾನುಜರು ತಮ್ಮ ೧೨೦ ವರುಷ ವಯಸ್ಸಿನವರೆಗೂ ನಾರಾಯಣನ ಶ್ರೀ ಮೂರ್ತಿಯ ಸೇವೆ ಮಾಡುತ್ತ ಮತ್ತು ತಮ್ಮ ಬಳಿ ಬರುವವರಿಗೆಲ್ಲ ಜ್ಞಾನೋಪದೇಶ ಮಾಡುತ್ತ ಶ್ರಿರಂಗಂನಲ್ಲೇ ಜೀವನ ಮುಂದುವರೆಸಿದರು. ಒಂದು ದಿನ ನಾರಾಯಣನ ಪೂಜೆ ಮಾಡುವಾಗ ಹೀಗೆ ಪ್ರಾರ್ಥಿಸಿದರು, "ಪ್ರೀತಿಯ ದೇವನೆ, ವೇದಗಳ ಸಾರವನ್ನು ಸಂರಕ್ಷಿಸುವಲ್ಲಿ ಪತಿತರ ಉದ್ಧಾರ ಮಾಡುವುದರಲ್ಲಿ

ಮತ್ತು ನಿನ್ನ ಪಾದಾಶ್ರಯವೆ ಜೀವನದ ಅಂತಿಮಗುರಿ ಎಂಬ ಸತ್ಯವನ್ನು ಸಂಸ್ಥಾಪಿಸುವುದಕ್ಕೆ ಏನೇನು ಮಾಡಬೇಕೊ ಅವೆಲ್ಲವನ್ನು ಮಾಡಿದ್ದೇನೆ. ಈ ಪ್ರಪಂಚದಲ್ಲಿ ಅನೇಕ ವರುಷಗಳನ್ನು ಕಳೆದು ನನ್ನ ಶರೀರಕ್ಕೆ ಆಯಾಸವಾಗಿದೆ. ದಯಮಾಡಿ ಈ ಐಹಿಕ ಜಗತ್ತಿನಿಂದ ನಿರ್ಗಮಿಸಿ ನಿನ್ನ ಪರಮ ಧಾಮಕ್ಕೆ ಪ್ರವೇಶಿಸುವುದಕ್ಕೆ ನನಗೆ ಅನುಮತಿಯನ್ನು ನೀಡು."

ಈ ಪ್ರಾರ್ಥನೆಯೊಂದಿಗೆ ರಾಮಾನುಜರು ತಮ್ಮ ಶಿಷ್ಯರ ಬಳಗಕ್ಕೆ ಹಿಂದಿರುಗಿ ಈ ಲೋಕವನ್ನು ಬಿಟ್ಟು ಹೋಗುವ ತಮ್ಮ ಇಚ್ಛೆಯನ್ನು ಪ್ರಕಟಿಸಿದರು. ದು:ಖದ ಸಾಗರದೊಳಕ್ಕೆ ಎಸೆಯಲ್ಪಟ್ಟವರಂತೆ ರಾಮಾನುಜರ ಶಿಷ್ಯಂದಿರೆಲ್ಲ ತಮ್ಮ ಗುರುಗಳ ಪಾದವನ್ನು ತಬ್ಬಿಕೊಂಡು ತಮ್ಮ ಜೊತೆಯಲ್ಲೆ ಇರುವಂತೆ ಬೇಡಿಕೊಂಡರು. "ಪರಮ ಪಾವನಗೊಳಿಸುವ, ಒಳ್ಳೆಯದೆಲ್ಲದರ ನಿವಾಸವಾಗಿರುವ, ಎಲ್ಲ ಸಂಕಷ್ಟಗಳನ್ನು ನಾಶ ಮಾಡುವ ಮತ್ತು ಅನಂತ ಸುಖದ ಕಾರಂಜಿಯಾಗಿರುವ ನಿಮ್ಮ ದಿವ್ಯ ರೂಪದ ಅಗಲಿಕೆಯು ಊಹಿಸಲಾಧ್ಯವಾದುದು. ನಿಮ್ಮ ಮಕ್ಕಳಂತಿರುವ ನಮ್ಮಲ್ಲಿ ಕರುಣೆತೊರಿ ದಯವಿಟ್ಟು ನಮ್ಮೊಂದಿಗೆ ಇನ್ನೂ ದೀರ್ಘ ಕಾಲ ಉಳಿಯಿರಿ."

ಇದಾಗಿ ಇನ್ನೂ ಮೂರು ದಿನಗಳಕಾಲ ರಾಮಾನುಜರು ಈ ಭೂಮಿಯ ಮೇಲೆ ಉಳಿದರು. ನೋವಿನಿಂದ ತುಂಬಿದ ತಮ್ಮ ಶಿಷ್ಯರ ಹೃದಯಗಳನ್ನು ಸಂತೈಸಲು ರಾಮಾನುಜರು ತಮಗೆ ಅತ್ಯಂತ ಪ್ರಿಯರಾಗಿದ್ದ ಮತ್ತು ಆತ್ಮೀಯರಾಗಿದ್ದವರಿಗೆ ತಮ್ಮ ಕೊನೆಯ ಉಪದೇಶಗಳನ್ನು ಬೋಧಿಸಿದರು. "ಹೇಗೆ ನೀವು ನಿಮ್ಮ ಸ್ವಂತ ಆಧ್ಯಾತ್ಮಿಕ ಬೋಧಕರ ಸೇವೆ ಮಾಡುತ್ತೀರೋ ಹಾಗೆಯೇ ಭಗವಂತನಲ್ಲಿ ಭಕ್ತಿಯುಳ್ಳವರ ಸೇವೆ ಮಾಡುತ್ತ ಸದಾ ಅವರ ಸಾಂಗತ್ಯದಲ್ಲಿಯೇ ಉಳಿಯಿರಿ. ಶ್ರೇಷ್ಠ ಸಾಧು ಸಂತರ ವಾಕ್ಯಗಳಲ್ಲಿ ಮತ್ತು ವೇದಗಳ ಉಪದೇಶಗಳಲ್ಲಿ ಶ್ರದ್ಧೆಯಿಡಿ.

# ಆಸ್ತಿಕತೆಯ ವಿಕಾಸ

ನಿಮ್ಮ ಇಂದ್ರಿಯಗಳಿಗೆ ಎಂದೂ ಗುಲಾಮರಾಗಬೇಡಿ; ಯಾವಾಗಲೂ ಆತ್ಮಸಾಕ್ಷಾತ್ಕಾರದ ಮೂರು ದೊಡ್ಡ ಶತ್ರುಗಳಾದ ಕಾಮ, ಕ್ರೋಧ ಮತ್ತು ಲೋಭ ಇವುಗಳನ್ನು ಜಯಿಸಲು ವಿಶೇಷ ಪ್ರಯತ್ನ ಮಾಡಿರಿ. ನಾರಾಯಣನನ್ನು ಆರಾಧಿಸಿರಿ ಮತ್ತು ಭಗವಂತನ ದಿವ್ಯ ನಾಮಗಳ ಸ್ಮರಣೆಯನ್ನು ನಿಮ್ಮ ಏಕಮಾತ್ರ ಆಶ್ರಯ ಎಂದುಕೊಂಡು ಆನಂದವನ್ನು ಆಸ್ವಾದಿಸಿರಿ. ಶ್ರದ್ಧೆಯಿಂದ ಭಗವತ್ಭಕ್ತರ ಸೇವೆ ಮಾಡಿ; ಪರಮ ಭಕ್ತರನ್ನು ಸೇವಿಸುವ ಉನ್ನತ ಸೇವೆ ಮಾಡಿದಾಗ ಒಬ್ಬನು ಬಹಳ ಬೇಗ ಭಗವತ್ಕೃಪೆಯನ್ನು ಪಡೆಯುವನು. ಇವೆಲ್ಲವನ್ನು ಸ್ಮರಿಸುತ್ತ ನಿಮ್ಮ ಮುಂದಿನ ಜೀವನದ ಪ್ರಾಪ್ತಿಗಾಗಿ ಈ ಪ್ರಪಂಚದಲ್ಲಿ ಸುಖವಾಗಿ ಬದುಕಿರಿ.”

ಈ ಕೊನೆಯ ಮಾತುಗಳನ್ನಾಡುತ್ತ ರಾಮಾನುಜರು ತಮ್ಮ ಶಿರವನ್ನು ಗೋವಿಂದನ ತೊಡೆಯ ಮೇಲಿಟ್ಟರು ಮತ್ತು ಮನಸ್ಸನ್ನು ಸಮಾಧಿಸ್ಥಿತಿಯಲ್ಲಿ ಸ್ಥಿರಪಡಿಸಿ, ತಮ್ಮ ಭೌತಿಕ ಶರೀರವನ್ನು ತ್ಯಜಿಸಿ ವೈಕುಂಠ ಧಾಮವನ್ನು ಪ್ರವೇಶಿಸಿದರು.

ರಾಮಾನುಜರು ಖಂಡಿತವಾಗಿಯೂ ಒಬ್ಬ ದೊಡ್ಡ ವೇದಾಂತಿ. ಅವರ ಜೀವನ ಮತ್ತು ಬೋಧನೆಗಳು ಭಾರತದಲ್ಲಿ ಆಸ್ತಿಕತೆಯ ವಿಚಾರದ ಏಳಿಗೆಯ ಮೇಲೆ ಶಾಶ್ವತವಾದ ಪರಿಣಾಮವನ್ನು ಬೀರಿದವು. ಭಗವಂತನು, ಕಲ್ಪನಾತೀತ ವಿಶಿಷ್ಟ ಗುಣಲಕ್ಷಣಗಳನ್ನುಳ್ಳ ನಿರಂಕುಶ ಪ್ರಭುವು ಎಂದು ರಾಮಾನುಜರು ನೀಡಿದ ಭಗವಂತನ ಪರಿಚಯ ಮತ್ತು ಭಗವದ್ಭಕ್ತಿಯೆಡೆಗೆ ಬೆಳಕನ್ನು ಚೆಲ್ಲಿ ಅರಂಭಿಸಿದ ನಾರಾಯಣನ ಭಕ್ತಿಪೂರ್ವಕ ಸೇವೆಯ ಪ್ರಕ್ರಿಯೆಯು ಮುಂಬರುವ ದಿನಗಳಲ್ಲಿ ಭಗವಂತನೊಡನೆ ಮತ್ತು ಅವನ ನಿತ್ಯ ಸೇವಕರೊಡನೆ ಜೀವಾತ್ಮನಿಗಿರುವ ಪ್ರೇಮಪೂರ್ವಕ ನಿತ್ಯ ಸಂಬಂಧದ ಅತ್ಯುನ್ನತ

# ರಾಮಾನುಜಾಚಾರ್ಯರು

ಸಾಧ್ಯತೆಯನ್ನು ಸಂಪೂರ್ಣವಾಗಿ ಪ್ರಚುರಪಡಿಸಲಿರುವ ಆಸ್ತಿಕ ಧರ್ಮಪ್ರವರ್ತಕರಿಗೆ ಬಾಗಿಲು ತೆರೆಯಿತು.

"ದೈವತ್ವವು ನಿರಾಕಾರವಾದುದೆಂಬ ಕಲ್ಪನೆಯ ಗಾಢ ಅಂಧಕಾರ ಕವಿದಿದ್ದ ಸಮಯದಲ್ಲಿ ಜ್ಞಾನದ ದೀವಟಿಗೆಯನ್ನು ಹಿಡಿದು ಭಕ್ತಿಮಾರ್ಗಕ್ಕೆ ಬೆಳಕನ್ನು ಚೆಲ್ಲಿ ಭಗವಂತನೆಡೆಗೆ ದಾರಿತೋರಿದ ನಮ್ಮ ಪೂಜ್ಯ ಬೋಧಕರಾದ ರಾಮಾನುಜರ ಪಾದದಡಿಯಲ್ಲಿ ನಾನು ಆಶ್ರಯ ಪಡೆಯುವೆನು".



# ಭಾಗ ನಾಲ್ಕು
# ಮಧ್ವಾಚಾರ್ಯರು

## ಭಕ್ತಿ – ಏಕೈಕ ಸಾಧನ ಮತ್ತು ಅಂತಿಮ ಗುರಿ

ಶ್ರೀಪಾದ ಮಧ್ವಾಚಾರ್ಯರು ೧೨೩೮ರಲ್ಲಿ ಕರ್ಣಾಟಕದ ಪಶ್ಚಿಮ ಕರಾವಳಿಯ ಉಡುಪಿನಗರಕ್ಕೆ ಸಮೀಪದಲ್ಲಿರುವ ಪಾಜಕ ಕ್ಷೇತ್ರವೆಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದರು. ಅವರ ಸಿದ್ಧಾಂತ ಮತ್ತು ಬರವಣಿಗೆಗಳು ಅವರನ್ನು ಭಾರತದ ಪ್ರಮುಖ ಆಧ್ಯಾತ್ಮಿಕ ಬೋಧಕರಲ್ಲೊಬ್ಬರನ್ನಾಗಿ ಗುರುತಿಸುವಂತೆ ಮಾಡಿವೆ. ಅವರ ಬೋಧನೆಗಳು ಸಂಪೂರ್ಣವಾಗಿ ಆಸ್ತಿಕತೆಯದ್ದಾಗಿದ್ದವು. ವೇದಗಳ ಅಂತರಾರ್ಥವನ್ನು ಅರಿಯಲು ವಿಫಲರಾಗಿ ಕೇವಲ ಭೌತಿಕ ಸುಖದ ಫಲಗಳಿಗೋಸ್ಕರ ವೈದಿಕ ಧರ್ಮಾಚರಣೆಗಳನ್ನು ಅನುಸರಿಸುತ್ತಿದ್ದ ಭಾರತದ ಧಾರ್ಮಿಕ ಆರಾಧಕರ ಅಜ್ಞಾನಕವಿದ ಮನಸ್ಸುಗಳನ್ನು ಬುದ್ಧನು ತನ್ನ ತತ್ತ್ವಶಾಸ್ತ್ರದ ಪ್ರಯೋಗದಿಂದ ಮುಕ್ತಗೊಳಿಸಿ, ವೈದಿಕಪ್ರಮಾಣಗಳನ್ನು ನಿರಾಕರಿಸಿ, ಅಹಿಂಸೆಗೆ ಪ್ರಾಧಾನ್ಯತೆಯನ್ನು ಕೊಟ್ಟು ನಿರ್ವಾಣತತ್ತ್ವವನ್ನು ಸಂಸ್ಥಾಪಿಸಿದ ಅನೇಕ ವರುಷಗಳ ನಂತರ, ಶಂಕರಾಚಾರ್ಯರು ವೇದಗಳನ್ನು ಆಧ್ಯಾತ್ಮಿಕ ಜ್ಞಾನದ ಲಿಖಿತ ಪ್ರಮಾಣಗಳನ್ನಾಗಿ ಪುನಃಸ್ಥಾಪಿಸಿದರು. ಬುದ್ಧನು ತನ್ನ ವ್ಯಾಖ್ಯಾನಗಳಲ್ಲಿ ದೇವರ ಆಸ್ತಿತ್ವಕ್ಕೆ ಒತ್ತುಕೊಡದಿರಲು ತೀರ್ಮಾನಿಸಿದರೆ, ಶಂಕರರು ಆತ್ಮಸಾಕ್ಷಾತ್ಕಾರಜ್ಞಾನವನ್ನು ಶ್ಲಾಘಿಸುತ್ತಾ, ದೇವರ ಕುರಿತು ಒಂದು ಅಸ್ಪಷ್ಟ ಕಲ್ಪನೆಯ ಬಗ್ಗೆ ಸ್ವತಃ ಮಾತನಾಡಿ, ಭಕ್ತಿಯೆಡೆಗೆ ತಮ್ಮದೇ ಆದ ಆಂತರಿಕ ಒಲವನ್ನು ಬಹಿರಂಗಪಡಿಸುತ್ತ, ವೇದೋಕ್ತಿಗಳನ್ನು ಆಧಾರವಾಗಿಟ್ಟುಕೊಂಡು, ಅದ್ವೈತ ವೇದಾಂತದ ಸಿದ್ಧಾಂತವನ್ನು ಸಂಸ್ಥಾಪಿಸಿದರು. ಮುಂದೆ ರಾಮಾನುಜರು ಭಗವಂತನ ಸಾಕಾರ

ಅಂಶವನ್ನು ಬಹಿರಂಗಪಡಿಸುತ್ತ, ಪರಬ್ರಹ್ಮನ ಬಗ್ಗೆ ಸಾಂಪ್ರದಾಯಿಕವಾಗಿ ರೂಢಿಯಲ್ಲಿದ್ದ ತಪ್ಪು ಕಲ್ಪನೆಗಳ ವಿರುದ್ಧ ನಡೆದು ಸೈದ್ಧಾಂತಿಕ ದೃಷ್ಟಿಕೋನದ ಮೂಲಕ ವೇದಗಳಲ್ಲಿ ಅಡಕವಾಗಿರುವ ಆಸ್ತಿಕತೆಯ ಜ್ಞಾನವನ್ನು ಬೆಳಕಿಗೆ ತಂದರು.

ರಾಮಾನುಜರ ನಿರ್ಗಮನದ ಒಂದು ಶತಮಾನದ ನಂತರ ಆವಿರ್ಭವಿಸಿದ ಮಧ್ವರು ರಾಮಾನುಜರ ಸಿದ್ಧಾಂತಗಳನ್ನು ಅನುಸರಿಸಿ ಅವರು ಪ್ರಚುರ ಪಡಿಸಿದ ವೈದಿಕ ಜ್ಞಾನದ ಆಸ್ತಿಕ ನಿರೂಪಣೆಗಳನ್ನು ಯಥಾವತ್ತಾಗಿ ಪುಷ್ಟೀಕರಿಸುತ್ತಾ – ಭಗವತ್ ಸಾಕ್ಷಾತ್ಕಾರಕ್ಕೆ ಭಕ್ತಿಯೇ ಸಾಧನ ಮತ್ತು ಭಕ್ತಿ ಭಗವತ್ಸಾಕ್ಷಾತ್ಕಾರದಲ್ಲಿ ಸಂಪನ್ನಗೊಳ್ಳುತ್ತದೆ ಎಂಬ ವಿಚಾರಕ್ಕೆಹೆಚ್ಚಿನ ಒತ್ತುಕೊಟ್ಟರು.

ಮಧ್ವರು ಪವಿತ್ರ ಕ್ಷೇತ್ರಗಳಿಗೆ ಭೇಟಿ ನೀಡುತ್ತ ತಮಗೆ ಸಿಕ್ಕ ಪ್ರತಿಯೊಂದು ಅವಕಾಶದಲ್ಲೂ ತಮ್ಮ ಬೋಧನೆಗಳನ್ನು ವ್ಯಾಖ್ಯಾನಿಸುತ್ತ ಭಾರತದ ಉದ್ದಗಲಕ್ಕೂ ಸಂಚರಿಸಿದರು. ಅವರೊಬ್ಬ ಪರಿಣಾಮಕಾರಿ ಬರಹಗಾರರಾಗಿದ್ದರಲ್ಲದೇ ಶ್ರೇಷ್ಠ ಸಂತರು ಕೂಡಾ ಆಗಿದ್ದರು. ಅವರು ವೇದಾಂತ ಸೂತ್ರ, ಭಗವದ್ಗೀತೆ, ಶ್ರೀಮದ್ ಭಾಗವತ ಮತ್ತು ಮಹಾಭಾರತದಂತಹ ಪವಿತ್ರ ಗ್ರಂಥಗಳ ಮೇಲೆ ಭಾಷ್ಯಗಳನ್ನು ಬರೆದರು. ಅಲ್ಲದೆ ಇವತ್ತಿಗೂ ಉಡುಪಿಯಲ್ಲಿನ ಶ್ರೀಕೃಷ್ಣ ದೇವಸ್ಥಾನದಲ್ಲಿ ನಿರಂತರವಾಗಿ ನಡೆಯುತ್ತಿರುವ ವಿಧ್ಯುಕ್ತ ಧಾರ್ಮಿಕ ಆಚರಣೆಗಳ ಕಟ್ಟುನಿಟ್ಟಾದ ಗುಣ ಮಟ್ಟವನ್ನು ಸ್ಥಾಪಿಸಿದರು.

ಮಧ್ವರ ತಂದೆ ತಾಯಿಯರು ಮೂಲತ: ಉಡುಪಿಯ ಹತ್ತಿರ ಒಂದು ಪುಟ್ಟ ಹಳ್ಳಿಯಾದ ಕಡಿಯಾಳಿಯಲ್ಲಿ ವಾಸವಾಗಿದ್ದರು. ಇಬ್ಬರು ಗಂಡು ಮಕ್ಕಳನ್ನು ಕಳೆದುಕೊಂಡ ದು:ಖದಲ್ಲಿ ಅವರು ಪಾಜಕ ಕ್ಷೇತ್ರವೆಂಬ

# ಮಧ್ವಾಚಾರ್ಯರು

ಗ್ರಾಮಕ್ಕೆ ಬಂದು ನೆಲೆಸಿದರು. ಪ್ರತಿದಿನ ಅವರಿಬ್ಬರೂ ಪಾಜಕ ಕ್ಷೇತ್ರದಿಂದ ಉಡುಪಿಗೆ ಪ್ರಯಾಣಿಸಿ ದೇವರ ಸನ್ನಿಧಿಯಲ್ಲಿ ಕುಳಿತು ಮುಂದೆ ಪ್ರಸಿದ್ಧಪುರುಷನಾಗುವ ಒಬ್ಬ ಮಗನನ್ನು ಪಡೆಯುವ ಆಶೀರ್ವಾದವನ್ನು ಬೇಡುತ್ತಿದ್ದರು. ಹನ್ನೆರಡು ವರುಷಗಳ ಕಾಲ ಅವರು ನಿರಂತರವಾಗಿ ಈ ವ್ರತವನ್ನು ನಿರ್ವಹಿಸಿದರು. ಒಂದು ದಿನ ದೇವಾಲಯದ ಉತ್ಸವದ ಸಂದರ್ಭದಲ್ಲಿ ಅರ್ಚಕರಲ್ಲೊಬ್ಬರು ಧ್ವಜಸ್ಥಂಭವನ್ನೇರಿ, ಶೀಘ್ರದಲ್ಲೇ ಅಷ್ಟದಿಕ್ಪಾಲಕರಲ್ಲೊಬ್ಬರಾದ ವಾಯುದೇವರು ಭೂಲೋಕದಲ್ಲಿ ಹುಟ್ಟಿ ಅಸಧಾರಣವಾದ ಮಹಿಮೆಗಳನ್ನು ಪ್ರದರ್ಶಿಸಲಿರುವರೆಂದು ಘೋಷಿಸಿದರು. ಅವರು ನುಡಿದ ಭವಿಷ್ಯವು ಶೀಘ್ರದಲ್ಲೇ ನೆರವೇರಿತು ಮತ್ತು ಅವರಿಗೊಂದು ಗಂಡು ಮಗುವು ಜನಿಸಿತು. ಭವಿಷ್ಯದಲ್ಲಿ ಮಧ್ವಾಚಾರ್ಯರೆಂದು ಪ್ರಖ್ಯಾತಿ ಪಡೆಯುವ ಆ ಮಗುವಿಗೆ ವಾಸುದೇವ ಎಂದು ನಾಮಕರಣ ಮಾಡಿದರು.

ಅನೇಕ ಸಂದರ್ಭಗಳಲ್ಲಿ ವಾಸುದೇವನು ತಾನೊಬ್ಬ ಸಾಮಾನ್ಯ ಮಗನಲ್ಲವೆಂದು ಪ್ರಚುರಪಡಿಸಿದನು. ಅವರ ತಂದೆಯಾದ ಮಧ್ಯಗೇಹರು ಸ್ವಲ್ಪ ಸಾಲವನ್ನು ಹೊಂದಿದ್ದರು. ಒಂದು ಸಾರಿ ಸಾಲಗಾರನು ಬಂದು ತನ್ನ ಸಾಲ ತೀರಿಸುವವರೆಗೆ ಉಪವಾಸವಿರುವುದಾಗಿ ನಿರ್ಧರಿಸಿ ಅವರ ಮನೆಯ ಮುಂದೆ ಪಟ್ಟುಹಿಡಿದುಕುಳಿತನು. ಮಧ್ಯಗೇಹರ ಆತಂಕವನ್ನು ನೋಡಿದ ವಾಸುದೇವನು, ತನ್ನ ತಂದೆಯವರನ್ನು ಈ ಪರಿಸ್ಥಿತಿಯಿಂದ ಪಾರು ಮಾಡಲು ನಿರ್ಧಾರಿಸಿದನು. ಛಲ ಹಿಡಿದ ಸಾಲಗಾರನನ್ನು ನೀರಿನ ತೊಟ್ಟಿಯ ಹಿಂದಿದ್ದ ಒಂದು ದೊಡ್ಡ ಹುಣಸೆ ಮರದಡಿಗೆ ಕರೆದೊಯ್ದು ಕೈತುಂಬ ಹುಣಸೆ ಬೀಜವನ್ನು ತೆಗೆದುಕೊಂಡು ಸಾಲಗಾರನ ಕೈತುಂಬಿಸಿದನು. ಮೊದಲಿಗೆ ಮಗುವು ಸುಮ್ಮನೆ ಆಟವಾಡುತ್ತಿರಬಹುದೆಂದು ಸಾಲಗಾರನು ಅಂದುಕೊಂಡನು ಆದರೆ ತಿರುಗಿ ಕೈಯತ್ತ ನೋಡಿದಾಗ ಬೀಜಗಳೆಲ್ಲವು ಸಾಲ ತೀರಿಸಲು ಬೇಕಾಗುವಷ್ಟು ಚಿನ್ನದ ನಾಣ್ಯಗಳಾಗಿಬಿಟ್ಟಿದವು.

# ಆಸ್ತಿಕತೆಯ ವಿಕಾಸ

ಅತಿಶಯವಾಗಿ ಪ್ರತಿಭಾವಂತನಾಗಿದ್ದ ವಾಸುದೇವನ ಮೇಲಿನ ಧರ್ಮೋಚಿತ ವಾತ್ಸಲ್ಯದಿಂದ ಅವನ ತಂದೆಯವರು ಅವನಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಬಯಸಿದರು. ಹಾಗಾಗಿ ಅವರು ಮಗುವಿಗೆ ಓದು ಬರಹ ಕಲಿಸಲು ಪ್ರಾರಂಭಿಸುವ "ಅಕ್ಷರಾಭ್ಯಾಸ" ದ ಸಾಂಪ್ರದಾಯಿಕ ವಿಧಿಯ ಆಚರಣೆಯನ್ನು ನಿರ್ವಹಿಸಿದರು. ತನ್ನ ಪ್ರಾಥಮಿಕ ಅಧ್ಯಯನದ ತರುವಾಯ ಒಂದುದಿನ ವಾಸುದೇವನಿಗೆ ಅದನ್ನು ಪರೀಕ್ಷಿಸಿಕೊಳ್ಳುವ ಒಂದು ಉತ್ತಮ ಅವಕಾಶ ದೊರಕಿತು. ನಯಂಪಳ್ಳಿ ಎಂಬ ಹತ್ತಿರದ ಹಳ್ಳಿಯಲ್ಲಿ ಶಿವ ಎಂಬ ಹಸರಿನ ಬ್ರಾಹ್ಮಣನು ಪುರಾಣಗಳ ಮೇಲೆ ಉಪನ್ಯಾಸಗಳನ್ನು ನೀಡುತ್ತಿದ್ದನು ಮತ್ತು ಆ ಉಪನ್ಯಾಸವನ್ನು ಕೇಳಲು ವಾಸುದೇವನ ತಂದೆ ತಾಯಿಯರು ವಾಸುದೇವನನ್ನು ತಮ್ಮೊಡನೆ ಕರೆದುಕೊಂಡು ಹೋಗಿದ್ದರು. ಉಪನ್ಯಾಸ ನೀಡುತ್ತಿದ್ದಾಗ ಕಷ್ಟಕರವಾದ ಒಂದು ವಾಕ್ಯಕ್ಕೆ ಸ್ಪಷ್ಟವಾದ ಅರ್ಥವನ್ನು ವಿವರಿಸಲಾಗದೆ ಬ್ರಾಹ್ಮಣನು ತಬ್ಬಿಬ್ಬಾಗಿದ್ದನು. ಅದಾಗ್ಯೂ ಬ್ರಾಹ್ಮಣನು ತನ್ನ ಪ್ರಯತ್ನ ಮಾಡುತ್ತಿದ್ದಂತೆ, ವಾಸುದೇವನು ಥಟ್ಟನೆ ಎದ್ದು ನಿಂತು ಅಲ್ಲಿ ಸೇರಿದ್ದ ಜನರೆಲ್ಲರೂ ಅಚ್ಚರಿಪಡುವಂತೆ ವಾಕ್ಯದ ನಿಜವಾದ ಅರ್ಥವನ್ನು ವಿವರಿಸಿದನು.

ವಾಸುದೇವನು ತನ್ನ ಬೌದ್ಧಿಕ ಪ್ರತಿಭೆಯಲ್ಲಷ್ಟೇ ಅಲ್ಲದೇ ತನ್ನ ದೈಹಿಕ ಸಾಮರ್ಥ್ಯಕ್ಕೂ ಪ್ರಸಿದ್ಧನಾದನು. ಪ್ರತಿ ದಿವಸವು ಶಾಲೆಯಿಂದ ಮನೆಗೆ ಹಿಂದಿರುಗುವಾಗ ವಾಸುದೇವನು ವಿಮಾನಗಿರಿ ಬೆಟ್ಟದ ಮೇಲಿದ್ದ ದುರ್ಗಾದೇವಿಯ ದೇವಾಲಯಕ್ಕೆ ಭೇಟಿ ನೀಡುತ್ತಿದ್ದನು. ಒಂದು ದಿನ ಮನೆಯಿಂದ ಅರ್ಧ ಮೈಲಿಯಷ್ಟು ದೂರದಲ್ಲಿ ಒಂದು ಶಕ್ತಿಶಾಲಿ ಹಾವು ಅವನನ್ನು ಆಕ್ರಮಿಸಿತು. ಆ ಹಾವು ಬೇರೆ ಯಾರು ಅಲ್ಲದೇ ಮಹಾಭಾರತದಲ್ಲಿ ಪ್ರಸ್ತಾಪಿಸಿರುವ ಮಣಿಮಾನ ಎಂಬ ಭಯಂಕರ ರಾಕ್ಷಸನ ಪುನರ್ಜನ್ಮ ಎಂದು ಹೇಳಲಾಗಿದೆ. ಸರ್ಪವು

# ಮಧ್ವಾಚಾರ್ಯರು

ಮಗುವನ್ನು ಕೊಲ್ಲಲು ಪ್ರಯತ್ನಿಸಿತು ಆದರೆ ವಾಸುದೇವನು ತನ್ನ ಬಲಿಷ್ಠ ಕಾಲುಬೆರಳಿನಿಂದ ಆ ಹಾವನ್ನು ಹಿಸುಕಿ ಕೊಂದುಹಾಕಿದನು. ಮಧ್ವಾಚಾರ್ಯರು ಆ ರಾಕ್ಷಸನನ್ನು ವಧಿಸಿದ ಗುರುತನ್ನು ಅದೇ ನಿಖರವಾದ ಜಾಗದಲ್ಲಿ ಇವತ್ತಿಗೂ ಕಾಣಬಹುದು.

ಮಣಿಮಾನ ರಾಕ್ಷಸನ ಆಕ್ರಮಣದಿಂದ ವಾಸುದೇವನು ಮನೆಗೆ ಹೋಗುವುದು ವಿಳಂಬವಾದ ಕಾರಣ ಅವನ ತಾಯಿಯು ಮಗನ ಯೋಗಕ್ಷೇಮದ ಬಗ್ಗೆ ಚಿಂತಿತಳಾದಳು. ತನ್ನ ತಾಯಿಯ ಮನೋಸ್ಥಿತಿಯನ್ನು ಅರ್ಥ ಮಾಡಿಕೊಂಡ ವಾಸುದೇವನು ಎಂಟನೂರು ಗಜದಷ್ಟು ಅಂತರವಿದ್ದ ಬೆಟ್ಟದ ತುದಿಯಿಂದ ತಾಯಿಯ ಪಾದಗಳ ಸನಿಹಕ್ಕೆ ಜಿಗಿದನು. ಬಂಡೆಕಲ್ಲುಗಳಿಂದ ಕೂಡಿದ ಭೂಮಿಯ ಮೇಲೆ ಅವನು ಎಷ್ಟು ರಭಸವಾಗಿ ಜಿಗಿದನೆಂದರೆ, ಅವನು ಜಿಗಿದ ರಭಸಕ್ಕೆ ಆ ಜಾಗದಲ್ಲಿ ಅವನ ಪಾದಕಮಲಗಳ ಗುರುತು ಉಂಟಾಯಿತು. ಆ ಹೆಜ್ಜೆಗಳ ಗುರುತನ್ನು ಹೊಂದಿರುವ ಬಂಡೆಕಲ್ಲನ್ನು ಇವತ್ತಿಗೂ ಉಡುಪಿಯ ದೇವಸ್ಥಾನದಲ್ಲಿ ದರ್ಶನ ಮಾಡಬಹುದು.

ಹನ್ನೊಂದನೆ ವರುಷ ವಯಸ್ಸಿನಲ್ಲಿ ತನ್ನ ಸಂಸ್ಕೃತ ವಿದ್ಯಾಭ್ಯಾಸ ಪೂರ್ಣಗೊಂಡ ನಂತರ ವಾಸುದೇವನು ತನಗೆ ಸಂನ್ಯಾಸ ದೀಕ್ಷೆ ನೀಡಬಹುದಾದಂತಹ ಒಬ್ಬ ಗುರುವಿನ ಹುಡುಕಾಟದಲ್ಲಿ ಹೊರಟನು. ಐದನೇ ವರುಷ ವಯಸ್ಸಿದ್ದಾಗಲೆ ಅವನು ಬ್ರಾಹ್ಮಣ ದೀಕ್ಷೆಯನ್ನು ಸ್ವೀಕರಿಸಿದ್ದನು. ಉಡುಪಿಯಲ್ಲಿಯೇ ಅವರು ಅಚ್ಯುತ ಪ್ರೇಕ್ಷರೆಂಬ ಒಬ್ಬ ಅದ್ವೈತ ಸಿದ್ಧಾಂತದ ಸನ್ಯಾಸಿಯನ್ನು ಕಂಡರು. ಬಹಳ ಗೌರವದಿಂದ ಅವರು ಅಚ್ಯುತ ಪ್ರೇಕ್ಷರನ್ನು ಸಮೀಪಿಸಿ ಅವರ ಅನುಗ್ರಹವನ್ನು ಪಡೆದರು; ಅವರ ಮಾರ್ಗದರ್ಶನದಡಿಯಲ್ಲಿ ವಾಸುದೇವನು ಅವರ ವಿಧೇಯ ಶಿಷ್ಯನಾದನು. ಈ ನಡುವ ವಾಸುದೇವನ ತಂದೆಯು ದೀರ್ಘಕಾಲ

# ಆಸ್ತಿಕತೆಯ ವಿಕಾಸ

ಮನೆಯಲ್ಲಿ ಮಗನ ಅನುಪಸ್ಥಿತಿಯಿಂದ ಚಿಂತಿತರಾದರು. ಮಧ್ಯಗೇಹರು ಉಡುಪಿಗೆ ಬಂದು ಅಚ್ಯುತ ಪ್ರೇಕ್ಷರ ಆಶ್ರಮದಲ್ಲಿ ತನ್ನ ಮುದ್ದಿನ ಮಗನನ್ನು ಕಂಡರು. ಮಗನ ಉದ್ದೇಶವೇನೆಂದು ತಿಳಿದ ಮಧ್ಯಗೇಹರು ಮಗನನ್ನು ಮನೆಗೆ ಹಿಂದಿರುಗುವಂತೆ ಒಪ್ಪಿಸಲು ಮಾಡಿದ ಪ್ರಯತ್ನಗಳು ವ್ಯರ್ಥವಾದವು. ಮಧ್ಯಗೇಹರು ತಮಗಾದ ಅತೀವ ನಿರಾಸೆಯನ್ನು ತೋರಗೊಡದೆ ಆತ್ಮಸಂಯಮದಿಂದ ಮನೆಗೆ ಹಿಂದಿರುಗಿದನು. ನಡೆದ ಸಂಗತಿಯನ್ನು ತನ್ನ ಪತ್ನಿಗೆ ತಿಳಿಸಿದ ನಂತರ, ಇಡೀ ಸಂಸಾರವು ಸಂಕಟದ ಪರಿಸ್ಥಿತಿಗೆ ಸಿಲುಕಿತು ಮತ್ತು ಮಧ್ಯಗೇಹರ ಪತ್ನಿಯು ಪುನಃ ತಮ್ಮ ಪ್ರೀತಿಯ ಮಗನನ್ನು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡಿ ಮಗನನ್ನು ಮನೆಗೆ ಕರೆತರುವಂತೆ ಮಧ್ಯಗೇಹರನ್ನು ಒಪ್ಪಿಸಿದಳು.

ಮಧ್ಯಗೇಹರು ವಾಸುದೇವನನ್ನು ಕರೆತರಲು ತಿರುಗಿ ಅಶ್ರಮಕ್ಕೆ ಹೋದಾಗ ಅಚ್ಯುತ ಪ್ರೇಕ್ಷರು ದಕ್ಷಿಣ ಭಾರತದ ಎಲ್ಲ ಶ್ರೇಷ್ಠ ಪವಿತ್ರ ಕ್ಷೇತ್ರಗಳಿಗೆ ತೀರ್ಥಯಾತ್ರೆಗೆಂದು ತೆರಳಿದ್ದರು. ಆ ಕೂಡಲೇ ಮಧ್ಯಗೇಹರು ಅಚ್ಯುತ ಪ್ರೇಕ್ಷರ ಗುಂಪಿನ ಹೆಜ್ಜೆಗಳನ್ನು ಹಿಂಬಾಲಿಸುತ್ತ ಹೋದರು. ನೇತ್ರಾವತಿ ನದಿಯನ್ನು ದಾಟಿ ಉಡುಪಿಯ ದಕ್ಷಿಣ ದಿಕ್ಕಿಗೆ ಕಾಣಿಯೂರು ಎಂಬ ಹಳ್ಳಿಯ ಕುತ್ಯಾಡಿ ಆಶ್ರಮದಲ್ಲಿ ತಮ್ಮ ಮಗನನ್ನು ಕಂಡರು. ಮಧ್ಯಗೇಹರು ಪುನಃ ಮಗನನ್ನು ಮನೆಗೆ ಹಿಂದಿರುಗುವಂತೆ ಒಲಿಸಲು ಯತ್ನಿಸಿದರು. ತಂದೆ ಮತ್ತು ಮಗ ಇಬ್ಬರೂ ಚರ್ಚಿಸುತ್ತಿರುವಾಗ ಒಂದು ಹಂತದಲ್ಲಿ ಮಧ್ಯಗೇಹರು ಆವೇಶಗೊಂಡು ವಾಸುದೇವನು ಸಂನ್ಯಾಸ ಸ್ವೀಕರಿಸಿದರೆ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿದರು. ತಂದೆಯ ಆತಂಕವನ್ನು ನೋಡಿ ವಾಸುದೇವನು ತನ್ನ ತಾಯಿಯ ಅಭಿಪ್ರಾಯಕ್ಕಾಗಿ ಕಾಯುವೆನು, ಅಷ್ಟೆ ಅಲ್ಲದೆ ತಾಯಿಯು ಇನ್ನೊಬ್ಬ ಮಗನಿಗೆ ಜನ್ಮ ಕೊಡುವ ತನಕ ಸಂನ್ಯಾಸ ಸ್ವೀಕರಿಸುವುದಿಲ್ಲವೆಂದು ತನ್ನ ತಂದೆಗೆ ಹೇಳಿದನು.

# ಮಧ್ವಾಚಾರ್ಯರು

ವಾಸುದೇವನ ಹದಿನಾರನೇ ವರುಷದ ಹುಟ್ಟುಹಬ್ಬದ ತರುವಾಯ ಮಧ್ಯಗೇಹ ದಂಪತಿಗಳಿಗೆ ಇನ್ನೊಂದು ಗಂಡು ಮಗು ಜನಿಸಿತು. ತಮ್ಮ ತಂದೆ ತಾಯಿಯರ ಅನುಮತಿಯನ್ನು ಪಡೆದು ಒಂದು ಶುಭದಿನದಂದು ವಾಸುದೇವನು ಉಡುಪಿಯ ಅನಂತೇಶ್ವರ ದೇವಸ್ಥಾನದಲ್ಲಿ ಸಂನ್ಯಾಸ ಸ್ವೀಕರಿಸಿದನು. ಇಲ್ಲಿ ಗುರು ಮತ್ತು ಶಿಷ್ಯರಿಬ್ಬರ ನಡುವೆ ಒಂದು ಸ್ವಾರಸ್ಯಕರ ಸಂಬಂಧ ಉಂಟಾಯಿತು. ಒಂದೆಡೆ ಅಚ್ಯುತ ಪ್ರೇಕ್ಷರು ಶಂಕರ ಪರಂಪರೆಯ ಒಬ್ಬ ಕಟ್ಟಾ ಅನುಯಾಯಿಯಾದರೆ ಇನ್ನೊಂದೆಡೆ ಮಧ್ವರು ಅಪ್ರಬುದ್ಧವಾದ ಶಂಕರರ ಅಧ್ಯಾತ್ಮಿಕ ಸಿದ್ಧಾಂತಗಳ ಮೇಲೆ ಬೆಳಕು ಚೆಲ್ಲುತ್ತ ತಮ್ಮದೇ ಆದ ಪರಂಪರೆಯನ್ನು ಪ್ರಾರಂಭಿಸುವ ವಿಧಿನಿಯಮಿತ ಯೋಜನೆಯೆಡೆಗೆ ಮುಂದುವರಿಯುತ್ತಿದ್ದರು.

ಮಧ್ವರ ವಿಚಾರಗಳು ಶಂಕರರ ವಿಚಾರಗಳಿಂದ ನಾನಾ ವಿಧಗಳಲ್ಲಿ ಭಿನ್ನವಾಗಿದ್ದವು. ರಾಮಾನುಜರಂತೆ ಅವರು ಕೂಡಾ, ಶಂಕರರು ವೇದಗಳ ಮೂಲತತ್ತ್ವವಾದ ಪ್ರಣವ 'ಓಂ'ಕಾರಕ್ಕೆ, ಪ್ರಾಧಾನ್ಯತೆ ನೀಡಲಿಲ್ಲ ಎಂದು ಅಭಿಪ್ರಾಯಪಟ್ಟರು. ಬದಲಾಗಿ, ಮಧ್ವರ ದೃಷ್ಟಿಯಲ್ಲಿ ಶಂಕರರು 'ತತ್ ತ್ವಂ ಅಸಿ' ಯಂತಹ ಎರಡನೆ ದರ್ಜೆಯ ಸೂಕ್ತಿಗಳೆಡೆಗೆ ತಮ್ಮ ಗಮನವನ್ನು ತಿರುಗಿಸಿದ್ದರು. ಹೀಗೆ ಮಧ್ವರ ಪ್ರಕಾರ ಶಂಕರರ ಬೋಧನೆಗಳು ವೇದಗಳು ಸೂಚಿಸುವ ಜ್ಞಾನವನ್ನು ಸಂಪೂರ್ಣವಾಗಿ ಪರಿಚಯಿಸದೇ ಅವುಗಳ ಜ್ಞಾನದ ಆಂಶಿಕ ಪರಿಚಯವನ್ನು ನೀಡುತ್ತಿದ್ದವು.

ಶಂಕರರು ಎಲ್ಲ ವಸ್ತುಗಳ ಏಕತ್ವದಲ್ಲಿ ಅಥವಾ ಅನನ್ಯತೆಯ ಮೇಲೆ ಎಷ್ಟರ ಮಟ್ಟಿಗೆ ಒತ್ತು ನೀಡಿದರೆಂದರೆ ಪರಮ ವಾಸ್ತವಿಕತೆಯ ಬಗೆಗಿನ ಅವರ ದೃಷ್ಟಿಯಲ್ಲಿ ಎಲ್ಲ ವಸ್ತುಗಳು ಅಥವಾ ಪ್ರತ್ಯೇಕತೆಯ ಅಸ್ತಿತ್ವವು ಮಿಥ್ಯೆ. ಅದಕ್ಕೆ ಬದಲಾಗಿ ಮಧ್ವರು ಭಗವಂತ, ಜೀವಾತ್ಮ

ಮತ್ತು ಭೌತದ್ರವ್ಯಗಳ ನಡುವೆ ಇರುವ ಐದು ಪರಿಪೂರ್ಣವಾದ ಮತ್ತು ಸನಾತನವಾದ ಭಿನ್ನತೆಗಳಮೇಲೆ ಒತ್ತು ನೀಡುತ್ತಾರೆ. ದೇವರ ಮತ್ತು ಜೀವಾತ್ಮಗಳ ನಡುವಿನ ಭಿನ್ನತೆ, ದೇವರ ಮತ್ತು ಜೀವರಹಿತ ಭೌತಜಗತ್ತಿನ ನಡುವಿನ ಭಿನ್ನತೆ, ಒಂದು ಜೀವಾತ್ಮ ಮತ್ತು ಇನ್ನೊಂದು ಜೀವಾತ್ಮನ ನಡುವಿನ ಭಿನ್ನತೆ, ಜೀವಾತ್ಮ ಮತ್ತು ಭೌತದ್ರವ್ಯದ ನಡುವಿನ ಭಿನ್ನತೆ, ಮತ್ತು ಒಂದು ಜಡ ವಸ್ತು ಮತ್ತು ಇನ್ನೊಂದು ಜಡ ವಸ್ತುವಿನ ನಡುವಿನ ಭಿನ್ನತೆ.

ತಾವು ವಿವರಿಸಿದ ಈ ಐದು ವಿಷಯಗಳಲ್ಲಿ ಮಧ್ವರು ಪ್ರತಿಯೊಂದರಲ್ಲೂ ಪರಿಪೂರ್ಣವಾದ ಏಕತೆಯನ್ನೂ ಕೂಡಾ ಗುರುತಿಸಿದರು. ದೇವರು ಮತ್ತು ಜೀವಾತ್ಮಗಳಿಬ್ಬರೂ ಚೇತನಗಳಾಗಿರುವುದರಿಂದ, ಒಂದು ಸಮಗ್ರತೆಯು ತನ್ನ ಭಾಗಗಳೊಂದಿಗೆ ನಿರಂತರ ಸಂಬಂಧ ಹೊಂದಿರುವಂತೆ ಭಗವಂತ ಮತ್ತು ಜೀವಾತ್ಮರು ಪರಸ್ಪರ ಸನಾತನವಾದ ಸಂಬಂಧವನ್ನು ಹೊಂದಿರುತ್ತಾರೆ. ಜಡಜಗತ್ತು ತನ್ನದೇ ಸೃಷ್ಟಿಯಾಗಿರುವುದರಿಂದ ಸೃಷ್ಟಿ ಮತ್ತು ಸಂರಕ್ಷಣೆಗೆ ಅಗತ್ಯವಿರುವಷ್ಟು ಮಟ್ಟಿಗೆ ಮಾತ್ರ ಭಗವಂತ ಮತ್ತು ಜಡಜಗತ್ತಿನ ನಡುವೆ ಸಂಬಂಧವಿರುವುತ್ತದೆ. ಜೀವಾತ್ಮರೆಲ್ಲರೂ ಭಗವಂತನ ಅಂಶಗಳಾಗಿರುವುದರಿಂದ ಭಗವಂತನ ತದ್ರೂಪರು ಮತ್ತು ಪ್ರಜ್ಞೆಯುಳ್ಳವರಾಗಿದ್ದು ಭಗವಂತನಮೇಲೆ ಅವಲಂಬಿತರಾಗಿರುವರು. ಜೀವಾತ್ಮ ಮತ್ತು ಜಡಪ್ರಕೃತಿ ಎರಡೂ ಪರಮಾತ್ಮನ ಮೇಲೆ ಅವಲಂಬಿತವಾಗಿರುವಷ್ಟರ ಮಟ್ಟಿಗೆ ಮಾತ್ರ ಪರಸ್ಪರರಲ್ಲಿ ಅನನ್ಯತೆ ಕಂಡುಬರುತ್ತದೆ ಮತ್ತು ಜಡವಸ್ತುಗಳೆಲ್ಲವೂ ಭಗವಂತನನ್ನು ಅವಲಂಬಿಸಿದ್ದು ಅವನ ಒಂದು ಕ್ರಮಬದ್ಧ ವ್ಯವಸ್ಥೆಯ ಬಂಧದಲ್ಲಿರುವುದರಿಂದ ಪರಸ್ಪರ ಅನನ್ಯತೆಯನ್ನು ಹೊಂದಿರುತ್ತವೆ.

# ಮಧ್ವಾಚಾರ್ಯರು

ದ್ವೈತ(ದ್ವಿವಿಧತೆ) ಎಂದು ಕರೆಯಲ್ಪಡುವ ಮಧ್ವರು ಸ್ಥಾಪಿಸಿದ ಸಿದ್ಧಾಂತವು ಭಗವಂತನ ಮತ್ತು ಜೀವಾತ್ಮರ ನಡುವೆ ಸನಾತನವಾಗಿ ಇರುವ ಅಂತರವನ್ನು ಸ್ಪಷ್ಟವಾಗಿ ಒತ್ತಿ ಹೇಳುತ್ತದೆ. ಈ ಪ್ರಕಾರವಾಗಿ ಮಧ್ವರ ದ್ವೈತ ಸಿದ್ಧಾಂತವು ಶಂಕರಾಚಾರ್ಯರ ಅದ್ವೈತ ಸಿದ್ಧಾಂತಕ್ಕೆ ತದ್ವಿರುದ್ಧವಾಗಿದೆ. ಗಮನಿಸಬೇಕಾದ ಅಂಶವೆಂದರೆ, ಮಧ್ವರು ಮತ್ತು ಶಂಕರರಿಬ್ಬರೂ ಇಂದಿಯಾನುಭವದಿಂದ ಉಂಟಾಗುವ ದ್ವೈತಸ್ಥಿತಿಯು ಭ್ರಾಮಕ ಎಂದು ಒಪ್ಪಿಕೊಳ್ಳುತ್ತಾರೆ. ಮಧ್ವರ ದ್ವೈತವಾದವು ಒಂದು ಪಾರಮಾರ್ಥಿಕ ವಿಚಾರಣೀಯ ಅಂಶ, ಮತ್ತು ಇದರ ಅರಿವು ಒಬ್ಬನಲ್ಲಿ ಮೂಡಬೇಕಾದರೆ 'ತಾನು ಈ ದೇಹ' ಎಂಬ ಹುಸಿ ಅಹಂಕಾರವನ್ನು ನಾಶಪಡಿಸಿ 'ತಾನು ಭಗವಂತನ ನಿತ್ಯ ಸೇವಕ' ಎಂಬ ನಿಜಅಹಂಕಾರವನ್ನು ವೃದ್ಧಿಸಿ ಭಗವಂತನ ನಿಸ್ವಾರ್ಥ ಸೇವೆಯಲ್ಲಿ ನಿರತನಾಗಬೇಕು.

ಭಗವಂತನಿಗೆ ತನ್ನ ಗುಣಲಕ್ಷಣಗಳ ಅನೇಕತ್ವದೊಡನೆ ಇರುವ ಐಕ್ಯತೆಯನ್ನು ನಿರೂಪಿಸುವ "ವಿಶೇಷ" ಎಂಬ ತತ್ವವನ್ನು ಮಧ್ವರು ಪರಿಚಯಿಸಿದರು. ಉದಾಹರಣೆಗೆ ಒಂದು ಬಿಳಿಯ ಹಾಳೆ ಮತ್ತು ಅದರ ಬಿಳುಪಿನ ನಡುವೆ ಯಾವ ವ್ಯತ್ಯಾಸವನ್ನು ಕಾಣದಿದ್ದರೂ, ಅದೇ ಸಮಯಕ್ಕೆ ಆ ಹಾಳೆಯಲ್ಲಿರುವ ಬಿಳುಪಿನ ವಿಶೇಷತೆಯನ್ನು ಗುರುತಿಸುತ್ತೇವೆ, ಹಾಗೆಯೇ ಬ್ರಹ್ಮನ್ ಅಥವಾ ಪರಾತ್ಪರಸತ್ಯನಾದ ಭಗವಂತನನ್ನು ಒಂದು ವಿಚಾರಪೂರ್ಣ ದೃಷ್ಟಿಯಿಂದ ನೋಡಿದಾಗ ನಮಗೆ ಭಗವಂತನಲ್ಲಿ ಸಮರಸವಾದ ವೈವಿಧ್ಯತೆಗಳಿರುವುದು ಕಂಡುಬರುತ್ತದೆ. ಇದು ಶಂಕರರ ಅದ್ವೈತ ಸಿದ್ಧಾಂತಕ್ಕೆ ವಿರುದ್ಧವಾದ ಒಂದು ಆಸ್ತಿಕ ತತ್ವ, ಎಷ್ಟರ ಮಟ್ಟಿಗೆ ಎಂದರೆ ಜೀವಾತ್ಮನು ಭಗವಂತನ ದಿವ್ಯ ಸೇವೆಯಲ್ಲಿ ನಿತ್ಯನಿರತನಾಗಿದ್ದಾಗಲೂ ಶಾಶ್ವತವಾಗಿ ಪ್ರತ್ಯೇಕನಾಗಿಯೇ ಉಳಿಯುತ್ತಾನೆ ಮತ್ತು ಅದೇ ಸಂದರ್ಭದಲ್ಲಿ ಸಕಲ ಆಸ್ತಿತ್ವವನ್ನು ಒಂದು ವ್ಯವಸ್ಥಿತ ಅಖಂಡತೆಯಾಗಿ ನೋಡಲಾಗುತ್ತದೆ.

# ಆಸ್ತಿಕತೆಯ ವಿಕಾಸ

ಅಂದು, ಪೂರ್ಣಪ್ರಜ್ಞ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದ ಮಧ್ವರು ಸೈದ್ಧಾಂತಿಕ ಚರ್ಚೆಗಳ ಸಂದರ್ಭದಲ್ಲಿ ವೇದಾಂತ ಸೂತ್ರದ ಮೇಲಿನ ಅದ್ವೈತ ವ್ಯಾಖ್ಯಾನಗಳಲ್ಲಿರುವ ಅನೇಕ ದೋಷಗಳನ್ನು ಎತ್ತಿ ತೋರಿಸುವುದನ್ನು ರೂಢಿಯನ್ನಾಗಿಸಿಕೊಂಡಿದ್ದರು. ಇದನ್ನು ಗಮನಿಸಿದ ಅವರ ಗುರುಗಳು ತನ್ನ ಶಿಷ್ಯನು ಬಹಳ ಶಕ್ತಿಶಾಲಿ ಮತ್ತು ತನ್ನ ಸ್ವಂತ ಯೋಗ್ಯತೆಯಿಂದ ಭವಿಷ್ಯದಲ್ಲಿ ದೊಡ್ಡ ಅಚಾರ್ಯನಾಗುವನೆಂದು ಅರಿತು ಮಧ್ವರನ್ನು ಇನ್ನೊಂದು ಪ್ರತ್ಯೇಕವಾದ ಮಠಕ್ಕೆ ಮುಖ್ಯಸ್ಥನನ್ನಾಗಿ ನೇಮಿಸಿ ಆನಂದ ತೀರ್ಥ ಎಂಬ ಹೆಸರನ್ನು ಕೊಟ್ಟರು.

ಆನಂದ ತೀರ್ಥರು ನೂತನ ಆಧ್ಯಾತ್ಮಿಕ ನಾಯಕರೆಂಬ ಸುದ್ದಿಯು ಎಲ್ಲೆಡೆಯೂ ಹರಡುತ್ತಿದ್ದಂತೆ ಆಗಿನ ಕಾಲದ ಪದ್ದತಿಯಂತೆ ಅನೇಕ ಪಂಡಿತರು ಮಧ್ವರನ್ನು ಆಧ್ಯಾತ್ಮಿಕ ವಿಚಾರಗಳ ಚರ್ಚೆಗಳಲ್ಲಿ ಪರಾಭವಗೊಳಿಸಲು ಉಡುಪಿಯಲ್ಲಿ ಗುಂಪುಗೂಡಿದರು. ಆ ಸಮಯದಲ್ಲಿ ಅನೇಕ ಬೌದ್ದರು ಮತ್ತು ಜೈನರು ದಕ್ಷಿಣ ಕನ್ನಡ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದರು. ಬೌದ್ದರಲ್ಲಿ ಅತಿದೊಡ್ಡ ಪಂಡಿತನಾಗಿದ್ದ ಬುದ್ಧಿಸಾಗರನು ಪೂರ್ಣಪ್ರಜ್ಞರನ್ನು ತರ್ಕಕ್ಕೆ ಆಹ್ವಾನಿಸಿ ಪರಾಭವಗೊಂಡನು. ಒಂದೆ ಒಂದು ದಿನದ ತರ್ಕವು ಮುಗಿದನಂತರ ಅವನು ರಾತ್ರಿವೇಳೆಯಲ್ಲಿ ಪಲಾಯನ ಮಾಡಿ ತನ್ನ ಪರಾಜಯವನ್ನು ಖಚಿತಪಡಿಸಿದನು. ಈ ಗೆಲುವು ಮಧ್ವರಿಗೆ ಗಣನೀಯವಾದ ಖ್ಯಾತಿಯನ್ನು ತಂದುಕೊಟ್ಟಿತು. ಮಧ್ವರ ಗುರುಗಳು ಕಟ್ಟಾ ಅದ್ವೈತವಾದಿಗಳಾಗಿದ್ದರೂ ಸದಾ ನವೋತ್ಸಾಹದ ಪೂರ್ಣಪ್ರಜ್ಞರು ವಿಶ್ವಾಸಾತ್ಮಕವಾಗಿ ಮಂಡಿಸುವ ಖಂಡಿಸಲಾಗದ ವಾದಗಳಿಂದ ಬಹಳ ಮೊದಲಿನಿಂದಲೂ ಪ್ರಭಾವಿತರಾಗಿದ್ದರು. ಹಾಗಾಗಿ ಅವರು ಮಧ್ವಾಚಾರ್ಯರಿಗೆ ವೇದಾಂತ ಸೂತ್ರದ ಮೇಲೆ ಅವರದೇ ಆದ ಭಾಷ್ಯವನ್ನು ಬರೆಯಲು ಅಹ್ವಾನಿಸಿದರು; ಮಧ್ವರು ಸವಾಲನ್ನು

# ಮಧ್ವಾಚಾರ್ಯರು

ಸ್ವೀಕರಿಸಿದರು. ವೇದಶಾಸ್ತ್ರಗಳ ಹಿನ್ನೆಲೆಯುಳ್ಳ ಯಾವುದೇ ಒಂದು ಸೈದ್ಧಾಂತಿಕ ವ್ಯವಸ್ಥೆಯು ವೇದಾಂತ ಸೂತ್ರಗಳಿಗೆ ತನ್ನದೇ ಆದ ಭಾಷ್ಯವನ್ನು ಹೊಂದಿ ಅದರ ಮೂಲಕವೇ ಸ್ಥಾಪಿತಗೊಳ್ಳಬೇಕೆಂದು ಹೇಳಲಾಗಿದೆ.

ಮಧ್ವಾಚಾರ್ಯರ ಬಹಳಷ್ಟು ಸಮಯ ಭಾರತದ ಆಗಿನ ಕಾಲದ ಪ್ರಮುಖ ವಿಚಾರವಾದಿ ಸಂಪ್ರದಾಯಗಳೊಂದಿಗೆ ತತ್ವಶಾಸ್ತ್ರ ಸಂಬಂಧಿತ ಚರ್ಚೆಗಳಲ್ಲಿ ಕಳೆಯಿತು. ಅವರು ವೈದಿಕ ಸಂಪ್ರದಾಯದಲ್ಲಿರುವವರೊಡನೆ ಮತ್ತು ವೇದಗಳು ಸಾಹಿತ್ಯ ರೂಪದಲ್ಲಿರುವ ಪ್ರಕಟಿತ ಜ್ಞಾನದ ಪ್ರಮಾಣ ಎಂಬುದನ್ನು ಒಪ್ಪದ ಬೌದ್ಧರು ಮತ್ತು ಜೈನರುಗಳೊಡನೆಯೂ ಚರ್ಚೆಗಳನ್ನು ನಡೆಸಿದರು. ವೈದಿಕ ಸಂಪ್ರದಾಯದ ಹೊರಗಿರುವವರು ಖಂಡಿತವಾಗಿಯೂ ತಮ್ಮ ಸಿದ್ಧಾಂತಗಳ ಹಿನ್ನೆಲೆಯನ್ನುಳ್ಳ ತಮ್ಮದೇ ಆದ ಪ್ರಮಾಣಬದ್ಧ ಸಾಹಿತಿಕ ಮೂಲವನ್ನು ಹೊಂದಿದ್ದರು. ಈ ಎಲ್ಲ ಸೈದ್ಧಾಂತಿಕ ಎದುರಾಳಿಗಳೊಡನೆ, ವೇದಾಂತ ಸೂತ್ರದಲ್ಲಿ ಕಂಡುಬರುವಂತಹ ಸಮಾನ ಲಕ್ಷಣಗಳುಳ್ಳ ತರ್ಕಗಳ ಪ್ರಯೋಗದಿಂದ ಮಧ್ವಾಚಾರ್ಯರು ಎದುರಾಳಿಗಳನ್ನು ಬೆರಗುಗೊಳಿಸಿ ಅದ್ಭುತವಾದ ಯಶಸ್ಸನ್ನು ಪಡೆದರು. ವೈದಿಕ ಸಂಪ್ರದಾಯದೊಳಗಿರುವವರೊಡನೆ ಮಧ್ವರು ನಡೆಸಿದ ಚರ್ಚೆಗಳು, ತಾವು ವೇದಾಂತಸೂತ್ರಗಳಿಂದ ನೇರವಾಗಿ ಸಂಕಲಿಸಿದ, ಇಂದಿಗೂ ಭಾರತದಲ್ಲಿ ತರ್ಕ ಮತ್ತು ನ್ಯಾಯ(ನ್ಯಾಯಶಾಸ್ತ್ರ)ದ ಪರಮೋಚ್ಚತೆ ಎಂದು ಸ್ವೀಕರಿಸಲಾಗುವ ಪ್ರಬಂಧವನ್ನು ಬೆಂಬಲಿಸುವ ನೆಲೆಗಳಾಗಿ ರೂಪತಾಳಿದವು.

ವೈದಿಕ ಸಂಪ್ರದಾಯದೊಳಗೆ ವೇದಗಳು, ಉಪನಿಷತ್ತುಗಳು ಮತ್ತು ಅವುಗಳ ಉಪಸಿದ್ಧಾಂತಗಳಾದ ಪುರಾಣಗಳನ್ನು ಬಹುತರವಾಗಿ

# ಆಸ್ತಿಕತೆಯ ವಿಕಾಸ

ವರ್ತಮಾನಕಾಲದ ಶಾಸನ ವ್ಯವಸ್ಥೆಯ ಕಾನೂನು ಪುಸ್ತಕಗಳ ಹಾಗೆಂದು ಪರಿಗಣಿಸಲಾಗಿದೆ. ಯಾವುದೇ ಒಂದು ಮೊಕದ್ದಮೆಯಲ್ಲಿ ವಾದಿಸುವ ಇಬ್ಬರು ವಕೀಲರು ನಿಜವಾದ ನ್ಯಾಯ ಏನೆಂಬುದನ್ನು ಸ್ಥಾಪಿಸುವ ದೃಷ್ಟಿಯಿಂದ ನ್ಯಾಯಲಯಕ್ಕೆ ಹೋಗುತ್ತಾರೆ. ಅವರಿಬ್ಬರು ಅಧಿಕೃತವಾದ ಕಾನೂನಿನ ಪುಸ್ತಕಗಳಿಂದ ಉದಾಹರಣೆಗಳನ್ನು ನೀಡುವುದಷ್ಟೇ ಅಲ್ಲದೆ ಪ್ರಸ್ತುತ ಮೊಕದ್ದಮೆಯನ್ನು ಹೋಲುವ ಮೊಕದ್ದಮೆಗಳನ್ನು ಹಿಂದೆ ಕಾನೂನು ರೀತ್ಯಾ ಹೇಗೆ ವಿಮರ್ಶಿಸಲಾಗಿತ್ತು ಎಂಬ ಮಾಹಿತಿಯನ್ನು ನೀಡುವ, ಮೊಕದ್ದಮೆಗಳ ಇತಿಹಾಸಗಳನ್ನು ಒಳಗೊಂಡ ಪುಸ್ತಕಗಳಿಂದಲೂ ದೃಷ್ಟಾಂತಗಳನ್ನು ನೀಡುತ್ತಾ ತಮ್ಮ ಮೊಕದ್ದಮೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಾರೆ. ವೇದಗಳನ್ನು ಮತ್ತು ಅದರ ಉಪಸಿದ್ಧಾಂತಗಳಾದ ಪುರಾಣಗಳನ್ನು ಕಾನೂನಿನ ಪುಸ್ತಕಗಳಿಗೆ ಮತ್ತು ಮೊಕದ್ದಮೆಗಳ ಇತಿಹಾಸಗಳಿಗೆ ಹೋಲಿಸಬಹುದು. ಹಾಗಾಗಿ ನಾವು ಮಾತನಾಡುವ ಮಧ್ವರ ತತ್ವ ಸಂಬಂಧಿತ ಚರ್ಚೆಗಳ ವಿಷಯವನ್ನು ಬಹುತರವಾಗಿ ಇಂದಿನ ದಿನಗಳಲ್ಲಿ ವಕೀಲರು ಮೊಕದ್ದಮೆಗಳ ಬಗ್ಗೆ ಮಾಡುವ ವಾದಗಳ ಹಾಗೆಂದು ತಿಳಿದುಕೊಳ್ಳಹುದು. ಆ ಕಾಲದಲ್ಲಿ ಇಂತಹ ವಾದಗಳಲ್ಲಿ ಭಾಗವಹಿಸುವವರು ಸತ್ಯವನ್ನು ಮತ್ತು ಅದರ ಸ್ವಭಾವವನ್ನು ಗ್ರಹಿಕೆಯ ಎಲ್ಲ ಹಂತಗಳಲ್ಲಿ ಚರ್ಚಿಸುತ್ತಿದ್ದರು ಮತ್ತು ತಾವು ಪರಾಜಯಗೊಂಡರೆ ತಾನು ಪಾಲಿಸುತ್ತಿದ್ದ ಸಿದ್ಧಾಂತವನ್ನು ತ್ಯಜಿಸಿ ವಿಜೇತನನ್ನು ತನ್ನ ಅಧ್ಯಾತ್ಮಿಕ ಸಲಹೆಗಾರನನ್ನಾಗಿ ಸ್ವೀಕರಿಸುವುದಕ್ಕೆ ಪ್ರತಿಯೊಂದು ಪಕ್ಷದವರು ತಾತ್ವಿಕವಾಗಿ ಸಿದ್ದರಾಗಿರುತ್ತಿದ್ದರು.

ವೇದಾಂತ ಸೂತ್ರದ ಮೇಲೆ ತಮ್ಮ ಭಾಷ್ಯ ಬರೆಯುವ ಮುನ್ನ ಮಧ್ವರು ಅನೇಕ ವರುಷಗಳ ಕಾಲ ವಿವಿಧೆಡೆಗಳಿಗೆ ಸಂಚರಿಸಿದರು. ಈ ಸಮಯದಲ್ಲಿ ಅವರಿಗೆ ಭಗವದ್ಗೀತೆಯ ಮೇಲೆ ತಾನು ಅವಶ್ಯವಾಗಿ ಭಾಷ್ಯ ಬರೆಯಬೇಕೆಂಬ ಮನವರಿಕೆಯಾಯಿತು. ಇದನ್ನು ಬರೆದು

# ಮಧ್ವಾಚಾರ್ಯರು

ವೇದವ್ಯಾಸರಿಗೆ (ಈಗಲೂ ಹಿಮಾಲಯದಲ್ಲಿ ವಾಸಿಸುತ್ತಿರುವರೆಂದು ನಂಬಲಾಗಿರುವ ವೇದಶಾಸ್ತ್ರಗಳ ಮೂಲ ಕರ್ತೃ) ತಮ್ಮ ಗೌರವಗಳನ್ನು ಅರ್ಪಿಸಿ ತಾವು ಸ್ಥಾಪಿಸಿದ ನೂತನ ಸಂಪ್ರದಾಯಕ್ಕೆ ಆಶೀರ್ವಾದಗಳನ್ನು ಪಡೆಯಲು ಹಿಮಾಲಯಕ್ಕೆ ಹೋಗುವುದಾಗಿ ನಿರ್ಧರಿಸಿದರು. ತಮ್ಮ ಶಿಷ್ಯರಾದ ಸತ್ಯತೀರ್ಥರೊಂದಿಗೆ ಬದರಿಗೆ ಆಗಮಿಸಿ ಪ್ರಯಾಣದ ಕೊನೆಯ ಭಾಗದ ಸಿದ್ಧತೆಗಾಗಿ ಆನಂದ ಆಶ್ರಮದಲ್ಲಿ ಉಳಿದುಕೊಂಡರು.

ಅಂದು ರಾತ್ರಿ ಭಗವದ್ಗೀತೆಯ ಮೇಲಿನ ತಮ್ಮ ವ್ಯಾಖ್ಯಾನವನ್ನು ಶ್ರೀ ಮೂರ್ತಿಗೆ ಅರ್ಪಿಸುತ್ತ ಮಧ್ವರು ಮೊದಲನೆಯ ಸಾಲನ್ನು ಓದಲು ಪ್ರಾರಂಭಿಸುತ್ತಿದ್ದಂತೆ ಶ್ರೀಮೂರ್ತಿಯಿಂದ ಒಂದು ದಿವ್ಯ ವಾಣಿಯು ಹೊರಬಂದು ಒಂದು ಸಣ್ಣ ತಿದ್ದುಪಡಿಯನ್ನು ಮಾಡುವಂತೆ ಆದೇಶಿಸಿತು. ಎಲ್ಲಿ ಮಧ್ವರು “ನಾನು ಗೀತೆಯ ಅರ್ಥವನ್ನು ನನ್ನ ಸಾಮರ್ಥ್ಯಕ್ಕೆ ತಕ್ಕಹಾಗೆ ವಿವರಿಸುವೆನು” ಎಂದು ಬರೆದಿದ್ದರೊ ಅಲ್ಲಿ ಶ್ರೀಮೂರ್ತಿಯು ಮಧ್ಯಪ್ರವೇಶಿಸಿ “ನೀನು ಗೀತೆಯ ಅರ್ಥವನ್ನು ಪೂರ್ಣವಾಗಿ ವಿವರಿಸಬಲ್ಲೆ, ಆದರೆ, ನಿನ್ನ ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳುವಷ್ಟು, ಅವರ ಸಾಮರ್ಥ್ಯಕ್ಕೆ ತಕ್ಕ ಹಾಗೆ ಅದನ್ನು ಸ್ವಲ್ಪ ಮಾತ್ರ ವಿವರಿಸುವೆ!” ಎಂದು ನುಡಿಯಿತು. ಹಾಗಾಗಿ ಭಗವದ್ಗೀತೆಯಲ್ಲಿ ಅಡಕವಾಗಿರುವ  ಪೂರ್ಣ ಆಸ್ತಿಕತೆಯನ್ನು ಅರ್ಥೈಸುವ ವಿವರಣೆಯು ಮುಂಬರುವ ದಿನಗಳಲ್ಲಿ ಇನ್ನೊಬ್ಬರು ದೊಡ್ಡ ಆಚಾರ್ಯರಿಂದ ಪ್ರಕಟವಾಗುವುದೆಂದು ಈ ಮೂಲಕ ಸೂಚಿಸಲ್ಪಟ್ಟಿತು.

ನಂತರ ಮಧ್ವರು ಉನ್ನತ ಹಿಮಾಲಯದಲ್ಲಿ ವ್ಯಾಸರು ವಾಸಿಸುತಿದ್ದ ಗುಪ್ತ ಬದರಿನಾಥಕ್ಕೆ ಪಯಣಿಸಲು ಇಚ್ಛಿಸಿದರು. ಈ ಪ್ರಯಾಣದ ಸಿದ್ದತೆಗಾಗಿ ಅವರು ೪೮ ದಿನಗಳ ಕಾಲ ಉಪವಾಸ ಮತ್ತು ಮೌನ

ವ್ರತವನ್ನು ಆಚರಿಸಿದರು. ತಮ್ಮ ಅಂತಿಮ ನಿರ್ಗಮನದ ಮುನ್ನ ತಮ್ಮ ಶಿಷ್ಯರುಗಳಿಗೆ ಹೀಗೆಂದು ಬರೆದರು "ಈ ಸ್ಥಳವು ಪವಿತ್ರವಾದದ್ದು, ವಿಷ್ಣುವು ಪರಮ ಪುರುಷನಾದ ಭಗವಂತನು. ನನ್ನ ಮಾತು ಎಲ್ಲರ ಒಳಿತನ್ನು ಉದ್ದೇಶಿಸಿ ಇರುವುದು. ನಾನು ವ್ಯಾಸರಿಗೆ ಗೌರವಗಳನ್ನು ಅರ್ಪಿಸಲು ಹೊರಡುತ್ತಿದ್ದೇನೆ. ನಾನು ಹಿಂದಿರುಗಿ ಬರಬಹುದು ಅಥವಾ ಬರದೇ ಇರಬಹುದು. ದೇವರು ನಿಮ್ಮೆಲ್ಲರನ್ನು ಆಶೀರ್ವದಿಸಲಿ". ತಮ್ಮ ಪ್ರಯಾಸಕರ ಪ್ರಯಾಣವನ್ನು ಮುಗಿಸಿ ಮಧ್ವರು ನಿಧಾನವಾಗಿ, ಒಂದು ಪವಿತ್ರ ಜಾಗದಲ್ಲಿ ಋಷಿಗಳ ಮಧ್ಯೆ ಕುಳಿತಿದ್ದ ವೇದವ್ಯಾಸರ ಬಳಿಗೆ ಹೋದರು. ಅಲ್ಲಿ ನೇರವಾಗಿ ವೇದ ವ್ಯಾಸರ ಮುಖದಿಂದ, ವೇದಾಂತ ಸೂತ್ರದ ಮೇಲೆ ವ್ಯಾಖ್ಯಾನವನ್ನು ಬರೆಯುಲು ಆಶೀರ್ವಾದವನ್ನು ಪಡೆದರು. ತಮ್ಮ ಉದ್ದೇಶ ನರೆವೇರಿದ ನಂತರ ಮಧ್ವರು ಆನಂದ ಆಶ್ರಮಕ್ಕೆ ಹಿಂದಿರುಗಿದರು. ಅಲ್ಲಿ ಅವರ ಶಿಷ್ಯರಾದ ಸತ್ಯ ತೀರ್ಥರು ಮಧ್ವರ ವೇದಾಂತಸೂತ್ರದ ಮೇಲಿನ ಭಾಷ್ಯವನ್ನು ತೆಗೆದುಕೊಂಡು ಅನೇಕ ಪ್ರತಿಗಳನ್ನು ತಯಾರಿಸಿ ಎಲ್ಲೆಡೆ ಕಳುಹಿಸುವ ಸಿದ್ದತೆಯನ್ನು ಮಾಡಿಕೊಂಡರು.

ಮಧ್ವರು ಅಲ್ಲಿಂದ ಪೂರ್ವ ದಿಕ್ಕಿನತ್ತ ಸಂಚರಿಸುತ್ತ ಕಟ್ಟಕಡೆಗೆ ಗೋದಾವರಿ ನದಿ(ಭಾರತದ ಪೂರ್ವ ಮಧ್ಯ ಭಾಗ) ತೀರಕ್ಕೆ ಬಂದರು. ಅಲ್ಲಿ ಗೋದಾವರಿ ನದಿ ತೀರದ ಮೇಲೆ ಗಂಜಾಂ ಎಂಬ ಪಟ್ಟಣದಲ್ಲಿ ಪಂಡಿತರ ಒಂದು ಗುಂಪನ್ನು ಭೇಟಿ ಮಾಡಿ ಅವರೊಂದಿಗೆ ತತ್ವಶಾಸ್ತ್ರ ಸಂಬಂಧಿತ ವಿಚಾರಗಳನ್ನು ಚರ್ಚಿಸಿದರು. ಬೌದ್ದರು, ಜೈನರು, ಚಾರ್ವಾಕರು ಮತ್ತು ಶಂಕರರ ಅನುಯಾಯಿಗಳನ್ನೆಲ್ಲಾ ಮಧ್ವರು ಪರಾಭವಿಸಿದರು. ಶ್ರೀ ಶೋಭನ ಭಟ್ಟ ಮತ್ತು ಶ್ರೀ ರಾಮ ಶಾಸ್ತ್ರಿ ಎಂಬ ಇಬ್ಬರು ಶ್ರೇಷ್ಠ ಪಂಡಿತರುಗಳನ್ನು ವಾದದಲ್ಲಿ ಸೋಲಿಸಿ ತಮ್ಮ ಸಿದ್ಧಾಂತಕ್ಕೆ ಪರಿವರ್ತಿಸಿದರು ಅವರನ್ನು ಕ್ರಮವಾಗಿ ಪದ್ಮನಾಭ

# ಮಧ್ವಾಚಾರ್ಯರು

ತೀರ್ಥ ಮತ್ತು ನರಹರಿ ತೀರ್ಥ ಎಂದು ಹೆಸರಿಸಿ ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದರು. ಪದ್ಮನಾಭ ತಿರ್ಥ ಮತ್ತು ಇನ್ನಿತರ ಶಿಷ್ಯರುಗಳೊಂದಿಗೆ ಮಧ್ವರು ಉಡುಪಿಗೆ ತೆರಳಿದರು, ಅವರನ್ನು ಆಧ್ಯಾತ್ಮಿಕ ಸಂಬಂಧಿ ಚರ್ಚೆಗಳಿಗೆ ಆಹ್ವಾನಿಸುವ ಸಾಹಸವನ್ನು ಮಾಡುವವರು ಯಾರೂ ಉಳಿಯದಿದ್ದ ಕಾರಣ ಈಗ ಅವರ ಅಧ್ಯಾತ್ಮಿಕ ಸ್ಥಾನವು ಅಪರಾಜಿತವಾಗಿ ಮತ್ತು ಅವಿರೋಧವಾಗಿ ಉಳಿಯಿತು. ಅವರು ಅನೇಕ ಜನ ಭಕ್ತರಿಗೆ ದೀಕ್ಷೆಯನ್ನು ನೀಡಿದರು ಮತ್ತು ಸಾವಿರಾರು ಜನರನ್ನು ದ್ವೈತ ಸಿದ್ಧಾಂತದ ಆಶ್ರಯ ಪಡೆಯಲು ಒಪ್ಪಿಸಿದರು.

ಉಡುಪಿಯು ಮಧ್ವರ ದ್ವೈತವಾದವೆಂಬ ಅಲೌಕಿಕ ತತ್ತ್ವಶಾಸ್ತ್ರದ ನೆಲೆಯಾಗುವುದಿತ್ತು. ಈ ಪಟ್ಟಣದಲ್ಲಿಯೇ ಅವರ ಜೀವನದ ಒಂದು ಅತಿ ಪ್ರಮುಖವಾದ ಘಟನೆ ನಡೆಯಿತು. ಸಮುದ್ರದಲ್ಲಿ ಸ್ನಾನ ಮಾಡುತ್ತಿದ್ದಾಗ, ಮಧ್ವರು ಒಬ್ಬ ಸಮುದ್ರ ವ್ಯಾಪಾರಿಯು ತನ್ನ ನೌಕೆಯೊಂದಿಗೆ ಅಪಾಯದಲ್ಲಿರುವುದನ್ನು ಕಂಡರು. ದೊಡ್ಡ ಚಂಡಮಾರುತವೊಂದು ಅವನು ದಡ ಸೇರುವುದನ್ನು ತಡೆಯುತ್ತಿದ್ದುದಲ್ಲದೆ ನೌಕೆಯೊಡನೆ ಅವನು ಮರಳಿನಲ್ಲಿ ಹೂತುಕೊಂಡು ಬಹಳ ಅಪಾಯದಲ್ಲಿರುವುದನ್ನು ನೋಡಿದರು. ದಡದಿಂದ ಮಧ್ವರು ತಮ್ಮ ಬಟ್ಟೆಯನ್ನು ಗಾಳಿಯಲ್ಲಿ ಬೀಸುತ್ತಾ ನಾವಿಕನು ಕ್ಷೇಮವಾಗಿ ದಡ ಸೇರುವಂತೆಮಾಡಿ ಅವನನ್ನು ಅಪಾಯದಿಂದ ರಕ್ಷಿಸಿದರು. ಕ್ಷೇಮವಾಗಿ ದಡ ಸೇರಿದ ನಾವಿಕನು ಮಧ್ವರಿಗೆ ಬಹಳ ಋಣಿಯಾಗಿ ಅವರಿಗೆ ಒಂದು ಕಾಣಿಕೆಯನ್ನು ನೀಡುವ ತನ್ನ ಬಯಕೆಯನ್ನು ವ್ಯಕ್ತಪಡಿಸಿದನು. ಮಧ್ವರು ಅವನಬೇಡಿಕೆಗೆ ಒಪ್ಪಿ ನೌಕೆಯಲ್ಲಿದ್ದ ಏನೇನೂ ಬೆಲೆಬಾಳದ ಒಂದು ದೊಡ್ಡ ಜೇಡಿಮಣ್ಣಿನ ತುಂಡನ್ನು ಕಾಣಿಕೆಯಾಗಿ ನೀಡೆಂದು ನಾವಿಕನಿಗೆ ಹೇಳಿದರು. ಎಲ್ಲರೂ ಅಚ್ಚರಿಪಡುವಂತೆ ಆ ಜೇಡಿಮಣ್ಣಿನ ಉಂಡೆಯೊಳಗಿಂದ ಕೃಷ್ಣನ ದೊಡ್ಡ ವಿಗ್ರಹವೊಂದು ಪ್ರಕಟವಾಯಿತು. ಈ ಸಮಾಚಾರವು

# ಆಸ್ತಿಕತೆಯ ವಿಕಾಸ

ಉಡುಪಿಯಲ್ಲೆಡೆ ಹರಡಿತು ಮತ್ತು ವಿಗ್ರಹವನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಯಿತು. ಹೀಗೆ ಮಧ್ವರ ಪರಂಪರೆಯು ಉಡುಪಿಯಲ್ಲಿ ಭದ್ರವಾಗಿ ಸ್ಥಾಪಿತವಾಯಿತು ಮತ್ತು ಇಂದಿಗೂ ಮಧ್ವಾಚಾರ್ಯರ ಅನೇಕ ಅನುಯಾಯಿಗಳಿಂದ ಆ ವಿಗ್ರಹವು ಪೂಜಿಸಲ್ಪಡುತ್ತಿದೆ ಮತ್ತು ಸಹಸ್ರಾರು ಜನರು ಪ್ರತಿನಿತ್ಯವೂ ಅದರ ದರುಶನದಿಂದ ಧನ್ಯರಾಗುತ್ತಿದ್ದಾರೆ.

ತರುವಾಯ, ಈ ದಿನಗಳಲ್ಲೂ ಬಹಳ ಕಷ್ಟಕರವಾಗಿರುವ ಬದರಿನಾಥ ಯಾತ್ರೆಗೆ ಮಧ್ವಾಚಾರ್ಯರು ಎರಡನೆಯ ಬಾರಿ ಹೋಗಲು ನಿರ್ಧರಿಸಿದರು. ಅವರು ಮಾಡಿದ ಯಾತ್ರೆಗಳು ಬಹಳ ಯಶಸ್ಸನ್ನು ಕಂಡಿತು ಮತ್ತು ತಾವು ಒಬ್ಬ ಶ್ರೇಷ್ಠ ಪಂಡಿತ ಮತ್ತು ಭಗವದ್ಭಕ್ತನೆಂಬ ಖ್ಯಾತಿಯು ಅವರು ಹೋದೆಡೆಯೆಲ್ಲಾ ಅವರನ್ನು ಹಿಂಬಾಲಿಸಿತು. ಅವರು ಹಿಂದಿರುಗಿದ ನಂತರ ಶಂಕರಚಾರ್ಯರ ಅನುಯಯಿಗಳ ಮುಖ್ಯಕಾರ್ಯಕ್ಷೇತ್ರವಾದ ಶೃಂಗೇರಿಗೂ ಅವರ ಪ್ರಭಾವದ ಸಮಾಚಾರ ತಲುಪಿತು. ನಿಶ್ಚಯವಾಗಿಯೂ, ಮಧ್ವಾಚಾರ್ಯರ ಹೆಚ್ಚುತ್ತಿರುವ ಖ್ಯಾತಿ ಮತ್ತು ಪ್ರಾಬಲ್ಯದ ಕುರಿತು ಮಾತೇ ಶೃಂಗೇರಿಯಲ್ಲಿ ಚರ್ಚೆಯ ಮುಖ್ಯ ವಿಷಯವಾಗಿತ್ತು. ಶೃಂಗೇರಿ ಆಶ್ರಮದ ಮುಖ್ಯಸ್ಥರಾದ ಪದ್ಮ ತೀರ್ಥರು ಮಧ್ವಾಚಾರ್ಯರನ್ನು ಎದುರಿಸುವ ಅಗತ್ಯ ಬಂದಿದೆ ಅಂದುಕೊಂಡರು; ಹೀಗೆ ಅವರು ಮತ್ತು ಪುಂಡರೀಕ ಪುರಿ ಇಬ್ಬರೂ ಮಧ್ವರೊಡನೆ ತತ್ತ್ವಶಾಸ್ತ್ರ ವಿಚಾರ ಕುರಿತು ವಾಗ್ವಾದ ಮಾಡಲು ಉಡುಪಿಗೆ ಬಂದರು. ತಮ್ಮ ಸಿದ್ಧಾಂತದ ಬಗ್ಗೆ ಚರ್ಚಿಸುವ ಮತ್ತು ಅದರ ಶ್ರೇಷ್ಠತೆಯನ್ನು ಸಮರ್ಥಿಸುವ ಅವಕಾಶವನ್ನು ಎಂದೂ ಯಾವ ಕಾರಣಕ್ಕೂ ತಿರಸ್ಕರಿಸದ ಮಧ್ವಾಚಾರ್ಯರು ಆಹ್ವಾನಕ್ಕೆ ಒಪ್ಪಿಕೊಂಡರು.

ಋಗ್ವೇದವನ್ನು ಚರ್ಚೆಯ ವಿಷಯವಾಗಿ ಆರಿಸಿಕೊಳ್ಳಲಾಯಿತು.

# ಮಧ್ವಾಚಾರ್ಯರು

ಪುಂಡರೀಕ ಪುರಿ ಇನ್ನೇನು ಮೊದಲನೆಯ ಶ್ಲೋಕದ ಮೇಲೆ ತಮ್ಮದೇ ಆದ ಅರ್ಥ ವಿವರಣೆಯನ್ನು ನೀಡಲು ಪ್ರಾರಂಭಿಸುತ್ತಿದ್ದಂತೆ ಮಧ್ವರು ಅವರಿಗೆ ಉತ್ತರಿಸಲಾಗದಂತಹ ಪ್ರಶ್ನೆಗಳನ್ನು ಹಾಕಿದರು. ಪದ್ಮ ತೀರ್ಥರು ಪರಿಸ್ಥಿತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರು, ಆದರೆ ಅವರು ಕೂಡಾ ಮಧ್ವರ ಕೈಯಲ್ಲಿ ಗರ್ವಭಂಗವಾಗುವಂತಹ ಹೀನಾಯ ಸೋಲನ್ನು ಅನುಭವಿಸಿದರು.

ಅಂದು ರಾತ್ರಿ ಪದ್ಮ ತೀರ್ಥರು ಮತ್ತು ಅವರ ಬಳಗದವರು ಹೊಟ್ಟೆಕಿಚ್ಚಿನಿಂದ ಮಧ್ವರ ಗ್ರಂಥಾಲಯದಿಂದ ಅನೇಕ ಅಪರೂಪದ ಪುಸ್ತಕಗಳನ್ನು ಅಪಹರಿಸಿದರು. ಗ್ರಂಥಾಲಯದ ಅಧಿಕಾರಿಯಿಂದ ಈ ಸಮಾಚಾರವನ್ನು ತಿಳಿದೊಡನೆಯೇ ಮಧ್ವರು ಕಳ್ಳರನ್ನು ಹುಡುಕಲು ಪ್ರಾರಂಭಿಸಿದರು. ಪದ್ಮ ತೀರ್ಥ ಮತ್ತು ಅವರ ಪಂಗಡದವರನ್ನು ಹಿಡಿಯಲು ಮಂಗಳೂರಿನಿಂದ ೨೦ ಮೈಲಿ ದೂರದಲ್ಲಿ ಆಗ್ನೇಯ ದಿಕ್ಕಿನೆಡೆ ಹೋದರು. ಅಲ್ಲಿಗೆ ತಲುಪುತ್ತಿದ್ದ ಹಾಗೆ ಮಧ್ವರು ತಮ್ಮ ಒಬ್ಬ ದೂತನನ್ನು ಆ ಪ್ರಾಂತ್ಯವನ್ನು ಆಳುತ್ತಿದ್ದ ರಾಜನಾದ ಜಯಸಿಂಹನ ಬಳಿ ಕಳುಹಿಸಿದರು. ಪ್ರತ್ಯುತ್ತರವಾಗಿ ರಾಜನು, ಪುಸ್ತಕಗಳೆಲ್ಲವನ್ನು ಪದ್ಮ ತೀರ್ಥರು ತನಗೆ ಕಾಣಿಕೆಯಾಗಿ ಕೊಟ್ಟಿರುವರೆಂದು ಮಧ್ವರಿಗೆ ತಿಳಿಸಿದನು.

ಮಧ್ವಾಚಾರ್ಯರು ರಾಜನನ್ನು ಭೇಟಿಯಾಗಲು ವಿಷ್ಣುಮಂಗಳಂಗೆ ಬಹಳ ಅದ್ದೂರಿಯಾದ ಮೆರವಣಿಗೆಯೊಂದಿಗೆ ಹೊರಟರು. ಆಕರ್ಶಕ ಸಂತನನ್ನು ಸ್ವಾಗತಿಸಲು ಸಾವಿರಾರು ಜನ ಪ್ರಶಂಸಕರು ಒಟ್ಟು ಸೇರಿದ್ದರು. ವಾದ್ಯವೃಂದಗಳು ಮಧುರವಾದ ಗೀತೆಗಳನ್ನು ನುಡಿಸುತ್ತಿದ್ದವು, ಬ್ರಾಹ್ಮಣರು ವೇದ ಘೋಷಗಳನ್ನು ಉಚ್ಚರಿಸುತ್ತಿದ್ದರು ಮತ್ತು ಅನೇಕ ಜನರು ಗುಂಪುಗಳಲ್ಲಿ ಭಗವಂತನ ನಾಮಗಳನ್ನು

# ಆಸ್ತಿಕತೆಯ ವಿಕಾಸ

ಹಾಡುತ್ತಿದ್ದರು. ಮಧ್ವಾಚಾರ್ಯರು ನಗರದ ಮಧ್ಯ ಭಾಗದಿಂದ ಘನ–ಗಾಂಭೀರ್ಯತೆಯಿಂದ ನಿಧಾನವಾಗಿ ನಡೆಯುತ್ತಿದ್ದರು. ಅವರ ಶರೀರವು ಪ್ರಕಾಶಮಾನವಾಗಿ ಹೊಳೆಯುತ್ತಿತ್ತು, ಮುಖದಲ್ಲಿ ತೇಜಸ್ಸು ಎದ್ದು ಕಾಣುತಿತ್ತು. ಸುಗಂಧ ಭರಿತ ತುಳಸಿ ಹಾರವು ಅವರ ಕುತ್ತಿಗೆಯಿಂದ ಹಿಡಿದು ಮಂಡಿಯವರೆಗೆ ತೂಗಾಡುತಿತ್ತು. ಒಂದು ಸುಂದರವಾದ ಬಿಳಿ ಮುತ್ತಿನ ಬಣ್ಣದ ರೇಷ್ಮೆ ಛತ್ರಿಯು ಅವರ ಶಿರದ ಮೇಲೆ ಹಿಡಿಯಲಾಗಿತ್ತು ಮತ್ತು ಅಸಂಖ್ಯಾತ ಜನ ಸಮೂಹವು ಮಾರ್ಗದ ಎರಡೂ ಬದಿಯಲ್ಲಿ ಪ್ರಸಿದ್ಧ ದಾರ್ಶನಿಕನ ದರ್ಶನ ಪಡೆಯಲು ಸೇರುತ್ತಿತ್ತು.

ಮೆರವಣಿಗೆ ಮುಂದುವರೆಯುತ್ತಿದ್ದ ಹಾಗೆ ರಾಜನು ಮಧ್ವರನ್ನು ಸ್ವಾಗತಿಸಲು ಬಂದನು. ತನ್ನ ಪಲ್ಲಕ್ಕಿಯಿಂದ ಕೆಳಕ್ಕಿಳಿದು ಮಧ್ವಾಚಾರ್ಯರ ಪಾದ ಕಮಲಗಳಿಗೆ ತಲೆ ಬಾಗಿದನು. ನಂತರ ರಾಜನು ಕಾಲ್ನಡಿಗೆಯಲ್ಲಿ ಮಧ್ವರ ಜೊತೆ ದೇವಸ್ಥಾನದವರೆಗೆ ಹೋದನು. ಅಲ್ಲಿ ಮಧ್ವರಿಗೆ ಅದ್ದೂರಿಯಾದ ಆಡಂಬರದ ಸ್ವಾಗತವನ್ನು ಏರ್ಪಡಿಸಲಾಗಿತ್ತು. ಅಲ್ಲಿ ಇಪ್ಪತ್ತೈದು ಹಳ್ಳಿಯ ನೂರಾರು ನಿವಾಸಿಗಳು ಅವರನ್ನು ಸ್ವಾಗತಿಸಲು ಒಟ್ಟು ಸೇರಿದ್ದರು. ಮಧ್ವಾಚಾರ್ಯರು ಮತ್ತು ರಾಜನು ದೊಡ್ಡ ಸಭಾಂಗಣವನ್ನು ಪ್ರವೇಶಿಸಿದರು. ಅಲ್ಲಿ ಸೇರಿದ್ದ ಜನರೆಲ್ಲರೂ ಶ್ರೀಮದ್ ಭಾಗವತದ ಪಠಣವನ್ನು ಮತ್ತು ಅದಕ್ಕೆ ಮಧ್ವರ ವ್ಯಾಖ್ಯಾನವನ್ನು ಕೇಳಲು ಆಸೀನರಾದರು. ಮಹಾನ್ ವಿದ್ವಾಂಸರಾದ ತ್ರಿವಿಕ್ರಮಚಾರ್ಯರೂ ಕೇಳುಗರ ಪೈಕಿ ಒಬ್ಬರಾಗಿದ್ದರು. ಮಧ್ವರನ್ನು ವಾಗ್ವಾದಕ್ಕೆ ಆಹ್ವಾನಿಸಲು ಮತ್ತು ತಪ್ಪು ಹುಡುಕಲು ಸಿದ್ಧರಾಗಿದ್ದರೂ ಮಧ್ವರ ವಿವರಣೆಗಳು ಎಷ್ಟು ತೀಕ್ಷ್ಣ ಮತ್ತು ಪ್ರತಿಭಾಪೂರ್ಣವಾಗಿತ್ತೆಂದರೆ ತ್ರಿವಿಕ್ರಮಚಾರ್ಯರಿಗೆ ಪ್ರವಚನದಲ್ಲಿ ಯಾವುದೇ ತಪ್ಪುಗಳನ್ನು ಕಂಡುಹಿಡಿಯುವ ಸಾಧ್ಯತೆಗಳು ಕಂಡುಬರಲಿಲ್ಲ.

# ಮಧ್ವಾಚಾರ್ಯರು

ರಾಜನಿಂದ ತಮ್ಮ ಗ್ರಂಥಗಳನ್ನು ಮರಳಿ ಪಡೆದ ಮೇಲೆ ಮಧ್ವರು ಅಲ್ಲಿಂದ ತೆರಳಿ ಅಮರಾಲಯದಲ್ಲಿ ತಮ್ಮ ಶಿಬಿರವನ್ನು ಸ್ಥಾಪಿಸಿದರು. ವೇದಾಂತ ಸೂತ್ರದ ತಮ್ಮ ವ್ಯಾಖ್ಯಾನದ ಮೇಲೆ ಪ್ರವಚನಗಳನ್ನು ನೀಡುತ್ತಿರುವ ಸಮಯದಲ್ಲೇ ಅವರಿಗೆ ತ್ರಿವಿಕ್ರಮಚಾರ್ಯರಿಂದ ವಾಗ್ವಾದಕ್ಕೆ ಆಹ್ವಾನ ಬಂದಿತು. ಮಧ್ವರ ಪುಸ್ತಕಗಳು ಕಳವು ಆದ ಸಂದರ್ಭದಲ್ಲಿ ತ್ರಿವಿಕ್ರಮರಿಗೆ ಮಧ್ವರ ವ್ಯಾಖ್ಯಾನಗಳನ್ನು ಓದಿ ತಿಳಿದುಕೊಳ್ಳುವ ಅವಕಾಶ ದೊರೆತಿತ್ತು, ಹೀಗಾಗಿ ಇದುವರೆಗೆ ಮಧ್ವರೊಂದಿಗೆ ವಾದ ಮಾಡಿದವರಿಗೆ ಇಲ್ಲದಿದ್ದ ಒಂದು ಅನುಕೂಲತೆ ತ್ರಿವಿಕ್ರಮರಿಗೆ ಸಿಕ್ಕಿತ್ತು. ಅಷ್ಟೇಅಲ್ಲದೆ ತ್ರಿವಿಕ್ರಮರು ಸಂಸ್ಕೃತಭಾಷೆಯ ಮೇಲೆ ಎಂತಹ ಪ್ರಭುತ್ವವನ್ನು ಹೊಂದಿದ್ದರೆಂದರೆ, ಯಾವದೇ ಒಂದು ಶ್ಲೋಕದ ಅರ್ಥವನ್ನು ತಮ್ಮ ಅವಶ್ಯಕತೆಗೆ ಸರಿಹೊಂದುವ ಹಾಗೆ ವಿವರಿಸುವಷ್ಟು ಸಮರ್ಥ ಪಂಡಿತರು ಅವರಾಗಿದ್ದರು. ಅದಾಗ್ಯೂ ೧೫ ದಿನಗಳ ನಂತರ ಮಧ್ವರು ಕೊನೆಗೂ ತ್ರಿವಿಕ್ರಮಪಂಡಿತರನ್ನು ಪರಾಭವಗೊಳಿಸಿದರು ಮತ್ತು ತ್ರಿವಿಕ್ರಮರು ಈಗ ಮಧ್ವರ ಶಿಷ್ಯರಾದರು.

ಈ ನಡುವೆ ಮಧ್ವಾಚಾರ್ಯರು ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿ ತಮ್ಮ ಎಂಟು ಪ್ರಮುಖ ಶಿಷ್ಯರನ್ನು ಈ ಮಠಗಳಿಗೆ ಮುಖ್ಯ ಅರ್ಚಕರನ್ನಾಗಿ ನೇಮಿಸಿ ಪ್ರಾಚೀನ ವಿಗ್ರಹಗಳ ಜವಾಬ್ದಾರಿಯನ್ನು ವಹಿಸಿದರು. ಅವರು ೭೯ ವರುಷಗಳ ಕಾಲ ಭೂಮಿಯ ಮೇಲಿದ್ದು ೩೭ ಪುಸ್ತಕಗಳನ್ನು ಬರೆದರು.

ಅವರ ಸಿದ್ಧಾಂತವು ಕ್ರೈಸ್ತ ಮತದಿಂದ ಪ್ರಭಾವಿತವಾಗಿದೆ ಎಂದು ಒಂದು ಕಾಲದಲ್ಲಿ ಪಾಶ್ಚಾತ್ಯ ವಿದ್ವಾಂಸರುಗಳು ತಿಳಿದಿದ್ದರು. ಸತ್ಯದಿಂದ ಮುಂದಕ್ಕೆ ಯಾವುದೂ ಇರಲು ಸಾಧ್ಯವಿಲ್ಲ. ಮಧ್ವರು ಸ್ಪಷ್ಟವಾಗಿ ತಮ್ಮ ಸಿದ್ಧಾಂತವನ್ನು ವೈದಿಕ ಸಾಹಿತ್ಯದ ಪ್ರಮಾಣಗಳನ್ನು


# ಆಸ್ತಿಕತೆಯ ವಿಕಾಸ

ನೀಡಿ ನಿರೂಪಿಸಿರುತ್ತಾರೆ ಮತ್ತು ಅವರ ಬೋಧನೆಗಳು ಹಿಂದೆ ರಾಮಾನುಜರು ಪ್ರಸ್ತುತ ಪಡಿಸಿದ ಆಸ್ತಿಕತೆಯ ಚಿಂತನೆಗಳ ಸುಧಾರಿತ ಬೆಳವಣಿಗೆಗಳೆಂಬುದನ್ನು ಮನಗಾಣಬಹುದು.

ಮಧ್ವರು ಗಾಳಿಯನ್ನು ನಿಯಂತ್ರಿಸುವ ದೇವತೆಯಾದ ವಾಯುದೇವನ ಅವತಾರವೆಂದು ಸಾರ್ವತ್ರಿಕವಾಗಿ ಸ್ವಿಕರಿಸಲಾಗಿದೆ. ಅವರು ಒಂದು ಪ್ರತ್ಯೇಕವಾದ ಕಾರ್ಯಸಾಧನೆಗಾಗಿ ಭೂಲೋಕದಲ್ಲಿ ಅವತರಿಸಿದರಾದ್ದರಿಂದ ಅವರು ಅನೇಕ ಅಸಾಧಾರಣ ಕೆಲಸಗಳನ್ನು ಮಾಡಲು ಶಕ್ತರಾಗಿದ್ದರು ಎಂಬ ವಿಚಾರವನ್ನು ಅವರ ಜೀವನವನ್ನು ಸುತ್ತುವರಿದ ಅಸಾಧಾರಣ ಘಟನೆಗಳಿಗೆ ವಿವರಣೆಯಾಗಿ ನೀಡಲಾಗುತ್ತದೆ. ಅಸಾಮಾನ್ಯ ಶಕ್ತಿಸಾಮರ್ಥ್ಯಗಳು, ಆಕಾಶದಲ್ಲಿ ಹಾರಾಡುವುದು, ಎರಡು ವಿವಿಧ ಸಂದರ್ಭಗಳಲ್ಲಿ ಒಂದು ನಿರ್ದಿಷ್ಟವಾದ ರಾಗವನ್ನು ಹಾಡಿ ಬೀಜದಿಂದ ಗಿಡವನ್ನು ಚಿಗುರಿಸುವುದು (ಹೀಗೆ ಗಿಡಗಳು ಸಂಗೀತಕ್ಕೆ ಪ್ರತಿಸ್ಪಂದಿಸುತ್ತವೆ ಎಂದು ಬಹಳ ಕಾಲದ ಹಿಂದೆಯೇ ಪ್ರಮಾಣಿಸಲಾಗಿತ್ತು), ಒಂದೇ ಬಾರಿಗೆ ನಾಲ್ಕು ಸಾವಿರ ಬಾಳೆಹಣ್ಣುಗಳನ್ನು ತಿನ್ನುವುದು ಮತ್ತು ನೂರು ಮಡಿಕೆಗಳಲ್ಲಿದ್ದ ಹಾಲನ್ನು ಕುಡಿಯುವುದು, ಸ್ವಲ್ಪಪ್ರಮಾಣದ ಆಹಾರವನ್ನು ನೂರಾರು ಜನರಿಗೆ ಬಡಿಸುವುದು, ಬದರಿನಾಥನಲ್ಲಿ ವ್ಯಾಸದೇವರನ್ನು ಭೇಟಿಯಾಗುವುದು ಮೊದಲಾದವು ಅವರ ಅಸಾಧಾರಣ ಶಕ್ತಿಯ ಕೆಲವು ದೃಷ್ಟಾಂತಗಳು. ಆಧ್ಯಾತ್ಮಿಕ ಸಿದ್ಧಾಂತ ಮತ್ತು ಭಗವದ್ಭಕ್ತಿಯ ಕ್ಷೇತ್ರಕ್ಕೆ ಅವರು ನೀಡಿದ ಪ್ರಮುಖ ಕೊಡುಗೆಗಳನ್ನು ಒತ್ತಿಹೇಳುವುದು ನಮ್ಮ ಮೂಲ ಧ್ಯೇಯವಾಗಿರುವುದರಿಂದ ಅವರು ಪ್ರಕಟಿಸಿದ ಇನ್ನೂ ಅನೇಕ ಅದ್ಭುತಗಳನ್ನು ಇಲ್ಲಿ ವಿವರಿಸಲಾಗಿಲ್ಲ. ದ್ವೈತವಾದದ ಬಗೆಗಿನ ಅವರ ತಾತ್ವಿಕ ಮಿಮಾಂಸೆಯನ್ನು ಸ್ಥಳಾವಕಾಶದ ಕೊರತೆಯಿಂದ ಇಲ್ಲಿ ಸುವಿಸ್ತಾರವಾಗಿ ಪರಿಚಯಿಸಲು ಸಾಧ್ಯವಾಗುತ್ತಿಲ್ಲ. ಆಸಕ್ತಿಯುಳ್ಳವರು

# ಮಧ್ವಾಚಾರ್ಯರು

ಮಧ್ವರ ಬೋಧನೆಗಳನ್ನು ಮತ್ತು ಅವರ ವೇದಾಂತ ಸೂತ್ರದ ಮೇಲಿನ ಮೀಮಾಂಸೆಯನ್ನು ತಾವೇ ಓದಿ ತಿಳಿಯಬಹುದು. ಶಂಕರ, ರಾಮಾನುಜ ಮತ್ತು ಮಧ್ವರ ವೇದಾಂತದ ಮೇಲಿನ ವ್ಯಾಖ್ಯಾನಗಳ ತುಲನಾತ್ಮಕ ಅಧ್ಯಯನದಿಂದ ಒಬ್ಬ ನಿಷ್ಠಾವಂತ ಶೋಧಕನಿಗೆ ಪರಾತ್ಪರ ಸತ್ಯದ ಸ್ವಭಾವದ ಕುರಿತು ಬಹಳಷ್ಟು ವಿಚಾರಗಳು ವೈದಿಕ ಸಾಹಿತ್ಯದಲ್ಲಿ ವಿವರಿಸಿದಂತೆ ಪ್ರಕಟವಾಗುತ್ತವೆ.



# ಭಾಗ ಐದು
# ಶ್ರೀ ಚೈತನ್ಯ

## ಮಹಾಪ್ರಭು – ಮಹಾನ್‌ಆಚಾರ್ಯ

ಪ್ರಾಚೀನ ಕಾಲದಿಂದಲೂ ಭಾರತದ ಪುಣ್ಯಪುರುಷರು ಪರಮ ಸತ್ಯವನ್ನು ಅಧ್ಯಾತ್ಮಿಕ ಜ್ಞಾನದ ಸಂಸ್ಕಾರದ ಮೂಲಕ ಅರಿಯಲು ಪ್ರಯತ್ನಿಸಿದ್ದಾರೆ. ಇಂತಹವರಲ್ಲಿ ಅನೇಕ ಸಂತರು ಮತ್ತು ಋಷಿಗಳು ಅಧ್ಯಾತ್ಮಿಕ ಚಟುವಟಿಕೆಗಳಿಗೆ ಮತ್ತು ವಿಧ್ಯುಕ್ತ ಧರ್ಮಾಚರಣೆಗಳಿಗೆ ತಮ್ಮ ಸಂಪೂರ್ಣ ಜೀವನವನ್ನೇ ಅರ್ಪಿಸಿದ್ದಾರೆ.

ಕೆಲವರು ನಿರ್ವಾಣವನ್ನು ಜೀವನದ ಅಂತಿಮ ಗುರಿಯಾಗಿ ಸ್ವೀಕರಿಸಿ, ಅಹಿಂಸೆಯ ಮಾರ್ಗವನ್ನು ಆಚರಿಸುತ್ತ ನಿರ್ವಾಣದ ಅನ್ವೇಷಣೆಯಲ್ಲಿ ಬುದ್ಧನನ್ನು ಅನುಸರಿಸಿದರೆ, ತಮ್ಮ ಕರ್ಮಗಳನ್ನು ತ್ಯಾಗಮಾಡಿ ಆತ್ಮಸಾಕ್ಷಾತ್ಕಾರವನ್ನು ಪಡೆಯಬಯಸಿದ ಇನ್ನು ಕೆಲವು ಅದ್ವೈತ ವೇದಾಂತಿಗಳು ಶಂಕರಾಚಾರ್ಯರನ್ನು ಅನುಸರಿಸಿ, ಇಂದ್ರಿಯ ನಿಗ್ರಹದ ಆಚರಣೆಯಿಂದ, ವೈಯಕ್ತಿಕ ಅಹಮನ್ನು ಏಕತೆಯ ಪರಮ ಸ್ಥಿತಿಯಾದ ಬ್ರಹ್ಮನ್‌ನಲ್ಲಿ ಐಕ್ಯಗೊಳಿಸಿ ತಮ್ಮ ಮನಸ್ಸನ್ನು ಧ್ಯಾನದಲ್ಲಿ ಸ್ಥಿರವಾಗಿಸಿದರು. ಅಲೌಕಿಕ ಆಸ್ತಿಕತೆಯ ಪರ ಬೆಳವಣಿಗೆಯಲ್ಲಿ ರಾಮಾನುಜ ಮತ್ತು ಮಧ್ವರ ಭಕ್ತಿ ಮಾರ್ಗವನ್ನು ಅನುಸರಿಸಿದವರು, ತಾನು ಭಗವಂತನ ನಿತ್ಯ ಸೇವಕನೆಂಬ ತಿಳುವಳಿಕೆಯೇ ಜೀವನದ ಪರಮ ಗುರಿ ಎಂದು ಪರಿಗಣಿಸಿದರು. ಈ ಎಲ್ಲ ಆಧ್ಯಾತಮಿಕವಾದಿಗಳು ತಂತಮ್ಮ ತಿಳುವಳಿಕೆಯ ಮತ್ತು ಅನುಭವದ ಗೌರವಾನ್ವಿತ ಹಂತಗಳನ್ನು ದೃಢವಾದ ಮತ್ತು ಪ್ರಾಮಾಣಿಕವಾದ ಸಂಕಲ್ಪದಿಂದ ಪಡೆದರು.

# ಆಸ್ತಿಕತೆಯ ವಿಕಾಸ

ರಾಮಾನುಜ ಮತ್ತು ಮಧ್ವರು ವೇದಾಂತಿಕ ಹಿನ್ನೆಲೆಯ ವಿಚಾರಧಾರೆಗಳನ್ನೊಳಗೊಂಡ(ಶಂಕರರ ಮಾಯಾವಾದದ ವಿರುದ್ಧವಾಗಿ) ಆಸ್ತಿಕಪರಂಪರೆಯನ್ನು ಸ್ಥಾಪಿಸಿದರು. ಅದಾಗ್ಯೂ ಶ್ರೀ ಚೈತನ್ಯ ಮಹಾಪ್ರಭುಗಳ ಆಗಮನದ ವರೆಗೆ ವೇದಾಂತಿಕ ಆಸ್ತಿಕತೆಯ ಪರಿಮಿತಿಗಳು ಆಧ್ಯಾತ್ಮಾನ್ವೇಷಕರ ಪ್ರಪಂಚಕ್ಕೆ ಅನಾವರಣಗೊಂಡಿರಲಿಲ್ಲ. ಮಾಹಾಪ್ರಭುಗಳು ಪರಾತ್ಪರಸತ್ಯದ ಗೌಪ್ಯ ಮತ್ತು ಉದಾತ್ತ ಲಕ್ಷಣಗಳಾದ, ಅಚಿಂತ್ಯ–ಭೇದಾಭೇದ(ಏಕಕಾಲಿಕ ಊಹಾತೀತ ಸಮಾನತೆ ಮತ್ತು ಭಿನ್ನತೆಯ)ತತ್ವ ಮತ್ತು ಪ್ರೇಮ (ಭಗವತ್ಪ್ರೇಮ)ವನ್ನು ಪ್ರಕಟಗೊಳಿಸಿದರು.

ಶ್ರೀ ಚೈತನ್ಯರು ಫೆಬ್ರವರಿ ೧೮, ೧೪೮೬ನೇ ಇಸವಿಯಲ್ಲಿ ಪಶ್ಚಿಮ ಬಂಗಾಲದ ನವದ್ವೀಪ ಧಾಮದ ಮಾಯಾಪುರದಲ್ಲಿ ವೈಷ್ಣವ ಸಮಾಜದ ಬ್ರಾಹ್ಮಣ ಪಂಡಿತರಾಗಿದ್ದ ಜಗನ್ನಾಥ ಮಿಶ್ರರ ಮನೆಯಲ್ಲಿ ಅವತರಿಸಿದರು. ಅವರ ಆಗಮನದ ಸಮಯದಲ್ಲಿ ಚಂದ್ರನಿಗೆ ಗ್ರಹಣವಿದ್ದುದರಿಂದ ನವದ್ವೀಪ ಧಾಮದ ಎಲ್ಲ ಗೌರವಾನ್ವಿತ ನಿವಾಸಿಗಳು ಗಂಗಾ ನದಿಯಲ್ಲಿ ಸ್ನಾನ ಮಾಡಲು ಹೋಗಿದ್ದರು. ಅಂದಿನ ಪದ್ಧತಿಯ ಪ್ರಕಾರ ಅವರೆಲ್ಲರೂ ಸ್ನಾನದ ಸಮಯದಲ್ಲಿ ವೇದ ಮಂತ್ರಗಳನ್ನು ಪಠಿಸುತ್ತಾ, ಭಗವಂತನ ನಾಮಗಳನ್ನು ಜಪಿಸಿತ್ತಾ ಸಂತೋಷಭಾವದಿಂದಿದ್ದರು. ಈ ಮಂತ್ರಗಳ ಜಪದಿಂದ ವಾತಾವರಣವು ಅಧ್ಯಾತ್ಮಿಕ ಕಂಪನಗಳಿಂದ ತುಂಬಿಗೊಂಡಿತ್ತು ಮತ್ತು ಅದೇ ಶುಭ ವೇಳೆಯಲ್ಲಿ ಸ್ವಯಮ್ ಮಹಾಪ್ರಭುಗಳ ಆವಿರ್ಭಾವವಾಯಿತು.

ಶ್ರೀ ಚೈತನ್ಯರ ಜೀವನವು ಇತಿಹಾಸಕಾರರು, ವಿದ್ವಾಂಸರು ಮತ್ತು ಭಕ್ತರಿಂದ ಸಮಾನ ರೀತಿಯಲ್ಲಿ ಬಣ್ಣಿಸಲ್ಪಟ್ಟಿದೆ. ಪ್ರಸಿದ್ಧ ವರ್ಣನೆಗಳ ಪ್ರಕಾರ ಶ್ರೀ ಚೈತನ್ಯರು ತಮ್ಮ ಯೌವನದ ಉಚ್ಛ್ರಾಯ ಸ್ಥಿತಿಯಲ್ಲಿ

# ಶ್ರೀ ಚೈತನ್ಯ

ಸಂನ್ಯಾಸವನ್ನು ಸ್ವೀಕರಿಸಿ, ಭಾರತದೇಶವನ್ನು ಭಗವಂತನ ದಿವ್ಯ ನಾಮಗಳಿಂದ ಕೇಂದ್ರಿಕೃತ ಭಕ್ತಿಯ ಪುನರುಜ್ಜೀವನದೆಡೆಗೆ ನಿರ್ದೇಶಿಸಿದ ಮಹಾತ್ಮರು. ಇದು ಖಂಡಿತವಾಗಿಯು ಸತ್ಯ, ಆದಾಗ್ಯೂ, ಶ್ರೀ ಚೈತನ್ಯರ ಜೀವನದ ಕುರಿತು ಮತ್ತೊಂದು ಬಹಳ ರಹಸ್ಯವಾಗಿರುವ ಮತ್ತು ಅಧ್ಯಾತ್ಮಿಕವಾಗಿರುವ ವಿವರಣೆಯಿದೆ. ಆ ವಿವರಣೆಯು ನಮಗೆ ಮಾಯೆಯೆಂದು ಕರೆಯಲ್ಪಡುವ ಐಹಿಕ ಅನುಭವಗಳಿಂದ ಅವೃತನಾಗದ ಹಾಗೂ ಅವುಗಳಿಗೆ ಬದ್ಧನಾಗದ ಒಬ್ಬ ಆತ್ಮ ಸಾಕ್ಷಾತ್ಕಾರ ಹೊಂದಿರುವ ವ್ಯಕ್ತಿಯ ಮೂಲಕ ಬರುತ್ತದೆ. ದಿವ್ಯದರ್ಶನದ ಮೂಲಕ ಪರಮ ಸತ್ಯವನ್ನು ನೇರವಾಗಿ ಅನುಭವಿಸಿರುವವರನ್ನು, ಮತ್ತು ಎಲ್ಲ ಜನರ ಹಿತಕ್ಕಾಗಿ ಜಡ ಮತ್ತು ಜೀವದ ಮಧ್ಯೆ ಇರುವ ಭೇದವನ್ನು ಗುರುತಿಸಬಲ್ಲವರನ್ನು ಆತ್ಮ ಸಾಕ್ಷಾತ್ಕಾರ ಹೊಂದಿದವರೆಂದು ಪರಿಗಣಿಸಬಹುದು. ಶ್ರೀ ಚೈತನ್ಯ ಮಹಾಪ್ರಭುಗಳಂತಹ ಮಹಾಪುರುಷರ ವ್ಯಕ್ತಿತ್ವದ ಮೇಲೆ ಆತ್ಮ ಸಾಕ್ಷಾತ್ಕಾರ ಹೊಂದಿದ ವ್ಯಕ್ತಿಯ ಒಳನೋಟವು ಒಬ್ಬ ವಿದ್ವಾಂಸನ ಮತ್ತು ಇತಿಹಾಸಕಾರನ ಅಭಿಪ್ರಾಯಗಳಿಗಿಂತ ಶ್ರೇಷ್ಠವಾದದ್ದು ಏಕೆಂದರೆ ಆತ್ಮ ಸಾಕ್ಷಾತ್ಕಾರ ಪಡೆದುಕೊಂಡ ವ್ಯಕ್ತಿಯು ಮಾಯೆಯ ನಾಲ್ಕು ಕೊರತೆಗಳಾದ ಭ್ರಮೆ, ವಂಚನೆ, ಪ್ರಮಾದ ಮತ್ತು ದೋಷಯುಕ್ತ ಇಂದ್ರಿಯಗಳಿಗೆ ಅತೀತನಾಗಿರುತ್ತಾನೆ. ವಿದ್ವಾಂಸರು ಮಹಾಪ್ರಭುಗಳ ಜೀವನದ ಐತಿಹಾಸಿಕ ಘಟನೆಗಳ ಬಗ್ಗೆ ಸರಿಯಾದ ಮಾಹಿತಿಗಳನ್ನು ನೀಡಿರುವರಾದರೂ, ಲೌಕಿಕತೆಯ ಲವಲೇಶ ಛಾಯೆಯೂ ಇಲ್ಲದ ಮಹಾಪ್ರಭುಗಳ ಅಲೌಕಿಕವಾದ ಆಂತರಿಕ ವ್ಯಕ್ತಿತ್ವವನ್ನು ಕಂಡುಹಿಡಿಯುವಲ್ಲಿ ಅಸಮರ್ಥರಾಗಿದ್ದಾರೆ.

ಮಹಾಪ್ರಭುಗಳ ಆವಿರ್ಭಾವದ ರಹಸ್ಯಮಯ ವರ್ಣನೆಯು ಒಂದು ಆಂತರಿಕ ವಿಶ್ಲೇಷಣೆಯೊಳಗೆ ಕಂಡುಬಂದಿದೆ ಮತ್ತು ಆಸ್ತಿಕತೆಯ ಪರಕಾಷ್ಠೆ ಎಂದು ಪರಿಗಣಿಸಲಾಗುವ ಅವರ ಬೋಧನೆಯು

# ಆಸ್ತಿಕತೆಯ ವಿಕಾಸ

ಇದೇ ವಿಶ್ಲೇಷಣೆಯ ಹಿನ್ನೆಲೆಯನ್ನು ಹೊಂದಿದೆ. ಈ ವಿಚಾರದ ಸಂಪ್ರದಾಯದೊಳಗೆ, ಕಾಲ ಮತ್ತು ಅವಕಾಶಗಳ ಜಗತ್ತಿನ ದ್ವಂದ್ವಗಳನ್ನು ಮೀರಿ, ಒಬ್ಬ ವ್ಯಕ್ತಿಗತ ದೇವರ ಜೊತೆಗಿನ ನಿಕಟ ಸಂಬಂಧ ಹೊಂದುವ ಪ್ರತೀಕ್ಷೆಯು, ಭಕ್ತಿಯುಳ್ಳ ಜನರನ್ನು ಅತ್ಯಾನಂದದ ಭಾವಪರವಶತೆಗೆ ಕೊಂಡೊಯ್ಯುವ ಪ್ರೇಮಪೂರ್ವಕ ಪರಿಶ್ರಮದಲ್ಲಿ ಪಾಲ್ಗೊಳ್ಳಲು ಆಹ್ವಾನಿಸುತ್ತದೆ.

ಹದಿನಾರನೇ ಶತಮಾನದಲ್ಲಿ ಕೃಷ್ಣದಾಸ ಕವಿರಾಜ ಗೋಸ್ವಾಮಿ ಎಂಬ ಮಹಾತ್ಮರಿಂದ ಬಂಗಾಲ ಭಾಷೆಯಲ್ಲಿ ರಚಿಸಲ್ಪಟ್ಟ "ಚೈತನ್ಯ ಚರಿತಾಮೃತ"ವೆಂಬ ಶ್ರೇಷ್ಠ ಗ್ರಂಥವು, ಶ್ರೀ ಚೈತನ್ಯರ ಅನುಯಾಗಳೆಲ್ಲರಿಂದ ಸ್ವೀಕೃತವಾದ, ಅವರ ಆಂತರಿಕ ವ್ಯಕ್ತಿತ್ವವನ್ನು ಬಹಿರಂಗಪಡಿಸುತ್ತದೆ. ೧೭ ಸಂಪುಟಗಳನ್ನೊಳಗೊಂಡ ಈ ಗ್ರಂಥದಲ್ಲಿ ಲೇಖಕರು ಮಹಾಪ್ರಭುಗಳನ್ನು ತನ್ನ ಭಕ್ತನ ರೂಪದಲ್ಲಿ ತಾನೇ ಸ್ವತ: ಅವತರಿಸಿದ, ಪರಾತ್ಪರಸತ್ಯನಾದ ಸಾಕ್ಷಾತ್ ಪರಮಪುರುಷನು ಎಂದು ವರ್ಣಿಸಿದ್ದಾರೆ.

ಉಪನಿಷತ್ತುಗಳು ವರ್ಣಿಸುವ ನಿರಾಕಾರ ಬ್ರಹ್ಮನ್ ಎಂಬುದು ಮಹಾಪ್ರಭುಗಳ ದಿವ್ಯ ಶರೀರದ ಕಾಂತಿ ಮತ್ತು ಎಲ್ಲಜೀವಾತ್ಮರ ಹೃದಯಗಳಲ್ಲಿ ನೆಲೆಸಿರುವ ಪರಮಾತ್ಮನು ಜೀವಾತ್ಮನೊಂದಿಗಿರುವ ಪರಮಪ್ರಭುವಿನ ಪ್ರತಿನಿಧಿಯು. ಮಹಾಪ್ರಭುಗಳು ಷಡೈಶ್ವರ್ಯಗಳಲ್ಲಿ ಪರಿಪೂರ್ಣರಾದ ಸಾಕ್ಷಾತ್ ಪರಬ್ರಹ್ಮ, ಸ್ವಯಮ್ ಶ್ರೀಕೃಷ್ಣನೇ ಆಗಿರುವರು. ಅವರೇ ಪರಾತ್ಪರಸತ್ಯ, ಪರತತ್ವ ಮತ್ತು ಇವರಿಗೆ ಸಮನಾದ ಅಥವಾ ಇವರನ್ನು ಮೀರಿದ ಇನ್ಯಾವ ಸತ್ಯವೂ ಅಸ್ತಿತ್ವದಲ್ಲಿಲ್ಲ ಎಂದು ಕೃಷ್ಣದಾಸ ಕವಿರಾಜರು ಹೇಳುತ್ತಾರೆ

# ಶ್ರೀ ಚೈತನ್ಯ

ಮಹಾಪ್ರಭುಗಳು ತನ್ನ ಪೂರ್ಣರೂಪದಲ್ಲಿರುವ ಪರಮ ಸತ್ಯದ ಸಾಕಾರ ಪ್ರಕಟಿತರೂಪವೆಂದು ಕೃಷ್ಣದಾಸರು ಒತ್ತಿಹೇಳುತ್ತಾರೆ ಮತ್ತು ಮಹಾಪ್ರಭುಗಳ ಜೀವನ ಮತ್ತು ಬೋಧನೆಗಳ ರಹಸ್ಯತಮವಾದ ಸ್ವಭಾವ ಮತ್ತು ಅಂತರಾರ್ಥದ ಅರಿವಿಗೆ ಪ್ರವೇಶ ಪಡೆಯಲು ಮಹಾಪ್ರಭುಗಳನ್ನು ಈ ರೀತಿಯಾಗಿ ಆದರಿಸಬೇಕೆಂದು ಓದುಗರನ್ನು ಒತ್ತಾಯಪೂರ್ವಕವಾಗಿ ಪ್ರೇರೇಪಿಸುತ್ತಾರೆ.

ವೇದಗಳಲ್ಲಿ ನಾಲ್ಕು ಯುಗಗಳನ್ನು ವರ್ಣಿಸಲಾಗಿದೆ. ಈ ನಾಲ್ಕು ಯುಗಗಳ ನಿರಂತರ ಕಾಲ ಚಕ್ರದಲ್ಲಿ ಕೊನೆಯದಾಗಿ ಬರುವುದೇ ಮೋಸ ವಂಚನೆಗಳಿಂದ ಕೂಡಿದಕಲಹಗಳ(ತಾಂತ್ರಿಕತೆ ಮತ್ತು ಉದ್ಯಮಗಳನ್ನು ಬೆಂಬಲಿಸುವ ಕಬ್ಬಿಣದ) ಯುಗ. ಪ್ರತಿಯೊಂದು ಯುಗಕ್ಕೂ ಆಯಾಯಾ ಯುಗಕ್ಕನುಗುಣವಾಗಿ ಶಿಫಾರಸುಮಾಡಲ್ಪಟ್ಟ ಆಧ್ಯಾತ್ಮಿಕ ತತ್ವಗಳನ್ನು ಬೋಧಿಸುವ ಒಂದು ಪ್ರತ್ಯೇಕ(ಯುಗಧರ್ಮ) ಅವತಾರವಿರುತ್ತದೆ. ವೈದಿಕ ಸಾಹಿತ್ಯದುದ್ದಕ್ಕೂ ವರ್ಣಿಸಿರುವಂತೆ ಮಹಾಪ್ರಭುಗಳು ಕ ಲಿಯುಗದಪ್ರತ್ಯೇಕ(ಯುಗಧರ್ಮ)ಅವತಾರ ಎಂದು ಕೃಷ್ಣದಾಸರು ಪುಷ್ಟೀಕರಿಸುತ್ತಾರೆ.

ಕೃಷ್ಣ–ವರ್ಣಂ ತ್ವಿಷಾಕೃಷ್ಣಂ
ಸಾಂಗೋಪಾಂಗಾಸ್ತ್ರ ಪಾರ್ಶದಂ
ಯಜ್ಞೈಃ ಸಂಕೀರ್ತನ ಪ್ರಾಯೈಃ
ಯಜಂತಿ ಹಿ ಸುಮೇಧ ಸಃ

“ ಕಲಿಯುಗದಲ್ಲಿ ಸಾಕಷ್ಟು ಬುದ್ಧಿಯುಳ್ಳವರು, ತನ್ನ ಸಂಗಾತಿಗಳೊಡನೆ ಅವತರಿಸಿರುವ ಭಗವಂತನನ್ನು ಸಂಕೀರ್ತನ ಯಜ್ಞದ ಮೂಲಕ ಪೂಜಿಸುತ್ತಾರೆ”(ಶ್ರೀಮದ್ ಭಾಗತಮ್ ೧೧.೫.೩೨)

# ಆಸ್ತಿಕತೆಯ ವಿಕಾಸ

"ಪರಬ್ರಹ್ಮನ ಸಾಕಾರರೂಪವನ್ನು ಕಟ್ಟಕಡೆಯ ವಿಚಾರವನ್ನಾಗಿಸುವುದು, ನಿತ್ಯ ಭಕ್ತಿಯನ್ನು ಸಾಧ್ಯವಾಗಿಸುವುದು ಮತ್ತು ಮಹಾಪ್ರಭುವೇ ಆ ದಿವ್ಯ ಪುರುಷ" ಎಂಬುದು ಗೌಡೀಯ ವೈಷ್ಣವ ಸಿದ್ಧಾಂತಕ್ಕೆ ಶ್ರೇಷ್ಠವು.

ಈ ಐಹಿಕ ಜಗತ್ತಿನಲ್ಲಿ ಮಹಾಪ್ರಭುಗಳ ಆವಿರ್ಭಾವವು ಪರಮ ಪುರುಷನ ಸ್ವಭಾವದಲ್ಲಿ ವಾಸ್ತವವಾಗಿ ಅಂತರ್ಗತವಾಗಿರುವ ಒಂದು ದಿವ್ಯ ಜಿಜ್ಞಾಸೆಯ ಪರಾಕಾಷ್ಠೆ. ಪರಬ್ರಹ್ಮನು ರಸ ಅಥವಾ ಕೇಂದ್ರೀಕೃತ ಆನಂದದ ಸಾರ. ಅಂತಹ ಪರಮಾನಂದದ ರೂಪವೇ ಶ್ರೀ ಕೃಷ್ಣನದು. ಈ ರೂಪವು ಕ್ರಿಯಾತ್ಮಕವಾಗಿರುವುದು, ಕಾಂತಿಯುತಗಿರುವುದು, ಅವಿಶ್ರಾಂತವಾಗಿರುವುದು, ಎಂದಿಗೂ ಪ್ರವಹಿಸುತ್ತಿರುವುದು ಮತ್ತು ವೃದ್ಧಿಸುತ್ತಿರುವುದು. ಅದು ಅಚ್ಚರಿ ಮೂಡಿಸುವಂತೆ ನೂತನವಾಗಿರುವುದು ಮತ್ತು ಆನಂದದಾಯಕವಾದುದು. ಪ್ರತಿ ಕ್ಷಣವೂ ತನ್ನನ್ನೂ ಮೀರಿದ ರಸ ಪ್ರಜ್ಞೆಯ ಹೊಸ ಮಟ್ಟಗಳಿಗೆ ಹಾದುಹೋಗುತ್ತಿರುವುದು. ರಸ ಅಥವಾ ಪ್ರೇಮದೊಳಗೆ ದಿವ್ಯಾನಂದದ ರುಚಿಯನ್ನು ಆಸ್ವಾದಿಸಬಲ್ಲ ರಸಿಕ ಇರಲೇಬೇಕು. ಹಾಗಾಗಿ ಕೃಷ್ಣನಲ್ಲಿರುವ ರಸ ಮತ್ತು ರಸಿಕರ ಐಕ್ಯತೆಯು ದ್ವಿವಿಧವಾಗಿ ಭೇದಗೊಂಡು ರಾಧಾ ಕೃಷ್ಣರ ರೂಪದಲ್ಲಿ ಹೊರಹೊಮ್ಮುತ್ತದೆ. ಈ ದ್ವಿವಿಧತೆಯಲ್ಲಿ ಕೃಷ್ಣನು ಸ್ವಾದಿಸಲ್ಪಡುವ ಅತ್ಯುತ್ತಮ ರಸವಾಗಿರುವನು ಮತ್ತು ರಾಧಾ ರಸವನ್ನು ಆಸ್ವಾದಿಸುವ ಅತಿ ಶ್ರೇಷ್ಠ ರಸಿಕಳು. ರಾಧಾ ಮತ್ತು ಕೃಷ್ಣ (ಶಕ್ತಿ ಮತ್ತು ಶಕ್ತಿಯುಳ್ಳವ) ರು ಒಬ್ಬರಿನ್ನೊಬ್ಬರ ಪ್ರೇಮದಲ್ಲಿ ಸಂಪೂರ್ಣವಾಗಿ ವಿಲೀನವಾಗಿ, ಪ್ರೇಮ–ವಿಲಾಸ–ವಿವರ್ತ ಎಂದು ಕರೆಯಲ್ಪಡುವ ದಿವ್ಯ ಪ್ರೇಮದ ಅತ್ಯುನ್ನತ ಸ್ಥಿತಿಯನ್ನು ತಲುಪಿದಾಗ, ರಾಧಾ ಮತ್ತು ಕೃಷ್ಣರ ದಿವ್ಯ ದ್ವಿರೂಪವು ಏಕೀಭವಿಸುತ್ತದೆ. ಈ ಏಕಭಾವವೇ ಶ್ರೀ ಚೈತನ್ಯ ಮಹಾಪ್ರಭುಗಳು.

# ಶ್ರೀ ಚೈತನ್ಯ

ಹಾಗೆಂದು, ರಾಧಾ ಮತ್ತು ಕೃಷ್ಣರ ನಡುವಿನ ಪ್ರೇಮದ ಈ ಮಿಲನವು ಅದ್ವೈತ ಸಿದ್ಧಾಂತ ಸೂಚಿಸುವಹಾಗೆ ನಿರಾಕಾರ ಬ್ರಹ್ಮದ ಭಗವಂತನಲ್ಲಿ ಒಂದಾಗುವ ಐಕ್ಯತೆಯನ್ನು ಅಥವಾ ದೇವರ ಬಗೆಗಿನ ಆಧುನಿಕ ಕಲ್ಪನೆಯಂತೆ ದೇವರು ಎಂಬುದು ಒಂದು ಅನುಭವ ಮತ್ತು ಭಕ್ತ ಅಥವಾ ಸಾಧಕನ ಪ್ರತ್ಯೇಕತೆಯ ನಾಶವು, ಪೂರ್ಣ ಮತ್ತು ಬದಲಾಯಿಸಲಾಗದಂತಹದೆಂದು ಸೂಚಿಸುವುದಿಲ್ಲ. ಅದು ಒಂದು ಕಬ್ಬಿಣದ ಸಲಾಕೆ ಮತ್ತು ಬೆಂಕಿಯ ನಡುವಿನ ಮಿಲನದ ಹಾಗೆ. ಅವರಿಬ್ಬರ ಪ್ರೇಮ ಮಿಲನವು, ಒಂದು ಕಬ್ಬಿಣದ ತುಂಡನ್ನು ದೀರ್ಘ ಕಾಲ ಬೆಂಕಿಯೊಳಗಿಟ್ಟಾಗ ಅದು ಹೇಗೆ ಬೆಂಕಿಯಂತೆ ಕೆಂಪಗಾಗಿ ಅದರ ಪ್ರತಿಯೊಂದು ಭಾಗವೂ ಬೆಂಕಿಯ ಗುಣಲಕ್ಷಣಗಳನ್ನು ಗಳಿಸಿ ಆದಾಗ್ಯೂ ಕಬ್ಬಿಣ ಕಬ್ಬಿಣವಾಗಿಯೇ ಉಳಿದು ಮತ್ತು ಬೆಂಕಿ ಬೆಂಕಿಯಾಗಿಯೇ ಉಳಿದು ಎರಡೂ ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳುವುದಿಲ್ಲವೋ ಹಾಗೆ, ಕೃಷ್ಣ ಮತ್ತು ರಾಧಾ ಇಬ್ಬರಿಗೂ ಪ್ರತ್ಯೇಕ ವ್ಯಕ್ತಿತ್ವವಿರುತ್ತದೆ. ಅವರು ಒಬ್ಬರಿನ್ನೊಬ್ಬ ಪ್ರೀತಿಯಲ್ಲಿ ಎಷ್ಟರಮಟ್ಟಿಗೆ ಮಗ್ನರಾಗಿರುತ್ತಾರೆ ಮತ್ತು ಒಬ್ಬರಿನ್ನೊಬ್ಬರ ಭಾವನೆಗಳಲ್ಲಿ ಎಷ್ಟರಮಟ್ಟಿಗೆ ಕಳೆದುಹೋಗುತ್ತಾರೆಂದರೆ ಅವರ ಹೃದಯಗಳಲ್ಲಿ ಬೇರೆ ಇನ್ಯಾವ ಭಾವನೆಗಳಿಗೂ ಅವಕಾಶವಿರುವುಲ್ಲ. ಈ ಮಿಲನದ ತತ್ತ್ವ ಅಥವಾ ವ್ಯಕ್ತಿಗತವಾತ ರೂಪವೇ ಶ್ರೀ ಚೈತನ್ಯ ಮಹಾಪ್ರಭುಗಳು. ಹಾಗಾಗಿ ಈ ಜಗತ್ತಿನಲ್ಲಿ ಮಾಯಾಪುರದಲ್ಲಿ ಜರುಗಿದ ಮಹಾಪ್ರಭುಗಳ ಜನನವು ಒಂದು ಸಾಮಾನ್ಯ ಮಗುವಿನ ಜನನದಂತಲ್ಲದೇ ಒಂದು ದಿವ್ಯ ಅವತಾರದ ಸ್ವಭಾವದ್ದಾಗಿತ್ತು

ಮಹಾಪ್ರಭುಗಳ ಜನನದ ನಂತರ ಹಳ್ಳಿಯ ಎಲ್ಲ ಸ್ತ್ರೀಯರು ಪ್ರತಿ ದಿನ ಅವರನ್ನು ನೋಡಲು ಹಂಬಲಿಸುತ್ತಿದ್ದರು. ಪ್ರಸಿದ್ಧ ಜ್ಯೋತಿಷಿಯಾಗಿದ್ದ

# ಆಸ್ತಿಕತೆಯ ವಿಕಾಸ

ಅವರ ಚಿಕ್ಕಪ್ಪ, ಮುಂಬರುವ ಕಾಲದಲ್ಲಿ ಮಗುವು ಒಬ್ಬ ದೊಡ್ಡ ವ್ಯಕ್ತಿಯಾಗಿ ಗುರುತಿಸಲ್ಪಡುವನು ಎಂದು ಭವಿಷ್ಯ ನುಡಿದಿದ್ದರು ಮತ್ತು ಮಗುವಿಗೆ ವಿಶ್ವಂಭರ(ವಿಶ್ವವನ್ನು ಸಂರಕ್ಷಿಸುವವ)ನೆಂದು ನಾಮಕರಣ ಮಾಡಿದರು. ಮಹಾಪ್ರಭುಗಳು ಜನಿಸಿದ ಸ್ಥಳದ ಹತ್ತಿರ ಒಂದು ಬೇವಿನ ಮರವಿದ್ದುದರಿಂದ ಮಗುವಿನ ತಾಯಿಯಾದ ಶಚಿದೇವಿಯು ತನ್ನ ಮಗನನ್ನು 'ನಿಮಾಯ್'  ಎಂದು ಕರೆಯಲು ಇಚ್ಛಿಸಿದರು.

ಮಗುವಾಗಿ ನಿಮಾಯ್ ತನ್ನ ಲೀಲೆಗಳನ್ನು ಒಬ್ಬ ಸಾಮಾನ್ಯ ಮಾನವನಂತೆ ಪ್ರಾರಂಭಿಸಿದನು ಮತ್ತು ತನ್ನ ಸ್ನೇಹಿತರೊಡನೆ ಗಂಗಾ ನದಿಯ ತೀರದಲ್ಲಿ ಆಡಲು ಇಚ್ಛಿಸುತ್ತಿದ್ದನು. ಎಲ್ಲಾ ಹುಡುಗರಂತೆ  ನಿಮಾಯ್ ಮತ್ತು ಅವನ ಸ್ನೇಹಿತರು ಆಗಾಗ್ಗೆ ತುಂಟಾಟವಾಡುತ್ತಿದ್ದರು. ಕಲವು ಸಲ ಹುಡುಗರು ಗಂಗಾ ನದಿಯ ತೀರಕ್ಕೆ ಧ್ಯಾನಕ್ಕಾಗಿ ಬರುವ ಯೋಗಿಗಳ ಮೇಲೆ ನೀರನ್ನು ಸಹ ಹಾರಿಸುತ್ತಿದ್ದರು. ಆದರೆ ನಿಮಾಯ್‌ಯ ತುಂಟತನಕ್ಕೆ ಅವನನ್ನು ಗದರಿಸಲು ಬಂದ ಹಿರಿಯರು, ನಿಮಾಯ್‌ಯ ಚಾಣಾಕ್ಷ ಚರ್ಯೆಗಳಿಗೆ ಮೋಡಿ ಹೋಗುತ್ತಿದ್ದರು. ಎಲ್ಲರೂ ನಿಮಾಯ್‌ಯನ್ನು ತಮ್ಮ ಸ್ವಂತ ಮಗನಂತೆ ಪ್ರೀತಿಸುತ್ತಿದ್ದರು. ತನ್ನ ಐದನೇ ವರುಷದ ವಯಸ್ಸಿನಲ್ಲಿ ನಿಮಾಯ್‌ಯನ್ನು ಗಂಗಾದಾಸ ಪಂಡಿತನ ಶಾಲೆಗೆ ದಾಖಲಿಸಲಾಯಿತು ಅಲ್ಲಿ ಅವನು ಕೇವಲ ಎರಡು ವರುಷ ಅವಧಿಯಲ್ಲಿ ಸಂಸ್ಕೃತದ ಮೇಲೆ ಸಂಪೂರ್ಣ ಪ್ರಭುತ್ವ ಪಡೆದನು. ತದನಂತರ ನಿಮಾಯ್ ಮನೆಯಲ್ಲಿ ವಿದ್ಯಾಭ್ಯಾಸ ಮುಂದುವರೆಸಿದನು ಮತ್ತು ತನ್ನ ಹತ್ತನೇ ವರುಷ ವಯಸ್ಸು ತಲಪುವುದರೊಳಗೆ  ಒಬ್ಬ ದೊಡ್ಡ ಪಂಡಿತನಾಗಿ ಪ್ರಖ್ಯಾತಿ ಪಡೆದು 'ನಿಮಾಯ್ ಪಂಡಿತ'  ಎಂದು ಪ್ರಸಿದ್ಧನಾದನು.

# ಶ್ರೀ ಚೈತನ್ಯ

ನಿಮಾಯ್‌ಗೆ ವಿಶ್ವರೂಪ ಎಂಬ ಅಣ್ಣನಿದ್ದನು. ಅವನು ನ್ಯಾಸಿಯಾಗುತ್ತೇನೆಂದು ಮನೆಯನ್ನು ಬಿಟ್ಟು ಹೋದನು. ಇದು ಜಗನ್ನಾಥ ಮಿಶ್ರ ಮತ್ತು ಶಚಿದೇವಿಗೆ ಒಂದು ಭಯಂಕರ ಆಘಾತವಾಗಿ ಪರಿಣಮಿಸಿತು, ಆದರೆ ನಿಮಾಯ್ ತನ್ನ ಎಂದಿನ ರೀತಿಯಲ್ಲಿ, ದುಃಖದಲ್ಲಿದ್ದ ತನ್ನ ತಂದೆ ತಾಯಿಯರಿಗೆ ಪ್ರೀತಿಯನ್ನು ತೋರುತ್ತ ಸಮಾಧಾನ ಮಾಡಿದನು. ತನ್ನ ಹಿರಿ ಮಗನನ್ನು ಕಳೆದುಕೊಂಡ ಸ್ವಲ್ಪ ಸಮಯದಲ್ಲೇ ಜಗನ್ನಾಥ ಮಿಶ್ರರು ತಮ್ಮ ದೇಹವನ್ನು ಬಿಟ್ಟು ಪತ್ನಿಯನ್ನು ವಿಧವೆಯನ್ನಾಗಿಸಿದರು. ಕೇವಲ ನಿಮಾಯ್ ಒಬ್ಬನೇ ಅವರ ತಾಯಿಯನ್ನು ನೋಡಿಕೊಳ್ಳುವ ಪರಿಸ್ಥಿತಿ ಉಂಟಾಯಿತು.

ತನ್ನ ತಾಯಿಯ ಕೋರಿಕೆಯ ಮೇರೆಗೆ ನಿಮಾಯ್ ಹತ್ತಿರದ ಹಳ್ಳಿಯ ಸುಂದರ ಹುಡುಗಿಯಾದ ಲಕ್ಷ್ಮಿ ಪ್ರಿಯಾಳನ್ನು ವಿವಾಹವಾದನು. ಆದರೆ ತನ್ನ ಹದಿನೈದನೇ ಹುಟ್ಟುಹಬ್ಬ ಆಚರಿಸಿದ ಸ್ವಲ್ಪದರಲ್ಲೇ ನಿಮಾಯ್ ತನ್ನ ಹಳ್ಳೀಯಿಂದ ದೂರವಿದ್ದಾಗ ಹಾವು ಕಚ್ಚಿ ಲಕ್ಷ್ಮಿ ಪ್ರಿಯಾಳ ದೇಹಾಂತವಾಯಿತು. ತನ್ನ ತಾಯಿಯ ಕೋರಿಕೆಯ ಮೇರೆಗೆ ನಿಮಾಯಿಯು ಎರಡನೆಯ ಪತ್ನಿಯನ್ನು ಸ್ವೀಕರಿಸಿದರೂ ಈ ಮದುವೆಯು ಹೆಚ್ಚು ಕಾಲ ಉಳಿಯುವಂತಿರಲಿಲ್ಲ.

ಬಂದ ವರುಷಗಳಲ್ಲಿ ನಿಮಾಯ್ ಇಡೀ ಬಂಗಾಲದಲ್ಲಿಯೇ ಅತಿ ಪ್ರಸಿದ್ಧ ಪಂಡಿತನಾದನು. ದೊಡ್ಡ ಪಂಡಿತರೆಂಬ ನಿಮಾಯ್‌ಯ ಪ್ರಖ್ಯಾತಿಯು ಬಹಳ ಬೇಗನೇ ಕಾಶ್ಮೀರದ ದಿಗ್ವಿಜಯ ಪಂಡಿತನನ್ನು ಆಕರ್ಷಿಸಿತು, ಅವನು ನಿಮಾಯ್‌ಯನ್ನು ಚರ್ಚೆಗೆ ಆಹ್ವಾನಿಸಲು ನವದ್ವೀಪಕ್ಕೆ ಬಂದನು. ದಿಗ್ವಿಜಯ ಪಂಡಿತನು ಅಲ್ಲಿಯವರೆಗೆ ಭಾರತದ ಎಲ್ಲ ದೊಡ್ಡ ವಿದ್ವಾಂಸರುಗಳನ್ನು ಪರಾಭವಿಸಿದ್ದನು; ಯಾರೂ ಅವನನ್ನು ಎದುರಿಸುವಂತಿರಲಿಲ್ಲ. ಅವನು ವಿದ್ಯಾ ದೇವತೆಯಾದ ಸರಸ್ವತಿಯ ನೇರ ಕೃಪೆಯನ್ನು ಹೊಂದಿದಂತೆ ಕಂಡುಬರುತ್ತಿದ್ದನು.

# ಆಸ್ತಿಕತೆಯ ವಿಕಾಸ

ದಿಗ್ವಿಜಯ ಪಂಡಿತನು ನವದ್ವೀಪ ತಲುಪಿದ ನಂತರ, ತನ್ನ ಸ್ನೇಹಿತರು ಮತ್ತು ವಿದ್ಯಾರ್ಥಿಗಳ ಗುಂಪಿನೊಡನೆ ಇದ್ದ ನಿಮಾಯ್‌ಯನ್ನು ಗಂಗಾ ನದಿ ತೀರದ ಮೇಲೆ ಭೇಟಿಯಾದನು. ಗಂಗಾ ನದಿಯನ್ನು ಸ್ತುತಿಸುತ್ತ ಸಂಸ್ಕೃತದಲ್ಲಿ ೧೦೦ ಶ್ಲೋಕಗಳನ್ನು ರಚಿಸಲು ದಿಗ್ವಿಜಯನನ್ನು ನಿಮಾಯ್ ಗೌರವಪೂರ್ವಕವಾಗಿ ಕೋರಿದನು. ಕೋರಿಕೆಯ ಮೇಲೆ, ಹೇಗೆ ಒಂದು ದೊಡ್ಡ ಹದ್ದು ಆಕಾಶದ ಅತಿ ಎತ್ತರದಲ್ಲಿ ಅತಿ ಕುಶಲತೆಯಿಂದ ಸುಗಮವಾಗಿ ಹಾರುವುದೊ ಹಾಗೆಯೇ ದಿಗ್ವಿಜಯನು ಸ್ವಾಭಾವಿಕವಾಗಿ ಸಂಸ್ಕೃತದಲ್ಲಿ ೧೦೦ ಶ್ಲೋಕಗಳನ್ನು ಪಠಿಸಲು ಪ್ರಾರಂಭಿಸಿದನು. ನಿಶ್ಚಯವಾಗಿಯೂ, ದಿಗ್ವಿಜಯನು ಒಬ್ಬ ಪ್ರತಿಷ್ಠಿತ ಕವಿಯಾಗಿದ್ದನು.

ವೇಗವಾಗಿ ಚಲಿಸುವ ಗಾಳಿಯಂತೆ ದಿಗ್ವಿಜಯನ ನಾಲಿಗೆಯಿಂದ ಹೊರಬಂದ ಶ್ಲೋಕಗಳನ್ನು ಸ್ವಾಭಾವಿಕವಾಗಿ ಒಂದಾದ ನಂತರ ಒಂದರಂತೆ ದಿಗ್ವಿಜಯನು ರಚಿಸಿದ ರೀತಿಯನ್ನು ಕಂಡ ನಿಮಾಯ್‌ಯ ಸ್ನೇಹಿತರು ಆಶ್ಚರ್ಯಗೊಂಡರು. ಪ್ರತಿಯೊಂದು ಶ್ಲೋಕದ ರಚನೆಯೊಂದಿಗೆ ಅವನು ಗಂಗೆಯ ವೈಭವದ ಬಗ್ಗೆ ಹೊಸ ಹೊಸ ತಿಳುವಳಿಕೆಗಳನ್ನು ಕೊಡುತ್ತಿದ್ದನು. ದಿಗ್ವಿಜಯನು ತನ್ನ ಪಠನೆಯನ್ನು ಪೂರ್ಣಗೊಳಿಸುವವರೆಗು ನಿಮಾಯ್‌ಯು ಮೌನವಾಗಿ ಕುಳಿತು ಕೇಳಿಸಿಕೊಂಡನು. ತನ್ನ ವಿದ್ವತ್ಪೂರ್ಣ ಸಾಮರ್ಥ್ಯಕ್ಕೆ ದಿಗ್ವಿಜಯನನ್ನು ಪ್ರಶಂಸಿಸುತ್ತ ಹಾಗೆಯೇ ಅವನ ರಚನೆಯಲ್ಲಿದ್ದ ತಪ್ಪುಗಳನ್ನೂ ತೋರಿಸುತ್ತ ನಿಮಾಯ್ ಹೀಗೆ ಹೇಳಿದನು: ''ಸ್ವಾಮಿ, ನಿಮಗಿಂತಲೂ ದೊಡ್ಡ ಕವಿಗಳು ಇಡೀ ಪ್ರಪಂಚದಲ್ಲೇ ಯಾರೂ ಇಲ್ಲ. ನಿಮ್ಮ ರಚನೆಯು ಎಷ್ಟು ಕಠಿಣವಾಗಿದೆ ಎಂದರೆ ನಿಮ್ಮನ್ನು ಮತ್ತು ವಿದ್ಯಾ ದೇವತೆಯಾದ ಸರಸ್ವತಿದೇವಿಯನ್ನು ಬಿಟ್ಟರೆ ಅದನ್ನು ಅರ್ಥಮಾಡಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಆದಾಗ್ಯೂ,

ದಯಮಾಡಿ ೬೪ ನೇ ಶ್ಲೋಕದಲ್ಲಿನ ಐದು ತಪ್ಪುಗಳನ್ನು ಮತ್ತು ಐದು ಸಾಹಿತಿಕ ಅಲಂಕಾರಗಳನ್ನು ವಿವರಿಸುತ್ತೀರಾ''?

ದಿಗ್ವಿಜಯನು ದಿಗ್ಭ್ರಮೆಗೊಂಡನು! ನಿಮಾಯ್ ಏನು ಹೇಳುತ್ತಿರುವನು? ತನ್ನ ರಚನೆಯಲ್ಲಿ ತಪ್ಪುಗಳಿರಲು ಹೇಗೆ ಸಾಧ್ಯ? ಮತ್ತು ನಿಮಾಯ್ ಅಷ್ಟು ಬೇಗ ಹೇಗೆ ಶ್ಲೋಕಗಳನ್ನು ಕಂಠಪಾಠ ಮಾಡಿದನು? ಅದಗ್ಯೂ, ದಿಗ್ವಿಜಯನು ತನ್ನ ರಚನೆಯಲ್ಲಿ ಅಲಂಕಾರಗಳು ಮಾತ್ರವಿದ್ದು ಯಾವದೇ ತಪ್ಪುಗಳು ಇರುವುದನ್ನು ಒಪ್ಪಿಕೊಳ್ಳಲು ನಿರಾಕರಿಸಿದನು. ನಂತರ ದಿಗ್ವಿಜಯನ ಕೋರಿಕೆಯ ಮೇರೆಗೆ, ೬೪ನೇ ಶ್ಲೋಕದ, ಸ್ವತಃ ದಿಗ್ವಿಜಯನಿಗೆ ತಿಳಿದಿಲ್ಲದ ಐದು ಅಲಂಕಾರಗಳನ್ನು ನಿಮಾಯ್ ಕೊಂಡಾಡುತ್ತ ಅದೇ ಶ್ಲೋಕದ ವ್ಯಾಕರಣ ರಚನೆಯಲ್ಲಿರುವ ಐದು ತಪ್ಪುಗಳನ್ನೂ ಗುರುತಿಸಿದನು.

ನಿಮಾಯ್ ಇದನ್ನು ಸಾಹಿತ್ಯಕ ರಚನೆಗಳನ್ನು ನಿಯಂತ್ರಿಸುವ ಸಂಸ್ಕೃತ ವ್ಯಾಕರಣ ನಿಯಮಗಳ ಪ್ರಕಾರ ಮಾಡಿದನು. ನಿಮಾಯ್ ತನ್ನ ಮಾತುಗಳನ್ನು ಮುಕ್ತಾಯಗೊಳಿಸಿದ ನಂತರ ದಿಗ್ವಿಜಯನು ಅಕ್ಷರಶ: ಮಾತಿಲ್ಲದವನಾದನು . ಕೇವಲ ೧೬ ವರುಷ ವಯಸ್ಸಿನ ಬಾಲಕನ ಕೈಯಲ್ಲಿ ದಿಗ್ವಿಜಯ ಪಂಡಿತನುಪರಾಭವಗೊಂಡಿದ್ದನು. ಇದು ಹೇಗೆ ಸಾಧ್ಯವಾಯಿತು?

ಅಂದು ರಾತ್ರಿ ದಿಗ್ವಿಜಯನು ನಿದ್ರೆಯಲ್ಲಿರುವಾಗ ಅವನಿಗೆ ಒಂದು ಕನಸು ಬಿದ್ದಿತು. ವಿದ್ಯಾ ದೇವತೆಯಾದ ಸರಸ್ವತಿಯು ಅವನ ಕನಸಿಲ್ಲಿ ಬಂದು, ದಿಗ್ವಿಜಯ ''ನಿಶ್ಚಯವಾಗಿಯೂ ತನ್ನ ಪ್ರಿಯ ಶಿಷ್ಯನೇ ಆದರೂ ಇನ್ನೊಂದೆಡೆ ನಿಮಾಯ್ ತನ್ನ ನಿತ್ಯ ಸ್ವಾಮಿ'' ಎಂದು ಪ್ರಕಟಿಸಿದಳು. ನಂತರ ಸರಸ್ವತಿಯು ದಿಗ್ವಿಜಯನಿಗೆ ನಿಮಾಯ್‌ಯನ್ನು ಸಂಪರ್ಕಿಸಿ

# ಆಸ್ತಿಕತೆಯ ವಿಕಾಸ

ಅವನ ಶಿಷ್ಯನಾಗಲು ಕೋರಿದಳು. ದಿಗ್ವಿಜಯನ ಮೇಲಿನ ನಿಮಾಯಿಯ ವಿಜಯದ ಸಮಾಚಾರವು ಎಲ್ಲೆಡೆಯೂ ಹರಡಿತು. ನಿಮಾಯ್ ಈಗ ತನ್ನ ಕಾಲದ ಅತಿ ಪ್ರಮುಖ ಪಂಡಿತನಾದನು.

ಮಹಾಪ್ರಭುಗಳು ಸ್ವತಃ ದೊಡ್ಡ ವಿದ್ವಾಂಸರಾಗಿದ್ದರೂ, ಕೇವಲ ಜ್ಞಾನಕ್ಕೋಸ್ಕರವಾಗಿ ಜ್ಞಾನ ಪ್ರಾಪ್ತಿಯನ್ನು ಅವರು ಕಡ್ಡಾಯವಾಗಿ ವಿರೋಧಿಸಿದರು. ಅವರ ದೃಷ್ಟಿಯಲ್ಲಿ, ಜ್ಞಾನಾರ್ಜನೆಯಿಂದ ಭಗವಂತನ ಸೇವೆನಡೆಯುತ್ತಿದ್ದರೆ ಮಾತ್ರ ಜ್ಞಾನದ ಮೂಲಕ ಸತ್ಯವನ್ನು ಸಂಪರ್ಕಿಸಬಹುದು.

ಅದೇ ವರುಷದಲ್ಲಿ ನಿಮಾಯ್ ತನ್ನ ವಿದ್ಯಾರ್ಥಿಗಳ ಗುಂಪಿನೊಂದಿಗೆ ಗಯಾಗೆ ತೆರಳಿದನು ಮತ್ತು ಅಲ್ಲಿ ಅವನು ಪ್ರಸಿದ್ಧ ಗುರುಗಳಾದ ಈಶ್ವರ ಪುರಿಯವರನ್ನು ಭೇಟಿ ಮಾಡಿದನು. ಆ ಸಮಯದಲ್ಲಿ ನಿಮಾಯ್ ಈಶ್ವರ ಪುರಿಗಳಿಂದ ಅಧ್ಯಾತ್ಮಿಕ ದೀಕ್ಷೆಯನ್ನು ಪಡೆದನು ಮತ್ತು ಈ ದೀಕ್ಷೆಯು ಮಹಾಪ್ರಭುಗಳ ಜೀವನದಲ್ಲಿ ಒಂದು ಹೊಸ ತಿರುವನ್ನು ಪಡೆಯಿತು ಎಂದು ಅವರ ಜೀವನಚರಿತ್ರಕಾರರು ಗುರುತಿಸಿದ್ದಾರೆ.

ನಿಮಾಯ್ ಮಾಯಾಪುರಕ್ಕೆ ಹಿಂದಿರುಗಿದ ನಂತರ ಅವನಿಗೆ ಪಾಂಡಿತ್ಯ ಪ್ರಾಪ್ತಿಯಲ್ಲಿ ಯಾವ ಆಸಕ್ತಿಯೂಇರಲಿಲ್ಲ ಬದಲಾಗಿ ಅವನ ಮನಸ್ಸು ಅಧ್ಯಾತ್ಮಿಕ ವಿಷಯಗಳತ್ತ ತಿರುಗಿತು. ಹೊರನೋಟಕ್ಕೆ ಅವನು ಸಂಪ್ರದಾಯಿಕ ಕರ್ತವ್ಯಗಳಲ್ಲಿ ಆಸಕ್ತಿ ಕಳೆದುಕೊಂಡ ಹಾಗೆ ತೋರಿತು; ದೈವ ಪ್ರೇರಣೆಯಿಂದಲೋ ಎಂಬಂತೆ ಅಂದಿನಿಂದ ನಿಮಾಯ್ ಒಬ್ಬ ಹೊಸ ವ್ಯಕ್ತಿಯಾಗಿ ಪರಿವರ್ತನೆಗೊಂಡನು.
ಸಂಜೆ ವೇಳೆಗಳಲ್ಲಿ ನಿಮಾಯ್ ತನ್ನ ಆಪ್ತ ಅನುಯಾಯಿಗಳನ್ನು ಶ್ರೀವಾಸ ಠಾಕುರರ ಮನೆಯಲ್ಲಿ ಒಟ್ಟುಗೂಡಿಸಿ ಭಗವಂತನ ನಾಮಗಳನ್ನು

# ಶ್ರೀ ಚೈತನ್ಯ

ಸಾಮೂಹಿಕವಾಗಿ ಜಪಿಸುವ 'ಸಂಕೀರ್ತನೆ'ಯನ್ನು ಮಾಡುತ್ತಿದ್ದರು. ಆ ಸಂಕೀರ್ತನೆಗಳಲ್ಲಿ ನಿಮಾಯ್ ಕೆಲವು ಬಾರಿ ಭಗವತ್ ಪ್ರೇಮದ ಪರಮಾನಂದಪ್ರದ ಲಕ್ಷಣಗಳನ್ನು ಪ್ರದರ್ಶಿಸುತ್ತಿದ್ದರು ಮತ್ತು ಕೆಲವು ಬಾರಿ ಶ್ರೀ ಕೃಷ್ಣನಿಗೆ ಸಮಾನವಾದ ತಮ್ಮ ರೂಪವನ್ನು ಪ್ರಕಟಿಸುತಿದ್ದರು. ನಿಮಾಯ್‌ನ ಮರೆಯಾದ ವ್ಯಕ್ತಿತ್ವವು ಹೆಚ್ಚು ಪ್ರಚಲಿತವಾಗುತ್ತಿದ್ದ ಹಾಗೆ ಅವರು ಮಹಾಪ್ರಭು, ಮಹಾನ್ ಆಚಾರ್ಯ ಎಂದು ಸಂಬೋಧಿಸಲ್ಪಡುತ್ತಿದ್ದರು. ಮುಂದೆ ಸುಮಾರು ಎಂಟು ವರುಷಗಳ ಕಾಲ ಮಹಾಪ್ರಭುಗಳು ಮಾಯಾಪುರದಲ್ಲೇ ನೆಲೆಸಿದರು.

ದಿನದ ಸಮಯದಲ್ಲಿ ಮಹಾಪ್ರಭುಗಳು ಬಾಗಿಲಿನಿಂದ ಬಾಗಿಲಿಗೆ ಪ್ರತಿಯೊಬ್ಬ ಪುರುಷ, ಮಹಿಳೆ ಮತ್ತು ಮಕ್ಕಳು ಹರಿನಾಮವನ್ನು ಜಪಿಸುವಂತೆ ಕೋರಿಕೊಳ್ಳಲು ತಮ್ಮ ಅನುಯಾಯಿಗಳನ್ನು ಕಳುಹಿಸುತ್ತಿದ್ದರು. ಭಗವಂತನಿಂದ ಭಿನ್ನವಲ್ಲದ ಅವನ ನಾಮಗಳನ್ನು ಸುಮ್ಮನೆ ಜಪಿಸುವುದರಿಂದ ಒಬ್ಬನು ಸುಲಭವಾಗಿ ಭಗವಂತನೊಂದಿಗೆ ತನ್ನ ನಿತ್ಯ ಸಂಬಂಧವನ್ನು ಅರಿತುಕೊಳ್ಳಬಹುದು ಎಂದು ಮಹಾಪ್ರಭುಗಳು ಬೋಧಿಸಿದರು. ಜೀವೆರ ಸ್ವರೂಪ ಹಯ, ಕೃಷ್ಣೇರ ನಿತ್ಯ ದಾಸ: ಅಂದರೆ "ಎಲ್ಲ ಜೀವಿಗಳು ಕೃಷ್ಣನ ನಿತ್ಯ ಸೇವಕರು". ಎಂದು ಮಹಾಪ್ರಭುಗಳು ಹೇಳಿದರು. ಈ ರೀತಿಯಾಗಿ ಅವರು ಕಲಿಯುಗಕ್ಕೆ ಯುಗಧರ್ಮವಾದ ಹರೇ ಕೃಷ್ಣ ಮಹಾಮಂತ್ರ ಜಪವನ್ನು ಬೋಧಿಸಿದರು:

ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ

# ಆಸ್ತಿಕತೆಯ ವಿಕಾಸ

ಭಗವಂತನ ನಾಮಗಳನ್ನು ಜಪಿಸುವುದಕ್ಕೆ ಯಾವ ಕಠಿಣವಾದ ನಿಯಮಗಳೂ ಇಲ್ಲವೆಂದು ಮಹಾಪ್ರಭುಗಳು ತಮ್ಮ ಅನುಯಾಯಿಗಳಿಗೆ ಬೋಧಿಸಿದರು. ಸ್ಥಾನಮಾನವನ್ನು ಗಣನೆಗೆ ತೆಗೆದುಕೊಳ್ಳದೆ ಸಮಾಜದಲ್ಲಿ ಯಾರೆ ಆಗಿರಲಿ ಪ್ರತಿಯೊಬ್ಬನು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗಿರುವರು ಎಂದು ಅವರು ಸಾರಿದರು. ಅಧ್ಯಾತ್ಮಿಕ ಆಶೀರ್ವಚನಕ್ಕೆ ತಾವು ಮಾತ್ರ ಅರ್ಹರು ಎಂದು ಅದರ ಮೇಲೆ ಏಕಸ್ವಾಮ್ಯವನ್ನು ಹೊಂದಿದ್ದ ಜಾತಿಬ್ರಾಹ್ಮಣವರ್ಗದ ಕೆಲ ನಿರ್ದಿಷ್ಟ ಸದಸ್ಯರುಗಳು ಹಾಗೂ ವೇದ ಶಾಸ್ತ್ರಗಳ ಕೆಲ ವಿದ್ಯಾರ್ಥಿಗಳು ಮತ್ತು ಪ್ರಾಚಾರ್ಯರುಗಳಿಂದ ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗತೊಡಗಿತು. ಭಗವತ್ಪ್ರೇಮವು ಎಲ್ಲರ ಜನ್ಮಸಿದ್ಧ ಹಕ್ಕು ಎಂದು ಘೋಷಿಸುತ್ತ ಮಹಾಪ್ರಭುಗಳು ಭಗವಂತನ ನಾಮಗಳ ಜಪದ ಆಂದೋಲನವನ್ನು ಮಾನವ ಸಮಾಜದ ಎಲ್ಲ ವರ್ಗಗಳ ಉದ್ಧಾರಕ್ಕಾಗಿ ಪ್ರಾರಂಭಿಸಿದರೂ ಕೆಲ ಮೂರ್ಖರು ಅವರನ್ನು ಸಾಮಾನ್ಯ ಮನುಷ್ಯನಂತೆ ಭಾವಿಸಿ ಅವರನ್ನು ವಿರೋಧಿಸಿದರು.

ಈ ರೀತಿಯಾಗಿ ಆಲೋಚಿಸುತ್ತಾ ಮಹಾಪ್ರಭುಗಳು ಇಡೀ ವಿಶ್ವವನ್ನೇ ದಿವ್ಯ ಪ್ರೇಮದ ಜಾಲದಲ್ಲಿ ಹಿಡಿದಿಡುವ ಒಂದು ಉಪಾಯವನ್ನು ಮಾಡಿದರು. ಒಬ್ಬ ಸಂನ್ಯಾಸಿಯನ್ನು ನಾಸ್ತಿಕರೂ ಸೇರಿದಂತೆ ಎಲ್ಲರೂ ಗೌರವಿಸುತ್ತಿದ್ದರೆಂದು ಅರಿತ ಅವರು ಸಂನ್ಯಾಸ ಸ್ವೀಕರಿಸಲು ನಿರ್ಧರಿಸಿದರು. ಹಾಗಾಗಿ ತಮಗೆ ಗೌರವ ತೋರುವುದರಿಂದ ನಾಸ್ತಿಕರೂ ಕೂಡಾ ಲಾಭ ಪಡೆಯಬಹುದೆಂದು ಅಭಿಪ್ರಾಯಪಟ್ಟರು. ಒಂದು ಬಾರಿ ಮಹಾಪ್ರಭುಗಳು ತಾವು ಮಾಡಬೇಕೆಂದಿರುವ ಕಾರ್ಯದ ಬಗ್ಗೆ ನಿಶ್ಚಯಿಸಿದಮೇಲೆ ಯಾವ ಕಾರಣಕ್ಕೂ ತಮ್ಮ ನಿರ್ಧಾರದಿಂದ ಹಿಮ್ಮೆಟ್ಟಲಿಲ್ಲ.

# ಶ್ರೀ ಚೈತನ್ಯ

ಅವರ ೨೪ ನೇ ವಯಸ್ಸಿನ ಕೊನೆಯಲ್ಲಿ ಜನವರಿ ತಿಂಗಳ ಒಂದು ಮುಂಜಾನೆ ಮಹಾಪ್ರಭುಗಳು ಮನೆಗೆ ಮತ್ತು ಸಂಸಾರಕ್ಕೆ ವಿದಾಯ ಹೇಳಿದರು. ಅವರ ತಾಯಿಚೊಬ್ಬರನ್ನಲ್ಲದೆ ಇನ್ಯಾರ ಕಣ್ಣಿಗೂ ಬೀಳದೆ, ಅವರು ಈಜುತ್ತ ಗಂಗಾ ನದಿಯನ್ನು ದಾಟಿ ೨೫ ಮೈಲಿ ದೂರದಲ್ಲಿದ್ದ ಕಟ್ವಾಗೆ ಹೋಗಿ ಸೇರಿದರು. ಕಟ್ವಾದಲ್ಲಿ ಸಂನ್ಯಾಸಿಗಳಾಗಿದ್ದ ಕೇಶವ ಭಾರತಿಯವರ ಆಶ್ರಮಕ್ಕೆ ಹೋಗಿ ತನಗೆ ಸಂನ್ಯಾಸವನ್ನು ದಯಪಾಲಿಸಬೇಕೆಂದು ಕೋರಿದರು.

ಅಂತಹ ಕಾರ್ಯವನ್ನೇನಾದರು ಮಾಡಿದರೆ ಮಾಯಾಪುರದ ನಿವಾಸಿಗಳು ತಮ್ಮ ಮೇಲೆ ತೀವ್ರ ಕೋಪಗೊಳ್ಳುವರೆಂದು ಹೇಳುತ್ತ ಕೇಶವ ಭಾರತಿಗಳು ನಿರಾಕರಿಸಿದರಾದರೂ ಮಹಾಪ್ರಭುಗಳು ಅವರನ್ನು ಒತ್ತಾಯಿಸಿದರು.

ಈ ನಡುವೆ ಮಾಯಾಪುರದ ನಿವಾಸಿಗಳಿಗೆ ಮಹಾಪ್ರಭುಗಳು ಸಂನ್ಯಾಸ ಸ್ವೀಕರಿಸಲು ಕಟ್ವಾಗೆ ಹೋಗಿರುವ ಸುದ್ಧಿ ತಿಳಿದು ಅವರೆಲ್ಲರೂ ಬಹುಮಟ್ಟಿಗೆ ಹುಚ್ಚರಂತಾದರು. ನಡೆಯಬಹುದಾದ ಘೋರ ಘಟನೆಯನ್ನು ವಿರೋಧಿಸಲು ಎಲ್ಲರೂ ರಭಸದಿಂದ ಕಟ್ವಾಗೆ ಧಾವಿಸಿದರು. ಜನಸಮೂಹ ಸೇರಿದ ನಂತರ ಹಿಂಸೆಯ ಬೆದರಿಕೆ ಹಾಕಲು ಪ್ರಾರಂಭಿಸಿದರು. ಮಹಾಪ್ರಭುಗಳಿಗೇನಾದರು ಸಂನ್ಯಾಸ ಕೊಟ್ಟರೆ ಆಶ್ರಮವನ್ನು ಸುಟ್ಟು ನೆಲಸಮ ಮಾಡುವೆವೆಂದು ಕೇಶವ ಭಾರತಿಯವರಿಗೆ ಬೆದರಿಕೆಯೊಡ್ಡಿದರು. ಅಲ್ಲಿ ದು:ಖ ಮತ್ತು ಕೋಪದ ಮಿಶ್ರ ಭಾವನೆಗಳು ಕಾಣಿಸಿಕೊಂಡವು; ಯಾರಿಗೂ ಕೂಡಾ ತಮ್ಮ ಸುಂದರ ನಿಮಾಯ್ ತಲೆ ಕೂದಲು ತೆಗೆದು, ಕಾವಿ ಬಟ್ಟೆಯನ್ನು ಧರಿಸಿ ತಮ್ಮ ಹಳ್ಳಿಯನ್ನು ಎಂದೆಂದಿಗೂ ಬಿಟ್ಟು ಹೋಗುವುದನ್ನು ಊಹಿಸುವುದು ಸಾಧ್ಯವಾಗಲಿಲ್ಲ. ಮಹಾಪ್ರಭುಗಳ

# ಆಸ್ತಿಕತೆಯ ವಿಕಾಸ

ಅನುಯಾಯಿಗಳಿಗೆ ಇದರ ಕಲ್ಪನೆಯು ಸಹಿಸಲಸಾಧ್ಯವಾದದ್ದಾಗಿತ್ತು. ಯಾವಾಗ ಭಾವೋದ್ವೇಗಗಳು ತಮ್ಮ ಪರಮಾವಧಿ ತಲುಪಿದವೋ, ಆಗ ಮಹಾಪ್ರಭುಗಳು ಹರೇ ಕೃಷ್ಣ ಮಹಾಮಂತ್ರದ ಸಾಮೂಹಿಕ ಕೀರ್ತನೆಯನ್ನು ಪ್ರಾರಂಭಿಸಿದರು:

ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ

ಅದು ಬಹಳ ಭಾವನಾತ್ಮಕವಾದ ದೃಶ್ಯವಾಗಿತ್ತು. ಕೆಲವರು ಬಹಳ ನೋವಿನಿಂದ ಅಳುತ್ತಿದ್ದರು ಮತ್ತೆ ಕಲವರು ಪ್ರತಿಭಟಿಸುತ್ತ ತಮ್ಮ ಮುಷ್ಠಿಯಿಂದ ನೆಲಕ್ಕೆ ಜಜ್ಜುತ್ತಿದ್ದರು, ಇನ್ನೂ ಕೆಲವರು ದಿವ್ಯ ನಾಮದ ಧ್ವನಿಯನ್ನು ಆಲಿಸುತ್ತ ಸಂತೋಷದಿಂದ ಮೂರ್ಛೆಹೋಗುವರು. ಮೂರು ದಿನಗಳು ಹಗಲು ರಾತ್ರಿ ದಿವ್ಯ ನಾಮದ ಕೀರ್ತನೆ ಸತತವಾಗಿ ಮುಂದುವರೆಯಿತು. ಕೆಲವು ಬಾರಿ ಮಹಾಪ್ರಭುಗಳು ಸಂಕೀರ್ತನೆಯ ಮಧ್ಯದಲ್ಲಿ ನಿಂತು ಆನಂದದಿಂದ ಕುಣಿಯುವರು ಮತ್ತೆ ಕೆಲವುಸಲ ಭಾವೋನ್ಮಾದದಿಂದ ನೆಲದೆ ಮೇಲೆ ಉರುಳುತ್ತಿದ್ದರು. ಮೂರನೇ ದಿನ ಕೊನೆಯಲ್ಲಿ ಮಹಾಪ್ರಭುಗಳ ಸಂಕಲ್ಪ ಈಡೇರಿತು, ಅವರು ಕೇಶವ ಭಾರತಿಗಳ ಕೈಯಿಂದ ಸಂನ್ಯಾಸ ದಂಡವನ್ನು ಸ್ವೀಕರಿಸಿದರು. ಅವರನ್ನು 'ಶ್ರೀ ಕೃಷ್ಣ ಚೈತನ್ಯ' ಎಂದು ನಾಮಾಂಕಿಸಲಾಯಿತು.

ಇಡೀ ಪ್ರಪಂಚಕ್ಕೇ ಹುಚ್ಚುಹಿಡಿದಂತೆ ಭಾಸವಾಯಿತು. ಆ ಕ್ಷಣದ್ಸಲ್ಲಿ ನಡೆದ ಸಂಗತಿಯನ್ನು ಯಾರಿಂದಲೂ ನಂಬಲು ಸಾಧ್ಯವಾಗಲಿಲ್ಲ. ಭಗವತ್ಪ್ರೇಮದ ಹರ್ಷೋನ್ಮಾದದ ಕಣ್ಣೀರು ಮಹಾಪ್ರಭುಗಳ ಕಣ್ಣಿನಿಂದ ಹರಿಯಿತು ಮತ್ತು ಯಾರೆಲ್ಲರ ಮೇಲೆ ಆ ಕಣ್ಣೀರು ಬಿದ್ದಿತೋ, ಅವರೆಲ್ಲರೂ ಕೂಡಾ ಹರ್ಷೋನ್ಮಾದದ ಪ್ರೇಮದಲ್ಲಿ ಅಳಲು ಪ್ರಾರಂಭಿಸಿದರು.

# ಶ್ರೀ ಚೈತನ್ಯ

ಹಿಂದೆಂದಿಗಿಂತಲೂ ಹೆಚ್ಚಾಗಿ, ಈಗ ಇಡೀ ಜಗತ್ತನ್ನು ದಿವ್ಯ ಪ್ರೇಮದಿಂದ ಹರಸಲು ಮಹಾಪ್ರಭುಗಳು ಪ್ರೇರಿತರಾದರು. ತಮ್ಮ ಅನುಯಾಯಿಗಳ ಒಂದು ಸಣ್ಣ ಗುಂಪನ್ನೊಡಗೂಡಿ ಅವರು ತಕ್ಷಣವೆ ಜಗನ್ನಾಥ ಪುರಿಗೆ ಹೊರಟರು. ದಾರಿಯಲ್ಲಿ ಅವರನ್ನು ನೋಡಿದವರೆಲ್ಲರೂ ಆನಂದಭರಿತ ಪ್ರೇಮದ ಉಲ್ಲಾಸದಲ್ಲಿ ಮುಳುಗುತ್ತಿದ್ದರು ಮತ್ತು ತಾವು ಭೇಟಿ ಮಾಡಿದವರೆಲ್ಲರನ್ನೂ ಭಗವಂತನ ದಿವ್ಯ ನಾಮಗಳನ್ನು ಜಪಿಸುವಂತೆ ಕೇಳಿಕೊಳ್ಳುತ್ತಿದ್ದರು. ನಿಶ್ಚಯವಾಗಿ ಮಹಾಪ್ರಭುಗಳು ಎಲ್ಲರನ್ನು ಮತ್ತು ಎಲ್ಲವನ್ನು ಭಗವತ್ಪ್ರೇಮದಪ್ರವಾಹದಲ್ಲಿ ಮುಳುಗಿಸಿದ ಒಂದು ದೊಡ್ಡ ಸಾಗರದಂತಿದ್ದರು.

ಜಗನ್ನಾಥ ಪುರಿಯಲ್ಲಿ ಮಹಾಪ್ರಭುಗಳು ಅಂದಿನ ಕಾಲದ ಪ್ರಸಿದ್ಧ ತರ್ಕಶಾಸ್ತ್ರಿಗಳಾದ ಸಾರ್ವಭೌಮ ಭಟ್ಟಾಚಾರ್ಯರನ್ನು ದಿವ್ಯ ಪ್ರೇಮದ ಆಂದೋಲನದ ಅನುಯಾಯಿಯಾಗಿ ಪರಿವರ್ತಿಸಿದರು. ನಂತರ ಸಾರ್ವಭೌಮರು ಮಹಾಪ್ರಭುಗಳ ಪ್ರಮುಖ ಸಹಭಾಗಿಗಳಲ್ಲಿ ಒಬ್ಬರಾದರು. ಮಹಾಪ್ರಭುಗಳು ಅಲ್ಪ ಕಾಲ ಜಗನ್ನಾಥ ಪುರಿಯಲ್ಲೇ ಇದ್ದು ನಂತರ ದಕ್ಷಿಣ ಭಾರತದತ್ತ ಪ್ರಯಾಣಿಸಲು ನಿರ್ಧರಿಸಿದರು. ಮುಂದೆ ಎರಡು ವರುಷಗಳ ಕಾಲ ಅವರು ನಿರಂತರವಾಗಿ ಸಂಚರಿಸುತ್ತ ಹೋದಲೆಲ್ಲ ದಿವ್ಯ ಪ್ರೇಮದ ತಮ್ಮ ಸಿದ್ಧಾಂತವನ್ನು ಬೋಧಿಸಿದರು.

ಗೋದಾವರಿ ನದಿಯ ತೀರದ ಮೇಲೆ ಮಹಾಪ್ರಭುಗಳು ವಿದ್ಯಾನಗರದ ದಿವಾನರಾದ ರಾಮಾನಂದ ರಾಯರನ್ನು ಭೇಟಿ ಮಾಡಿ ಅನೇಕ ದಿನಗಳವರೆಗೆ ಪ್ರೇಮ ಭಕ್ತಿ, ಭಗವಂತನ ಶುದ್ಧ ಪ್ರೇಮಪುರ್ವಕ ಭಕ್ತಿಸೇವೆಯ ವಿಷಯವನ್ನು ಕುರಿತು ದಿವ್ಯಜ್ಞಾನಪೂರ್ಣ ಸಂವಾದಗಳನ್ನು ನಡೆಸಿದರು. ಆ ಸಂವಾದಗಳಲ್ಲಿ ಆಸ್ತಿಕತೆಯ ವಿಚಾರದ ಪರಾಕಾಷ್ಠೆಯನ್ನು ಪ್ರಕಟಗೊಳಿಸಲಾಯಿತು ಎಂದು

# ಆಸ್ತಿಕತೆಯ ವಿಕಾಸ

ಮಹಾಪ್ರಭುಗಳ ಅನುಯಾಯಿಗಳು ಸಮರ್ಥಿಸುತ್ತಾರೆ. ರಾಮನಂದ ರಾಯರು ಶ್ರೀ ಕೃಷ್ಣನ ಪರಮ ಭಕ್ತರು ಮತ್ತು ಮಹಾಪ್ರಭುಗಳು ತಮ್ಮ ಸಂಭಾಷಣೆಯ ಪ್ರತಿಯೊಂದು ಕ್ಷಣದಲ್ಲೂ ಅವರನ್ನು ಆತ್ಮದ ಸ್ವಭಾವದ ಬಗ್ಗೆ ಉತ್ತಮೋತ್ತಮ ಪರಿಪೂರ್ಣ ಸತ್ಯಗಳನ್ನು ಅರುಹುವಂತೆ ಕೋರಿಕೊಳ್ಳುತ್ತಿದ್ದರು. ಶ್ರೀಕೃಷ್ಣನ ವೃಂದಾವನದ ಲೀಲೆಗಳ ಸಂದರ್ಭದಲ್ಲಿ ಗೋಪಿಯರು ತೋರಿದ ದಿವ್ಯ ಪ್ರೇಮದ ಭಾವನೆಗಳೇ ಭಗವತ್ಪ್ರೇಮದ ಅತ್ಯುನ್ನತವಾದ ಅಧ್ಯಾತ್ಮಿಕ ಭಾವನೆಗಳು ಎಂಬುದು ಮಹಾಪ್ರಭುಗಳು ಮತ್ತು ರಾಮನಂದ ರಾಯರ ಸಂಭಾಷಣೆಯ ಪರಕಾಷ್ಠೆಯಲ್ಲಿ ಬಹಿರಂಗವಾಯಿತು ಎಂಬ ವಿಚಾರವನ್ನು ಮಹಾಪ್ರಭುಗಳ ಅನುಯಾಯಿಗಳು ಕಾಪಾಡಿಕೊಡು ಬಂದಿದ್ದಾರೆ. ಶ್ರೀಕೃಷ್ಣನಿಗೆ ಗೋಪಿಯರು ತಮ್ಮ ಪ್ರೇಮಪೂರ್ವಕ ಭಕ್ತಿ ಸೇವೆಯಲ್ಲಿ ಸದಾಚಾರದ ಸಾಮಾಜಿಕ ಪದ್ಧತಿ ಹಾಗೂ ನೈತಿಕತೆಗಳನ್ನೂ ಮೀರಿದ ಸಂಪೂರ್ಣ ಶರಣಾಗತಿಯ ಮತ್ತು ಶುದ್ಧ ಪ್ರೇಮದ ಅತ್ಯುನ್ನತವಾದ ಭಾವವನ್ನು ಪ್ರದರ್ಶಿಸಿದರು. ಹಾಗಾಗಿ ನೈತಿಕವಾಗಿ ಪ್ರಬಲರಾದವರು ಧಾರ್ಮಿಕ ಜೀವನಕ್ಕೆ ಒಳ್ಳೆಯ ಉದಾಹರಣೆಯಾಗಿರು ವರಾದರೂ, ಭಗವಂತನ ಶುದ್ಧ ಪ್ರೇಮದ ಭಕ್ತಿ ಸೇವೆಯಲ್ಲಿ ಸಾಂಪ್ರದಾಯಿಕ ಹಾಗೂ ನೈತಿಕ ವಿಧಿ ವಿಧಾನಗಳ ಕಟ್ಟುಪಾಡುಗಳನ್ನು ಮೀರಿನಿಂತ ಪ್ರೇಮದ ಇನ್ನೊಂದು ಉನ್ನತವಾದ ಲೋಕವಿದೆ ಮತ್ತು ಶುದ್ಧ ಪ್ರೇಮವು ನಿಶ್ಚಯವಾಗಿಯೂ ಕಟ್ಟಕಡೆಯದಾಗಿ ರಾಮಾನುಜ ಮತ್ತು ಮಧ್ವರ ಆಸ್ತಿಕತೆಯ ಸಿದ್ಧಾಂತಗಳಲ್ಲಿ ಕೂಡಾ ಕಂಡುಬರುವಂತಹ ಲೆಕ್ಕಾಚಾರಗಳಿಂದ ಮತ್ತು ನಿರ್ಣಯಗಳಿಂದ ಮುಕ್ತವಾಗಿರಬೇಕು ಎಂದು ಅವರು ಅಭಿಪ್ರಾಯಪಡುತ್ತಾರೆ.

ಅವರಿಬ್ಬರ ಚರ್ಚೆಗಳ ಮಧ್ಯೆ ರಾಮನಂದ ರಾಯ ಮತ್ತು ಮಹಾಪ್ರಭು ಇಬ್ಬರೂ ಭಾವೋನ್ಮಾದದ ಅತ್ಯಾನಂದದಲ್ಲಿ ಕಳೆದುಹೋಗುತ್ತಿದ್ದರು.

# ಶ್ರೀ ಚೈತನ್ಯ

ರಾಮಾನಂದ ರಾಯರಿಂದ ಅತೀವ ಸಂತುಷ್ಟರಾದ ಮಹಾಪ್ರಭುಗಳು ಅವರನ್ನು ಆಶೀರ್ವದಿಸಿ ಮುಂದೆ ಜಗನ್ನಾಥ ಪುರಿಯಲ್ಲಿ ಮತ್ತೆ ಭೇಟಿಯಾಗುವೆವೆಂದು ಹೇಳುತ್ತ ಅವರನ್ನು ಜಗನ್ನಾಥ ಪುರಿಗೆ ಹೋಗಲು ಕೋರಿದರು.

ಗೌಡೀಯ ವೈಷ್ಣವ ಸಿದ್ಧಾಂತದ ಪ್ರಕಾರ ಹಿಂದೆಂದೂ ಭಕ್ತಿಯನ್ನು ಸಾಧನ ಮತ್ತು ಅಂತಿಮ ಗುರಿಯಾಗಿ ವಿವರಿಸಲಿರಲಿಲ್ಲ. ಪ್ರೇಮವೇ ಪರಮ ಗುರಿಯೆನ್ನುವ ಮಹಾಪ್ರಭುಗಳ ಗುಣವರ್ಣನೆಯು ಸಿದ್ಧಾಂತ ಮತ್ತು ಧರ್ಮದ ಇತಿಹಾಸದಲ್ಲೇ ಅತಿ ಮಹತ್ವದ ಹೆಗ್ಗುರುತಾಗಿರುತ್ತದೆ. ಮಹಾಪ್ರಭುಗಳ ಪ್ರಕಾರ "ಸತ್ಯದ ಕೇಂದ್ರ ಭಗವಂತನಲ್ಲ, ಭಕ್ತನಿಗೆ ಮಾತ್ರವಲ್ಲ, ಭಗವಂತನಿಗೂ ಪ್ರೇಮವೇ ಸತ್ಯದ ಕೇಂದ್ರ. ಪ್ರೇಮವು ಇಬ್ಬರನ್ನೂ ನಿಯಂತ್ರಿಸುತ್ತದೆ ಅಥವಾ ಆಳುತ್ತದೆ. ಭಗವಂತನು ಸ್ವತ: ಪ್ರೀತಿಯ ಮೂರ್ತರೂಪನಾಗಿದ್ದರೂ ಅವನಲ್ಲಿ ಪ್ರೇಮಕ್ಕಾಗಿ ಸದಾ ವರ್ಧಿಸುತ್ತಿರುವ ಬಯಕೆಯಿದೆ . ಪ್ರೇಮವು ಒಂದು ಗುರುತ್ವಾಕರ್ಷಣೆಯ ಬಲದಂತೆ ಎರಡೂ ಕಡೆ ಕೆಲಸ ಮಾಡುತ್ತದೆ; ಭಕ್ತನನ್ನು ಭಗವಂತನೆಡೆಗೆ ಮತ್ತು ಭಗವಂತನನ್ನು ಭಕ್ತನೆಡೆಗೆ ಸೆಳೆಯುತ್ತದೆ".

ಮಹಾಪ್ರಭುಗಳು ತಮ್ಮ ಯಾತ್ರೆಯನ್ನು ಮುಂದುವರೆಸುತ್ತ ತಿರುಪತಿ, ಶ್ರೀರಂಗಂ, ಅಹೋಬಲಂ ಮತ್ತು ಚಿದಂಬರಂ ನಂತಹ ದಕ್ಷಿಣ ಭಾರತದ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿದರು. ಕೂರ್ಮಕ್ಷೇತ್ರವೆಂಬ ಜಾಗದಲ್ಲಿ ಮಹಾಪ್ರಭುಗಳು ವಾಸುದೇವ ಎಂಬ ಕುಷ್ಟರೋಗಿಯನ್ನು ಸುಮ್ಮನೆ ತಮ್ಮ ಕೈಗಳ ಸ್ಪರ್ಷದಿಂದ ಗುಣಪಡಿಸಿದ ಒಂದು ಚಮತ್ಕಾರವನ್ನು ಪ್ರದರ್ಶಿಸಿದರು. ದಿನದಲ್ಲಿ ಸಂಚರಿಸುತ್ತ ಪ್ರತಿ ರಾತ್ರಿಯನ್ನು ಬೇರೆ ಬೇರೆ ತಿರ್ಥಕ್ಷೇತ್ರಗಳಲ್ಲಿ ಕಳೆಯುತ್ತ ಮಹಾಪ್ರಭುಗಳು ಕನ್ಯಾಕುಮಾರಿಯವರೆಗೂ ಹೋದರು. ಅಲ್ಲಿಂದ

# ಆಸ್ತಿಕತೆಯ ವಿಕಾಸ

ಅವರು ಪುನಃ ಉತ್ತರದಿಕ್ಕಿನೆಡೆಗೆ ಪ್ರಯಾಣಿಸಿ ಕೊನೆಗೆ ಜಗನ್ನಾಥ ಪುರಿಗೆ ಹಿಂದಿರುಗಿದರು.

ಪುರಿಯಲ್ಲಿ ಸ್ವಲ್ಪ ದಿನಗಳು ಕಳೆದ ನಂತರ ಮಹಾಪ್ರಭುಗಳು ಶ್ರೀಕೃಷ್ಣನ ಕ್ಷೇತ್ರವಾದ ವೃಂದಾವನಕ್ಕೆ ಭೇಟಿ ನೀಡಲು ನಿರ್ಧರಿಸಿದರು. ಬಲಭದ್ರ ಭಟ್ಟಚಾರ್ಯರೆಂಬ ಒಬ್ಬ ಸೇವಕನನ್ನು ತಮ್ಮೊಂದಿಗೆ ಕರೆದುಕೊಂಡು ಅವರು ಯಮುನಾ ನದಿ ತೀರದುದ್ದಕ್ಕೂ ಸಂಚರಿಸಿ, ಝಾಡಖಂಡ ಅರಣ್ಯದ ಮುಖಾಂತರ ಹೋಗುವಾಗ ಕಾಡು ಮೃಗಗಳಾದ ಹುಲಿಗಳು ಮತ್ತು ಜಿಂಕೆಗಳಂತಹ ಪ್ರಾಣಿಗಳು ಪರಸ್ಪರ ಸ್ವಾಭಾವಿಕ ವೈರತ್ವವನ್ನು ಮರೆತು ನರ್ತಿಸಿ ಅಪ್ಪಿಕೊಳ್ಳುವಂತೆ ಮಾಡಿದರೆಂದು ಬಲಭದ್ರನ ದಿನಚರಿಯ ಪುಸ್ತಕದಿಂದ ತಿಳಿದುಬರುತ್ತದೆ.

ಮಹಾಪ್ರಭುಗಳು ವೃಂದಾವನ ತಲುಪುತ್ತಿದ್ದ ಹಾಗೆ ಇನ್ನಿತರ ಕ್ಷೇತ್ರಗಳಲ್ಲಿ ತೋರಿದ ತಮ್ಮ ಭಾವೋನ್ಮಾದಪೂರ್ಣ ಕೀರ್ತನೆಯನ್ನು ಮತ್ತು ನರ್ತನವನ್ನು ಇಲ್ಲಿಯೂ ಪ್ರದರ್ಶಿಸಿದರು ಮತ್ತು ಸಾವಿರಾರು ಜನ ಅವರ ದರ್ಶನ ಪಡೆಯಲು ದಿನನಿತ್ಯ ಬರುತ್ತಿದ್ದರು.

ಮಹಾಪ್ರಭುಗಳು ತಮ್ಮ ದಿವ್ಯ ದೃಷ್ಟಿಯ ಮೂಲಕ ಕಳೆದ ಐದು ಸಾವಿರ ವರುಷಗಳಿಂದ ಕಳೆದುಹೋಗಿದ್ದ ವೃಂದಾವನದಲ್ಲಿ ಶ್ರೀಕೃಷ್ಣನು ಮೆರೆದ ಲೀಲೆಗಳ ಸ್ಥಳಗಳನ್ನು ಬೆಳಕಿಗೆ ಪ್ರಕಟಪಡಿಸಿದರು ಅಲ್ಲದೇ ಮಹಮ್ಮದಿಯರ ಒಂದು ದೊಡ್ಡ ಗುಂಪನ್ನು ಕುರಾನ್‌ನಿಂದ ಬೋಧಿಸುತ್ತ ಶ್ರೀಕೃಷ್ಣನ ಭಕ್ತರನ್ನಾಗಿ ಪರಿವರ್ತಿಸಿದರು.

ಮುಂದೆ ಅವರ ನೇತೃತ್ವದಲ್ಲಿ ಅವರ ಪ್ರಮುಖ ಶಿಷ್ಯರುಗಳು ಶ್ರೀಮಂತ ವ್ಯಕ್ತಿಗಳ ಸಹಾಯದಿಂದ ವೃಂದಾವನದ ಎಲ್ಲಾ ಸ್ಥಳಗಳಲ್ಲಿ

ಭೂಶೋಧನೆ ನಡೆಸಿ ಶ್ರೀಕೃಷ್ಣನ ಲೀಲೆಗಳ ದಿವ್ಯ ಸ್ಥಳಗಳಲ್ಲಿ ದೇವಸ್ಥಾನಗಳನ್ನು ಸ್ಥಾಪಿಸಿದರು. ಇಂದಿಗೂ ಈ ದೇವಾಲಯಗಳು ಆ ಪವಿತ್ರ ಕ್ಷೇತ್ರದಲ್ಲಿ ಸೇವೆಯ ಪ್ರಮುಖ ತಾಣಗಳಾಗಿವೆ.

ವೃಂದಾವನದಿಂದ ಜಗನ್ನಾಥ ಪುರಿಗೆ ಹಿಂದಿರುಗುವಾಗ ಮಹಾಪ್ರಭುಗಳು ಅಲಹಾಬಾದ್‌ನಲ್ಲಿ ಕೆಲಕಾಲ ಇದ್ದು, ರೂಪ ಗೋಸ್ವಾಮಿಯವರಿಗೆ ಭಕ್ತಿ ಸೇವೆಯ ಪ್ರಕ್ರಿಯೆಗಳ ಬಗ್ಗೆ ಬೋಧಿಸಿದರು ಮತ್ತು ಆಧ್ಯಾತ್ಮಿಕತೆಯ ಕುರಿತು ವಿವರವಾಗಿ ಬೋಧಿಸಿದ ನಂತರ ಅವರನ್ನು ಭಕ್ತಿಯ ವಿಜ್ಞಾನದ ಕುರಿತು ಪುಸ್ತಕಗಳನ್ನು ಬರೆಯಲು ಮತ್ತು ಶ್ರೀಕೃಷ್ಣನ ಲೀಲೆಗಳ ಸ್ಥಳಗಳನ್ನು ಶೋಧಿಸಲು ವೃಂದಾವನಕ್ಕೆ ಕಳುಹಿಸಿದರು.

ಆಲಹಾಬಾದ್‌ನಿಂದ ಮಹಾಪ್ರಭುಗಳು ವಾರಾಣಾಸಿಗೆ ತೆರಳಿ ರೂಪ ಗೋಸ್ವಾಮಿಯವರ ಅಣ್ಣನಾದ ಸನಾತನ ಗೋಸ್ವಾಮಿಯವರನ್ನು ಭೇಟಿ ಮಾಡಿದರು. ಗಂಗಾ ನದಿಯ ತೀರದ ಮೇಲೆ ಮಹಾಪ್ರಭುಗಳು ಸನಾತನ ಗೋಸ್ವಾಮಿಯವರಿಗೆ ರಹಸ್ಯವಾದ ಆಧ್ಯಾತ್ಮಿಕ ವಿಷಯಗಳ ಕುರಿತು ಉಪದೇಶಿಸಿದರು ಮತ್ತು ಒಂದು ತಿಂಗಳು ಕಳೆದ ನಂತರ ಅವರನ್ನು ತನ್ನ ಸಹೋದರನೊಂದಿಗೆ ಜೊತೆಗೂಡಲು ವೃಂದಾವನಕ್ಕೆ ಕಳುಹಿಸಿದರು.

ಮುಂದೆ ಈ ಇಬ್ಬರು ಸಹೋದರರು ಮತ್ತು ಅವರ ಸೋದರಳಿಯರಾದ ಜೀವ ಗೋಸ್ವಾಮಿಯವರು, ಇನ್ನಿತರರೊಂದಿಗೆ ಜೊತೆಗೂಡಿ ಮಹಾಪ್ರಭುಗಳ ಪರಮಾರ್ಥ ವಿದ್ಯೆಗೆ ವೇದ ಶಾಸ್ತ್ರಗಳ ಹಿನ್ನೆಲೆಯನ್ನು ಹೊಂದಿದ ಸಾಹಿತ್ಯದ ಆಧಾರವನ್ನು ಸ್ಥಾಪಿಸಿದರು.

# ಆಸ್ತಿಕತೆಯ ವಿಕಾಸ

ಮಹಾಪ್ರಭುಗಳು ಹೋದಲ್ಲೆಲ್ಲ, ಬಹಳ ಪ್ರಖ್ಯಾತರಾದ ವಾರಾಣಾಸಿಯ ಪ್ರಕಾಶಾನಂದಸರಸ್ವತಿಯವರಂತಹ ಅದ್ವೈತವಾದಿಗಳು ಅವರ ಸಾರ್ವಜನಿಕ ನೃತ್ಯ ಮತ್ತು ಭಗವನ್ನಾಮದ ಕೀರ್ತನೆಯ ವಿರುದ್ಧ ಪ್ರಬಲ ಆಕ್ಷೇಪಣೆಯನ್ನು ತೋರಿದರು ಮತ್ತು ಆಗಿನ ಸಮಯದಲ್ಲಿ ಏಕೈಕ ಅತಿ ಪ್ರಮುಖ ವೈದಿಕ ಸಾಹಿತ್ಯವೆಂದು ಪರಿಗಣಿಸಲಾದ ವೇದಾಂತ ಸೂತ್ರದ ನಿಜವಾದ ಅರ್ಥವನ್ನರಿಯದ ಮಾಹಾಪ್ರಭುಗಳು ಒಬ್ಬ ದಾರಿ ತಪ್ಪಿದ ಭಾವುಕ ವ್ಯಕ್ತಿ ಎಂದು ನಿರ್ಧರಿಸಿದ್ದರು. ವೇದಾಂತ ಸೂತ್ರದ ಮೇಲಿನ ಶಂಕರರ ಭಾಷ್ಯಗಳನ್ನು ಅಧ್ಯಯನ ಮಾಡುವುದೇ ಒಬ್ಬ ಸನ್ಯಾಸಿಯ ಏಕ ಮಾತ್ರ ಕರ್ತವ್ಯವೆಂಬುದು ಅವರ ವಾದವಾಗಿತ್ತು. ಪಾರಮಾರ್ಥಿಕ ಭಾವನೆಗಳ ಕಲ್ಪನೆಯಿಲ್ಲದೇ ಅವರು ಮಹಾಪ್ರಭುಗಳ ನರ್ತನೆ ಮತ್ತು ಕೀರ್ತನೆಗಳನ್ನು ಲೌಕಿಕ ಭಾವನೆಗಳ ಪ್ರದರ್ಶನವೆಂದು ಊಹಿಸಿಕೊಂಡರು.

ಮಹಾರಾಷ್ಟ್ರದ ಒಬ್ಬ ಬ್ರಾಹ್ಮಣನ ಅಹ್ವಾನದ ಮೇರೆಗೆ ಮಹಾಪ್ರಭುಗಳು ಪ್ರಕಾಶಾನಂದ ಸರಸ್ವತಿ ಮತ್ತು ಅವರ ಒಂದು ಸಾವಿರ ಅನುಯಾಯಿಗಳನ್ನು ಭೇಟಿ ಮಾಡಿದರು. ಆ ಸಭೆಯನ್ನು ಪ್ರವೇಶಿಸುತ್ತಿದ್ದ ಹಾಗೆ ಮಹಾಪ್ರಭುಗಳು ತಮ್ಮ ಸ್ವಾಭಾವಿಕ ನಮ್ರತೆಯಿಂದ ಎಲ್ಲರ ಹೃದಯ ಗೆದ್ದರು. ಸಭೆ ಸೇರಿದ್ದ ಜನರೆಲ್ಲರು ಮಹಾಪ್ರಭುಗಳ ದೇಹದಿಂದ ಪ್ರಜ್ವಲಿಸುತ್ತಿದ್ದ ಕಾಂತಿಯು(ಬ್ರಹ್ಮನ್) ಹೊರಚಿಮ್ಮುವುದನ್ನು ಕಂಡರು. ಪ್ರಕಾಶಾನಂದರು ವೇದಾಂತ ವಿಷಯಗಳನ್ನು ಕುರಿತು ಮಹಾಪ್ರಭುಗಳಿಗೆ ನಾನಾವಿಧದ ಪ್ರಶ್ನೆಗಳನ್ನು ಹಾಕಿದರು ಮತ್ತು ಮಹಾಪ್ರಭುಗಳು ಆ ಪ್ರಶ್ನೆಗಳಿಗೆ ಒಂದೊಂದಾಗಿ ಉತ್ತರಿಸುತ್ತ ಬಂದರು. ಕೇವಲ ಪರೋಕ್ಷವಾದ ಅರ್ಥವನ್ನು ನೀಡುವ ಶಂಕರಾಚಾರ್ಯರ ವೇದಾಂತದ ಮೇಲಿನ ಭಾಷ್ಯವು ತಮಗೆಂದೂ ತೃಪ್ತಿಯನ್ನು ತಂದಿರಲಿಲ್ಲ ಎಂದು ಪ್ರಕಾಶಾನಂದರು

ಚರ್ಚೆ ಮುಕ್ತಾಯಗೊಂಡ ನಂತರ ಒಪ್ಪಿಕೊಂಡರು. ಮಹಾಪ್ರಭುಗಳ ಉತ್ತರಗಳನ್ನು ಕೇಳಿದ ನಂತರ, ಶಂಕರರ ವ್ಯಾಖ್ಯಾನವು ಸುಮ್ಮನೆ ಪದಗಳ ಮೋಡಿಯ ಮೇಲೆ ಆಧರಿತವಾಗಿರುವುದೆಂದು ತಮಗೆಲ್ಲರಿಗೂ ಈಗ ಅರಿವಾಯಿತು ಎಂದು ಅವರು ಹೇಳಿದರು. ಅಂದಿನಿಂದ ಮಹಾಪ್ರಭುಗಳು ವಾರಾಣಾಸಿಯಿಂದ ಹೊರಡುವ ತನಕ ಪ್ರಕಾಶಾನಂದ ಸರಸ್ವತಿ ಮತ್ತು ಅವರ ಅನುಯಾಯಿಗಳು ಮಹಾಪ್ರಭುಗಳ ಜೊತೆಗೂಡಿ ಅವರ ಸಂಕೀರ್ತನೆಯಲ್ಲಿ ಪಾಲ್ಗೊಂಡರು.

ವೇದಾಂತ ಸೂತ್ರದ ಮೇಲಿನ ವ್ಯಾಖ್ಯಾನದ ಅವಶ್ಯಕತೆಯಿಲ್ಲ ಏಕೆಂದರೆ ಅದರ ಲೇಖಕರಾದ ವ್ಯಾಸದೇವರು ಆಗಲೇ ತಮ್ಮದೇ ಆದ ವ್ಯಾಖ್ಯಾನವನ್ನು ಶ್ರೀಮದ್ ಭಾಗವತದ ರೂಪದಲ್ಲಿ ಬರೆದಿದ್ದಾರೆ ಎಂಬುದು ಮಹಾಪ್ರಭುಗಳ ನಿಲುವಾಗಿತ್ತು.

ನಿಷ್ಠೆಯಿಂದ ಮಾಡುವ ಭಾಗವತದ ಅಧ್ಯಯನವು, "ಅದ್ವೈತ ವೇದಾಂತದ ನೀರಸ ಹಾಗೂ ಭಾವರಹಿತ ಸ್ಥಿತಿಗೆ ಬದಲಾಗಿ, ಭಗವತ್ ಸಾಕ್ಷಾತ್ಕಾರದ ಮತ್ತು ಅಲೌಕಿಕವಾದ ಭಾವದ ಅತುನ್ನತ ಸ್ಥಿತಿಯನ್ನು ನೀಡುತ್ತದೆ" ಎಂದು ಮಹಾಪ್ರಭುಗಳು ಪ್ರತಿಪಾದಿಸಿದರು. ಸಾಮಾನ್ಯವಾಗಿ ಶಂಕರರ ಅನುಯಾಯಿಗಳು ಅದ್ವೈತ ವೇದಾಂತವನ್ನು (ಅದ್ವೈತವಾದ–ಆತ್ಮವು ದೇವನೊಂದಿಗೆ ಒಂದಾಗುವುದು) ಆಸ್ತಿಕತೆಯ ಅತ್ಯುನ್ನತವಾದ ಜ್ಞಾನವೆಂದು ನಂಬುತ್ತಾರೆ. ಭಾಗವತವು ಅಚಿಂತ್ಯಭೇದಾಭೇದ ತತ್ವವನ್ನು ಪ್ರತಿಪಾದಿಸುತ್ತದೆ, ಅಂದರೆ ಪರಮ ಸತ್ಯವು ಅಂತಿಮವಾಗಿ ಏಕಕಾಲದಲ್ಲಿ ಮತ್ತು ಊಹಾತೀತವಾಗಿ ಏಕ ಮತ್ತು ಭಿನ್ನವಾಗಿರುವುದು, ಆತ್ಮವು ಭಗವಂತನ ಭಿನ್ನಾಂಶವಾಗಿರುವುದು, ಆದರೆ ಒಂದು ಅಥವಾ ಅನೇಕ ಬದ್ಧಾತ್ಮಗಳು ಒಟ್ಟುಸೇರಿದರೂ ಭಗವಂತನಿಗೆ ಪೂರ್ಣ ಪ್ರಮಾಣದಲ್ಲಿ (ಗುಣಾತ್ಮಕವಾಗಿ

ಸಮಾನವಿರುವುದು ಆದರೆ ಪ್ರಮಾಣದಲ್ಲಿ ಭಿನ್ನವಾಗಿರುವುದು) ಸಮಾನವಾಗುವುದು ಎಂದಿಗೂ ಸಾಧ್ಯವಿಲ್ಲ ಎಂಬುದು ಮಹಾಪ್ರಭುಗಳ ಬೋಧನೆಯಾಗಿತ್ತು.

ಚಂದ್ರನ ಬೆಳಕು ಹೇಗೆ ಚಂದ್ರನ ನಿರಾಕಾರ ವಿಸ್ತೃತ ಕಾಂತಿಯೊ ಹಾಗೆಯೇ ಅದ್ವೈತವಾದಿಗಳ ಆನಂದ–ಬ್ರಹ್ಮನ್ ಭಗವಂತನ ನಿರಾಕಾರ ವಿಸ್ತೃತ ಕಾಂತಿಯು ಎಂದು ಮಹಾಪ್ರಭುಗಳು ಬೋಧಿಸಿದರು. ಆನಂದ ಬ್ರಹ್ಮನ್‌ನಲ್ಲಿ ರಸ ಸುಪ್ತವಾಗಿ, ಸ್ಥಿಮಿತವಾಗಿ ಮತ್ತು ಚಲನಾರಹಿತವಾಗಿರುವುದು. ನಿಜವಾದ ಅರ್ಥದಲ್ಲಿ ಅದು ರಸವಲ್ಲ. ಇನ್ನೊಂದೆಡೆ "ರಸ–ಬ್ರಹ್ಮನ್ ಚಲನಾತ್ಮಕ, ಅವಿಶ್ರಾಂತ, ಕಾಂತಿಯುತ, ಸದಾ ಪ್ರವಹಿಸುವ ಮತ್ತು ನಿರಂತರ ವೃದ್ಧಿಸುವಂತಹದು. ಅದು ಆಶ್ಚರ್ಯಕರವಾಗಿ ನೂತನವಾಗಿಯೂ ಮತ್ತು ಸ್ವಾದಿಷ್ಟವಾಗಿಯೂ ಇದ್ದು ಪ್ರತಿ ಕ್ಷಣವೂ ತನ್ನನ್ನೂ ಮೀರಿದ ರಸ ಪ್ರಜ್ಞೆಯ ಹೊಸ ಮಟ್ಟಗಳಿಗೆ ಹಾದುಹೋಗುತ್ತಿರುವುದು".

ಕೆಲ ಕಾಲ ಸಂಚರಿಸುತ್ತ ಮತ್ತು ಭಗವನ್ನಾಮದ ಪ್ರಚಾರ ಮಾಡುತ್ತಾ ಅಂತಿಮವಾಗಿ ಮಹಾಪ್ರಭುಗಳು ಜಗನ್ನಾಥ ಪುರಿಗೆ ಹಿಂದಿರುಗಿದರು. ತೋಟ ಗೋಪಿನಾಥ ದೇವಾಲಯದಲ್ಲಿ ಸಂಕೀರ್ತನೆ ನಡೆಯುತ್ತಿರುವಾಗ, ಈ ಭೂಮಿಯ ಮೇಲೆ ತಮ್ಮ ಲೀಲೆಯ ೪೮ ನೇ ವರುಷದಲ್ಲಿ, ನಶ್ವರ ಮನುಜರ ದೃಷ್ಟಿಯಿಂದ ಮರೆಯಾಗುವ ತನಕ ತಮ್ಮ ಜೀವನದ ಉಳಿದ ೧೮ ವರುಷಗಳನ್ನು ಜಗನ್ನಾಥ ಪುರಿಯಲ್ಲಿ ಕಳೆದರು. ಮಹಾಪ್ರಭುಗಳ ಜೀವನಚರಿತ್ರ ಬರಹಗಾರರು ಮಹಾಪ್ರಭುಗಳ ಕೊನೆಯ ೧೮ ವರುಷಗಳನ್ನು ಹೀಗೆಂದು ವ್ಯಾಖ್ಯಾನಿಸಿದ್ದಾರೆ– ಅವರು ಅನೇಕ ಜನ ಅನುಯಾಯಿಗಳಿಂದ ಸುತ್ತುವರೆದಿದ್ದರು, ಅವರೆಲ್ಲರೂ ಭಕ್ತಿಯ ಪರಮೋಚ್ಚ ಸ್ಥಾನದಲ್ಲಿದ್ದರು, ನಡತೆಯಲ್ಲಿ ಮತ್ತು ಪಾಂಡಿತ್ಯದಲ್ಲಿ,

# ಶ್ರೀ ಚೈತನ್ಯ

ನಿಶ್ಚಲವಾದ ಧಾರ್ಮಿಕ ತತ್ವಗಳಲ್ಲಿ ಮತ್ತು ರಾಧಾ–ಕೃಷ್ಣರಿಗೆ ಅಧ್ಯಾತ್ಮಿಕ ಪ್ರೀತಿಯಲ್ಲಿ ಅವರು ಸಮಾನ್ಯ ಜನರಿಗಿಂತ ಪ್ರತ್ಯೇಕವಾಗಿದ್ದರು.

ಐತಿಹಾಸಿಕವಾಗಿ ಮಹಾಪ್ರಭುಗಳು ಪ್ರತ್ಯೇಕ ವ್ಯಕ್ತಿಗಳಿಂದ ಪ್ರತ್ಯೇಕವಾಗಿ ಆದರಿಸಲ್ಪಟ್ಟಿದ್ದಾರೆ. ಮಹಾಪ್ರಭುಗಳ ನಿಕಟ ಅನುಯಾಯಿಗಳು ಅವರನ್ನು ಪರಾತ್ಪರ ಸತ್ಯನಾದ ಶ್ರೀಕೃಷ್ಣನೆಂದು ಸ್ವೀಕರಿಸಿದ್ದಾರೆ. ಇನ್ನಿತರರು ಅವರನ್ನು ಭಕ್ತ ಅವತಾರ, ಭಗವತ್ಪ್ರೇಮವನ್ನು ಹಂಚಲು ಬಂದ ಒಂದು ದಿವ್ಯ ಅವತಾರವೆಂದು ಭಾವಿಸುತ್ತಾರೆ. ಆದರೆ ಅವರ ಜೀವನ ಮತ್ತು ಬೋಧನೆಗಳ ಸಂಪರ್ಕಕ್ಕೆ ಬಂದ ಪಕ್ಷಪಾತರಹಿತ ಶುದ್ಧಮನಸ್ಸಿನವರೆಲ್ಲರೂ ಅವರನ್ನು ಒಬ್ಬ ಉದಾತ್ತ ಸ್ವಭಾವದ ಪವಿತ್ರ ಬೋಧಕಹಾಗೂ ಮಹಾನ್ ಆಚಾರ್ಯರೆಂದು ಒಪ್ಪಿಕೊಂಡಿದ್ದಾರೆ.

ಭಾರತದ ಒಂದು ಪ್ರತ್ಯೇಕ ವರ್ಗದ ಮನುಜರನ್ನು ಮುಕ್ತಗೊಳಿಸಲು ಮಹಾಪ್ರಭು ಈ ಲೋಕದಲ್ಲಿ ಅವತರಿಸಲಿಲ್ಲ, ನಿಜವಾಗಿ ಹೇಳುವುದಾದರೆ ಪ್ರಪಂಚದ ಎಲ್ಲ ದೇಶಗಳ ಎಲ್ಲ ಜೀವಿಗಳನ್ನು ಅವರ ಸನಾತನ ಧರ್ಮವಾದ ಭಗವತ್ ಪ್ರೇಮದ ಭಾವೋನ್ಮಾದದ ಶುದ್ಧ ಮತ್ತು ಶ್ರೇಷ್ಠ ಮಟ್ಟಕ್ಕೆ ಉದ್ಧರಿಸುವ ಉದ್ದೇಶ ಅವರದಾಗಿತ್ತು. ಭಾರತದ ಆಧ್ಯಾತ್ಮಿಕ ಗುರುಗಳ ಬೋಧನೆಗಳನ್ನು ಅಧ್ಯಯನ ಮಾಡಿದ ನಂತರ ಹೀಗೆಂದು ಹೇಳುತ್ತಾರೆ ಏನೆಂದರೆ ಸಾವಿರಾರು ವರುಷಗಳ ಅವಧಿಯಲ್ಲಿ ಅವರೆಲ್ಲರೂ ಸೇರಿ ಒಂದು ಆಸ್ತಿಕತೆಯ ಬೆಳವಣಿಗೆಯನ್ನು ನಿರೂಪಿಸುತ್ತಾರೆ. ಬುದ್ಧ, ಶಂಕರ, ರಾಮಾನುಜ, ಮಧ್ವ ಮತ್ತು ಮಹಾಪ್ರಭು, ಇವರ್ಯಾರ ನಡುವೆಯೂ ಪರಸ್ಪರ ವಿರೋಧ ಕಾಣಿಸುವುದಿಲ್ಲ, ಪ್ರತಿಯೊಬ್ಬರೂ ಅಂತಿಮ ಸತ್ಯದ ಮಾರ್ಗದಲ್ಲಿ ಜ್ಞಾನೋದಯದ ಒಂದು ಪ್ರತ್ಯೇಕವಾದ ಹಂತವನ್ನು ಪ್ರತಿನಿಧಿಸುತ್ತಾರೆ. ಶಾಂತಿ ಎಂದರೆ ಏನೆಂಬುದನ್ನು ನಾವು ಅರಿಯಲೇಬೇಕಾದರೆ ನಮ್ಮ

# ಆಸ್ತಿಕತೆಯ ವಿಕಾಸ

ಈಗಿನ ಸ್ವಾರ್ಥ ಮನೋಭಾವನೆಯ, ಅನ್ಯವಿಚಾರಗಳಲ್ಲಿ ಮಗ್ನವಾಗಿರುವ ಮನಸ್ಸಿನ ನೆಲೆಯನ್ನು ದಾಟಬೇಕೆಂದು ಅವರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಬುದ್ಧನಿಂದ ಪ್ರಾರಂಭವಾಗಿ ಮಹಾಪ್ರಭುಗಳಬೋಧನೆಗಳಲ್ಲಿ ಉಚ್ಛ್ರಾಯಸ್ಥಿತಿಯನ್ನು ಕಾಣುವ, ಆಸ್ತಿಕತೆಯ ವಿಕಾಸದಲ್ಲಿ ಒಂದು ನಿರಂತರತೆಯನ್ನು ಈ ಆಚಾರ್ಯರುಗಳ ಬೋಧನೆಗಳಲ್ಲಿ ನಾವು ಸ್ಪಷ್ಟವಾಗಿ ಕಾಣಬಹುದು ಎಂದು ಈ ಲೇಖಕರು ಅಭಿಪ್ರಾಯಪಡುತ್ತಾರೆ. “ಈ ಪ್ರಪಂಚದಲ್ಲಿ ಸದಾ ದು:ಖದ ಅಸ್ತಿತ್ವವಿದೆ, ದು:ಖಕ್ಕೆ ಕಾರಣವಿದೆ, ದು:ಖದಿಂದ ಪಾರಾಗಬಹುದು, ದು:ಖದಿಂದ ಪಾರಾಗಿ ಮುಕ್ತರಾಗುವುದಕ್ಕೆ ಒಂದು ಪ್ರಕ್ರಿಯೆಯಿದೆ” ಎಂಬ ಬುದ್ಧನ ನಾಲ್ಕು ಉದಾತ್ತ ಸತ್ಯಗಳು, ಜೀವನದಲ್ಲಿ ಸಾಮಾನ್ಯವಾಗಿ ಯಾವುದನ್ನು ಸತ್ಯವೆಂದು ಸ್ವೀಕರಿಸುತ್ತೇವೆಯೋ, ಅದಕ್ಕಿಂತಲೂ ಉನ್ನತವಾದ ಗುರಿಯೊಂದಿದೆ, ಉನ್ನತವಾದ ಪ್ರಾಪ್ತಿಯೊಂದಿದೆ ಎಂಬ ಪೀಠಿಕೆಗೆ ಅಡಿಪಾಯ ಹಾಕಿದೆ. ಬುದ್ಧನ ಪೀಠಿಕೆಯನ್ನು ಮುಂದುವರೆಸುತ್ತಾ ಶಂಕರರು, ಐಹಿಕ ಅಸ್ತಿತ್ವವನ್ನು ಸುಮ್ಮನೆ ನಿರಾಕರಿಸುವುದು ವಾಸ್ತವ ಸತ್ಯವಲ್ಲ, ನಿತ್ಯಾತ್ಮನು ವಾಸ್ತವ ಸತ್ಯವೆಂಬ ತತ್ತ್ವವನ್ನು ಸ್ಥಾಪಿಸಿದರು. ನಂತರ ರಾಮಾನುಜರು ಬ್ರಹ್ಮನ್‌ನನ್ನು ಪಾರಮಾರ್ಥಿಕ ಗುಣಲಕ್ಷಣಗಳಿಂದ ವಿವರಿಸುತ್ತ ಶಂಕರರು ಬೋಧಿಸಿದ ಅದ್ವೈತವಾದದ ನಿರಾಕಾರ ಸಿದ್ಧಾಂತವನ್ನು ಆಸ್ತಿಕತೆಯ ಸಾಕಾರಸಿದ್ಧಾಂತಕ್ಕೆ ವಿಕಸಿಸಿದರು. ಅವರು ಜೀವಾತ್ಮನ ಸ್ವಾಭಾವಿಕ ಗುಣವನ್ನು ಆಧಾರವಾಗಿಟ್ಟುಕೊಂಡು ಒಂದು ಭಕ್ತಿಯ ಆಂದೋಲನವನ್ನು ಆರಂಭಿಸಿದರು. ಆತ್ಮ ಮತ್ತು ಪರಮಾತ್ಮಗಳ ನಿತ್ಯ ಅಸ್ತಿತ್ವವು ಭಕ್ತಿಯ ಕಾರ್ಯ ಸಂಬಂಧಿತ ಮೂಲಧಾತುಗಳೆಂದು ಒತ್ತಿಹೇಳುತ್ತ ಮಧ್ವರು ರಾಮಾನುಜರ ಸಿದ್ಧಾಂತವನ್ನು ಮುಂದುವರಿಸಿದರು.

# ಶ್ರೀ ಚೈತನ್ಯ

ಬುದ್ಧ, ಶಂಕರ, ರಾಮಾನುಜ ಮತ್ತು ಮಧ್ವರ ಬೋಧನೆಗಳಲ್ಲಿ ಕಂಡ ಈ ಬೆಳವಣಿಗೆಯನ್ನು ಕೆಲವು ಸಲ ಒಂದು ಮಾವಿನ ಮರದ ಬೆಳವಣಿಗೆಗೆ ಹೋಲಿಸಲಾಗಿದೆ. "ಬೀಜದ ರೂಪವಾಗಿ ಬುದ್ಧನ ನಾಲ್ಕು ಉದಾತ್ತ ಸತ್ಯಗಳು ಶಂಕರರಿಂದ ಮೊಳಕೆಯೊಡೆದು ರಾಮಾನುಜ ಮತ್ತು ಮಧ್ವರ ಸಿದ್ಧಾಂತಗಳಲ್ಲಿ ಕೊಂಬೆ ಮತ್ತು ರಂಬೆಗಳಾಗಿ ಬೆಳೆದು, ಎಲ್ಲವು ಭಾರತದ ತತ್ವಶಾಸ್ತ್ರದಲ್ಲಿನ ಆಸ್ತಿಕತೆಯ ವಿಕಾಸದ ಬೆಳವಣಿಗೆಯ ಮುಖ್ಯ ಹಂತಗಳಾಗಿವೆ. ಆಸ್ತಿಕತೆಯೆಂಬ ಮರವು ಪರಿಪಕ್ವತೆಗೆ ತಲುಪಿದಾಗ ಅದು ಫಲಿಸಿದ ಭಗವತ್ಪ್ರೇಮದ ರೂಪದಲ್ಲಿರುವ ಹಣ್ಣುಗಳನ್ನು ಪ್ರಪಂಚಕ್ಕೆ ಉಚಿತವಾಗಿ ಹಂಚುವ ಮತ್ತು ಆ ಹಣ್ಣುಗಳನ್ನು ಫಸಲಿಸುವ ಒಬ್ಬ ಪಾರಮಾರ್ಥಿಕ ತೋಟದ ಮಾಲಿಗೆ ಚೈತನ್ಯ ಮಹಾಪ್ರಭುಗಳನ್ನು ಹೋಲಿಸಲಾಗಿದೆ. ಮಹಾಪ್ರಭುಗಳು ಭಗವತ್ಪ್ರೇಮದ ಆ ಹಣ್ಣುಗಳ ತಾವೂ ಸ್ವಾದಿಸುತ್ತ, ತಮ್ಮ ಸ್ವಂತ ಉದಾಹರಣೆಯಿಂದ ಇನ್ನಿತರರಿಗೂ ಅದನ್ನು ಸ್ವಾದಿಸುವ ಪರಿಯನ್ನು ಬೋಧಿಸುತ್ತಾರೆ"

ಮಹಾಪ್ರಭುಗಳು ಪ್ರಸ್ತುತಪಡಿಸಿದ ಪ್ರೇಮವು ಆತ್ಮಾರ್ಪಣೆಯದ್ದಾಗಿಲ್ಲದೆ ವಿಸ್ಮರಣೆಯದ್ದಾಗಿದ್ದು ಸ್ವಯಂ ಪ್ರೇಮವೇ ಶ್ರೀಮತಿ ರಾಧಾರಾಣಿಯ ವ್ಯಕ್ತಿಗತರೂಪವಾಗಿ ಭಗವಂತ ಮತ್ತು ಭಕ್ತರಿಬ್ಬರಿಗೂ ಕೇಂದ್ರವಾಗುತ್ತದೆ.

ಪರಾತ್ಪರ ಸತ್ಯವನ್ನು ಅರಿಯಲು ಹಂಬಲಿಸುತ್ತಿರುವ ಎಲ್ಲ ಪರಿಶುದ್ಧ ಜೀವಾತ್ಮಗಳಿಗೆ ಮಹಾಪ್ರಭುಗಳ ದಿವ್ಯ ಪ್ರೇಮದ ಸಂಪ್ರದಾಯದ ಪ್ರತಿಪಾದಕ ಮತ್ತು ಮಹಾಪ್ರಭುಗಳಜೀವನಚರಿತ್ರಕಾರರಾದ ಶ್ರೀಲ ಭಕ್ತಿವಿನೋದ ಠಾಕೂರರುಒಂದು ಅಮೂಲ್ಯವಾದ ಸಲಹೆಯನ್ನು ನೀಡಿದ್ದಾರೆ,

# ಆಸ್ತಿಕತೆಯ ವಿಕಾಸ

"ಸತ್ಯದ ದೊಡ್ಡ ಶತ್ರುವಾದ ಪಕ್ಷಾಭಿಮಾನ, ತನ್ನ ದೇಶದ ಭಕ್ತಿಪರ ಪುಸ್ತಕಗಳಿಂದ ಸತ್ಯವನ್ನು ಸಂಗ್ರಹಿಸಲು ಮಾಡುವ ಜಿಜ್ಞಾಸಕನ ಎಲ್ಲ ಪ್ರಯತ್ನಗಳನ್ನು ಯಾವಾಗಲೂ ಭಂಗಗೊಳಿಸುತ್ತದೆ ಮತ್ತು ಪರಾತ್ಪರ ಸತ್ಯವು ತನ್ನ ಹಳೆಯ ಧಾರ್ಮಿಕ ಪುಸ್ತಕದಲ್ಲಿ ಬಿಟ್ಟರೆ ಇನ್ನೆಲ್ಲೂ ಇಲ್ಲ ಎಂದು ನಂಬುವಂತೆ ಮಾಡುತ್ತದೆ. ಆದ್ದರಿಂದ ಆತ್ಮಸಾಕ್ಷಾತ್ಕಾರ ಮಾರ್ಗದ ಅನುಯಾಯಿ ಯಾವಾಗಲೂ ಒಂದು ವ್ಯಾಪಕವಾದ, ಸಭ್ಯವಾದ, ಉದಾರವಾದ, ಪ್ರಾಮಾಣಿಕವಾದ, ಸಹಾನುಭೂತಿಯುಳ್ಳ ಮತ್ತು ಎಲ್ಲದಕ್ಕಿಂತ ಮಿಗಿಲಾಗಿ ಆ ಮಾರ್ಗದಲ್ಲಿ ಯಶಸ್ಸು ಪ್ರಾಪ್ತಿಯಾಗುವ ಅತಿ ಮಹತ್ವದ ಭರವಸೆಯನ್ನು ಪಡೆಯಲು ಪಕ್ಷಪಾತವಿಲ್ಲದ ಮಾರ್ಗವನ್ನು ಅನುಸರಿಸಬೇಕು"

# ಆಸ್ತಿಕತೆಯ ವಿಕಾಸ

ಗೋಸಾಯಿ ಪಬ್ಲಿಷರ್ಸ್ ಸಂಸ್ಥೆಯು, ಶ್ರೀರಂಗಪಟ್ಟಣದ ದೊಡ್ಡ ಗೋಸಾಯಿ ಘಟ್ಟದಲ್ಲಿ ಸ್ಥಾಪಿತವಾಗಿರುವ
ಪ್ರಮುಖ ಆಧ್ಯಾತ್ಮಿಕ ಕೇಂದ್ರವಾದ ಶ್ರೀ ನರಸಿಂಘ ಚೈತನ್ಯ ಮಠದ ಒಂದು ಅಂಗಸಂಸ್ಥೆಯಾಗಿರುತ್ತದೆ.

ಶ್ರೀ ನರಸಿಂಘ ಚೈತನ್ಯ ಮಠದ ಸಂಸ್ಥಾಪಕ ಆಚಾರ್ಯರಾದ ಶ್ರೀಪಾದ ಭಕ್ತಿ ಗೌರವ ನರಸಿಂಘ ಮಹಾರಾಜರಿಂದ
೧೯೯೧ರಲ್ಲಿ ಸಂಸ್ಥಾಪಿಸಲ್ಪಟ್ಟ ಈ ಪ್ರಕಟಣಾಲಯವು, ವಿಶೇಷವಾಗಿ ೧೫ನೇ ಶತಮಾನದ ಪ್ರಮುಖ ದಾರ್ಶನಿಕರಾದ ಶ್ರೀ ಚೈತನ್ಯ ಮಹಾಪ್ರಭುಗಳಿಂದ ಪರಿಚಯಿಸಲ್ಪಟ್ಟು, ಗೌಡೀಯ ವೈಷ್ಣವ ಸಿದ್ಧಾಂತಕ್ಕೆ ಸಂಬಂಧಪಟ್ಟ ವೇದಾಂತ ಸಾಹಿತ್ಯ ಪುಸ್ತಕಗಳನ್ನು ಪ್ರಕಟಿಸುವ ಒಂದು ಪ್ರಮುಖ ಸಂಸ್ಥೆಯಾಗಿದೆ. ಗೌಡೀಯ ವೈಷ್ಣವ ಸಿದ್ಧಾಂತವು
ಶ್ರೀ ರಾಧಾಕೃಷ್ಣರ ಪ್ರೀತಿಪೂರ್ವಕ ಭಕ್ತಿಸೇವೆಯ ಮಾರ್ಗದ ಪ್ರಾಧಾನ್ಯತೆಯನ್ನು ಪ್ರತಿಪಾದಿಸುತ್ತದೆ.

ಗೋಸಾಯಿ ಪಬ್ಲಿಷರ್ಸ್ ಪ್ರಕಟಿಸುವ ಪುಸ್ತಕಗಳು ಶ್ರೀ ರಾಧಾಕೃಷ್ಣರ ಪ್ರೀತಿಪೂರ್ವಕ ಭಕ್ತಿಸೇವೆಯ ಮಾರ್ಗವನ್ನು ಅನುಸರಿಸುವ ಸಾಧಕರಿಗೆ ಹಾಗೂ ಈ ವಿಷಯದಲ್ಲಿ ಶ್ರದ್ಧೆ ಹಾಗೂ ಆಸಕ್ತಿಯನ್ನು ಹೊಂದಿರುವ ಎಲ್ಲ ವರ್ಗದ ಜನರಿಗೆ ಭಕ್ತಿ ಮಾರ್ಗದ ಬಗ್ಗೆ ಶಾಸ್ತ್ರಬದ್ಧ ಜ್ಞಾನವನ್ನು ಒದಗಿಸುವ ಜ್ಞಾನಸರೋವರಗಳಾಗಿವೆ.

ಪ್ರಸ್ತುತ ಆಂಗ್ಲ ಭಾಷೆಯಲ್ಲಿ ಹಲವು ಪುಸ್ತಕಗಳನ್ನು ಪ್ರಕಟಿಸಿರುವ ಈ ಸಂಸ್ಥೆಯು ಮುಂಬರುವ ದಿನಗಳಲ್ಲಿ
ಈ ಎಲ್ಲ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹೊರತರುವ ಯೋಜನೆಯನ್ನು ಹೊಂದಿದೆ.

ಈ ಪುಸ್ತಕವು ನಮ್ಮ ಸಂಸ್ಥೆಯ ಮೊದಲ ಕನ್ನಡ ಪ್ರಕಟಣೆಯಾಗಿದೆ

# ಶ್ರೀ ಚೈತನ್ಯ

ಪ್ರಕಟಣೆಗಳು

ಇನ್ ಸರ್ಚ್ ಆಫ್ ದ ಅಲ್ಟಿಮೇಟ್ ಗೋಲ್ ಆಫ್ ಲೈಫ್ – ಶ್ರೀಲ ಏ.ಸಿ ಭಕ್ತಿವೇದಾಂತ ಪ್ರಭುಪಾದ.

ಫ಼ಾಲೋ ದ ಏಂಜೆಲ್ಸ್ – ಶ್ರೀಲ ಭಕ್ತಿ ರಕ್ಷಕ ಶ್ರೀಧರ ದೇವ ಗೋಸ್ವಾಮಿ ಮಹಾರಾಜ

ಎನ್ಕೌಂಟರ್ಸ್ ವಿದ್ ಡಿವಿನಿಟಿ – ಶ್ರೀಲ ಭಕ್ತಿ ರಕ್ಷಕ ಶ್ರೀಧರ ದೇವ ಗೋಸ್ವಾಮಿ ಮಹಾರಾಜ

ಪ್ರಾಕೃತ ರಸ ಶತ ದೂಷಿಣಿ – ಶ್ರೀಲ ಭಕ್ತಿ ಸಿದ್ಧಾಂತ ಸರಸ್ವತಿ ಠಾಕೂರ

ಶ್ರೀ ಚೈತನ್ಯ ಸಾರಸ್ವತ ಪರಂಪರಾ – ಶ್ರೀಲ ಭಕ್ತಿ ಗೌರವ ನರಸಿಂಘ ಮಹಾರಾಜ

ಎವೊಲ್ಯೂಷನ್ ಆಫ್ ಥೀಸಮ್ – ಶ್ರೀಲ ಭಕ್ತಿ ಗೌರವ ನರಸಿಂಘ ಮಹಾರಾಜ

ಪ್ರಾಕೃತ ರಸ ಅರಣ್ಯಭೇದಿನಿ – ಶ್ರೀಲ ಭಕ್ತಿ ಗೌರವ ನರಸಿಂಘ ಮಹಾರಾಜ

ದ್ ಮೀನಿಂಗ್ ಆಫ್ ಸಂನ್ಯಾಸ – ಶ್ರೀಲ ಭಕ್ತಿ ಗೌರವ ನರಸಿಂಘ ಮಹಾರಾಜ

ವರ್ಡ್ಸ್ ಫ್ರಮ್ ದ ಗಾರ್ಡಿಯನ್ ಆಫ್ ಡಿವೋಷನ್

ಶ್ರೀ ಗಾಯತ್ರಿ ಮಂತ್ರಾರ್ಥ ದೀಪಿಕಾ

ಶ್ರೀ ಚೈತನ್ಯ ಕಥಾ

ದ ಫಿಲಾಸಫಿ ಆಫ್ ಶ್ರೀ ಚೈತನ್ಯ

ಶ್ರೀ ದಾಮೋದರ ಕಥಾ

ಶ್ರೀ ಉಪದೇಶಾಮೃತ

ಸಂಪರ್ಕ

http://www.gosai.com/chaitanya

chaitanyadasa@devavision.org

shyamasundaradas@gmail.com

ಅನಾದಿಕಾಲಗಳಿಂದ ಭಾರತದ ಪುಣ್ಯಪುರುಷರು ಆಧ್ಯಾತ್ಮಿಕ ಜ್ಞಾನದ ಸಂಸ್ಕಾರದ ಮೂಲಕ ಪರಾತ್ಪರ ಸತ್ಯವನ್ನು ಅರಿಯಲು ಪ್ರಯತ್ನಿಸಿದರು. ಕೆಲವರು ಬುದ್ಧನನ್ನು ಅನುಸರಿಸಿ ಅಹಿಂಸೆಯ ತತ್ತ್ವವನ್ನು ಪಾಲಿಸಿದರೆ, ಇನ್ನು ಕೆಲವರು ಪ್ರತಿಫಲಾಪೇಕ್ಷೆಯಿಂದ ಮಾಡುವ ಕರ್ಮಗಳನ್ನು ತ್ಯಜಿಸುವ ಶಂಕರಾಚಾರ್ಯರ ಅದ್ವೈತ ಸಿದ್ಧಾಂತವನ್ನು ಆರಿಸಿದರು. ಅಲೌಕಿಕ ಆಸ್ತಿಕತೆಯ ಕಡೆಗಿನ ಪ್ರಗತಿಯಲ್ಲಿ ರಾಮಾನುಜ ಮತ್ತು ಮಧ್ವರು, ತಾನು ಭಗವಂತನ ನಿತ್ಯಸೇವಕ ಎನ್ನುವ ತಿಳುವಳಿಕೆಯೇ ಜೀವನದ ಪರಮಗುರಿ ಎಂದು ಪರಿಗಣಿಸಿದರು. ಈ ಎಲ್ಲ ಸಿದ್ಧಾಂತಗಳು ಯುಗಾವತಾರವಾದ ಶ್ರೀ ಚೈತನ್ಯ ಮಹಾಪ್ರಭುಗಳು ಬೋಧಿಸಿದ, ಭಗವಂತನ ಪ್ರೇಮಪೂರ್ವಕ ಭಕ್ತಿಸೇವೆಯಲ್ಲಿ ಉಛ್ರಾಯತೆಯನ್ನು ಕಂಡವು.

ಗೋಸಾಯಿ ಪಬ್ಲಿಷರ್ಸ್